ಪ್ರಿ ೨. ಫೆ ೧ ಸ್.

ಘನವನ್ನು ಹೊಂದಿದ ನಮ್ಮ ಶ್ರೀಮತ್ ಮಹಾರಾಜಾ ಮೈಸೂರು ಸರ್ಕಾರದವರಿಂದ ನಿಯಮಿಸಲ್ಪಟ್ಟಿರುವ ದೇಶೀಯ ಪರೀಕ್ಷೆಗೆ ಹೋಗತಕ್ಕವರು ಚರಿತ್ರೆಯ ದೊಡ್ಡ ಪುಸ್ತಕಗಳನ್ನು ಸುಮ್ಮನೇ ಓದಿಕೊಂಡು ಹೋಗುವದ್ದರಿಂದ ಉಂಟಾಗುವ ತೊಂದರೆಯನ್ನು ತಪ್ಪಿಸಿ ಪ್ರಶ್ನೋತ್ತರ ರೂಪವಾಗಿ ಒಂದು ಚರಿತ್ರೆಯನ್ನು ರಚಿಸಬೇಕೆಂದು ನನ್ನ ಆಪ್ತರೂ ಮತ್ತೂ ಕೆಲವು ಜನ ಮಾಸ್ಟರುಗಳೂ ಸಹ ಅಪ್ಪಣೆ ಕೊಡಿಸಿದ್ದರಿಂದ ಈ ಕಾರ್ಯದಲ್ಲಿ ಪ್ರವರ್ತಿಸಿ ಅನೇಕ ಚರಿತ್ರ ಗ್ರಂಥಗಳಲ್ಲಿರತಕ್ಕ ಚಾತುರ್ಯ ಪ್ರಶ್ನೆಗಳ ಜೊತೆಗೆ ಇನ್ನೂ ಕೆಲವನ್ನು ಸೇರಿಸಿ ಬರದಿದೆ. ಮತ್ತು ಕಡೆಯಭಾಗದಲ್ಲಿ ಕರಾರುಗಳನ್ನು ವಿವರಿಸಿ ಅವು ಯಾವಾಗ ಯಾರ್ಯಾರಿಗೆ ಯಲ್ಲಿ ಹುಟ್ಟಿ ಹ್ಯಾಗೆ ಪರಿಣಮಿಸಿತೆಂಬದನ್ನು ಮುತ್ತಿಗೆಗಳನ್ನು ವಿವರಿಸಿ ಅವು ಯಾರಿಂದ ಯಲ್ಲಿ ಯಾಕೆ ಮುತ್ತಲ್ಪಟ್ಟು ಏನಾಯಿತೆಂಬದನ್ನೂ, ದಂಗೆಗಳನ್ನು ವಿವರಿಸಿ ಅವು ಯಾರಿಂದ ಯಾವಾಗ ಹುಟ್ಟಿ ಹ್ಯಾಗೆ ಕೊನೆಗಂಡಿತೆಂಬದನ್ನು, ಯುದ್ಧಗಳನ್ನೆಲ್ಲಾ ಒಂದೇಕಡೆ ವಿವರಿಸಿ ಅವರಲ್ಲಿ ಯಾರು ಯಾತಕ್ಕೋಸ್ಕರ ಯಾವಾಗ ದಂಡೆತ್ತಿದರು ಅದರ ಪರಿಣಾಮವೇನೆಂಬುವದನ್ನೂ ಸಹಾ ವಿಸ್ತರಿಸಿ ತಿಳಿಸಿರುವವಲ್ಲದೆ ಮುಖ್ಯವಾದ ಸಂವತ್ಸರಗಳನ್ನು ಅಂತ್ಯಭಾಗದಲ್ಲಿ ಬರದಿರುವೆನು.

ಆಪ್ತರ ಅಪ್ಪಣೆಗೆ ಕಟ್ಟುಬಿದ್ದು ಕೈಕೊಂಡಿರತಕ್ಕ ಈ ಕೃತಿಯಲ್ಲಿ ಅಜ್ಞಾನವಶಾತ್ ಏನಾದರೂ ತಪ್ಪು ಬರದಿದ್ದಲ್ಲಿ ತಿದ್ದಿ ಅದನ್ನು ನನಗೆ ತಿಳಿಸತಕ್ಕ ಬಗ್ಯೂ ಇದರಲ್ಲಿರತಕ್ಕ ಸಾದ್ಗುಣ್ಯ ವಿಶೇಷಗಳನ್ನು ತಮ್ಮ ಮಿತ್ರರಲ್ಲಿ ಪ್ರಚಾರಮಾಡತಕ್ಕ ಬಗ್ಯೂ ಸಹ ಘನವನ್ನು ಹೊಂದಿದ ನಮ್ಮ ದೇಶೀಯ ಪರೀಕ್ಷಾಧ್ಯಕ್ಷ ಸಮಾಜದವರಿಗೂ ಮತ್ತು ವಿದ್ವತ್ಸಂಜರಂಜಿತರಾದ ಸಮಸ್ತರಿಗೂ ಕೈಮುಗಿದು ಬೇಡಿಕೊಳ್ಳುವವಲ್ಲದೆ ತಮ್ಮ ಕೈಕೆಳಗಿನವರು ಮಾಡಿದ ಕೃತಿಯೆಂದು ಜರಿಯದೆ ಪ್ರೀತಿಯಿಂದ ಪುರಸ್ಕರಿಸತಕ್ಕ ಬಗ್ಯೆ ಮಾತ್ಸರ್ಯಗುಣರಹಿತರಾದ ಹುಜೂರ್ ನಮ್ಮ ಇಲಾಖಾ ಸೆಕ್ರೆಟರಿ ಸಾಹೇಬ್ ಬಹದ್ದೂರರವರಿಗೂ ಮತ್ತು ಹ. ನಮ್ಮ

ಡೆಪ್ಟಿ ಇನ್‌ಸ್ಪೆಕ್ಟರ್ ನಾದಮುನಿ ನಾಯಿಡರವರಿಗೂ ಒಂದೊಂದು ಪ್ರತಿಯನ್ನು ಕಾಣಿಕೆಯಾಗಿ ಇಟ್ಟಿದ್ದೇವೆ.

ಇದರಲ್ಲಿ ಮದ್ರಾಸ್, ಬಾಂಬೆ, ಮುಂತಾದ ಸ್ಥಳಗಳಲ್ಲಿ ಅನೇಕ ಪರೀಕ್ಷೆಗೆ ಕೊಟ್ಟಿದ್ದ ಪ್ರಶ್ನೆಗಳು ಸಂದರ್ಭಾನುಸಾರ ಸೇರಿದ್ದು ಹಾಗೆಯೇ ಎಲ್ಲಾ ಪ್ರಶ್ನೆಗಳೂ ಪರೀಕ್ಷೆಗೆ ಬರತಕ್ಕಂಥವುಗಳಾದ್ದರಿಂದಾ ಇದನ್ನು ಬರಿಯತಕ್ಕ ಕಾಲದಲ್ಲಿ ನಮಗೆ ಹುಟ್ಟಿದ ಉತ್ಸಾಹವು ಪ್ರೋತ್ಸಾಹಕರ ಪ್ರೇರಣೆಯೂ ಇದರಿಂದ ವಿದ್ಯಾರ್ಥಿಗಳು ಪೂರ್ಣ ಫಲಗ್ರಾಹಿಗಳಾಗಬಹುದೆಂಬ ನಂಬಿಕೆಯನ್ನು ಸೂಚಿಸುತ್ತವೆ.

ಏವಂಚ ಈ ಕೃತಿಯು ಪರೀಕ್ಷೆಗೆ ಓದತಕ್ಕವರಿಗೆ ಕೇವಲ ಅನುಕೂಲವಾಗಿಯೂ ಮತ್ತು ವಾರಕ್ಕೆ ಒಂದಾವರ್ತಿಯಾದರೂ ಇದನ್ನು ತಪ್ಪದೆ ಓದುತ್ತಾ ಬಂದಲ್ಲಿ ಚರಿತ್ರೆಯಲ್ಲಾ ಕೊನೆಗೆ 1 ಅಥವ 2 ಘಂಟೆಗಳ ಕಾಲದಲ್ಲಿಯೇ ಅವಗಹನೆಗೆ ತರತಕ್ಕದ್ದಾಗಿಯೂ ಇರುವದ್ದರಿಂದಾ ವಿದ್ವತ್ಪಕ್ಷಪಾತಿಗಳಾದವರು ಈ ಪುಸ್ತಕವನ್ನು ಸಂಗ್ರಹಿಸದೇ ಇರರೆಂದು ನಂಬಿರುವದಲ್ಲದೆ ಪರೀಕ್ಷಾಕಾಲದಲ್ಲಿ ಇದರಲ್ಲಿ ಬರದಿರತಕ್ಕ ಸಂಗತಿಗಳನ್ನೆ ವಿಸ್ತರಿಸಿ ಬರದಲ್ಲಿ ವಿದ್ಯಾರ್ಥಿಗಳು ಪೂರ್ಣ ಫಲಗ್ರಾಹಿಗಳಾಗಬಹುದೆಂದು ನಿಶ್ಚೈಸಿರುವೆವು. ಹಾಗೆ ಆದಲ್ಲಿ ಆಗ್ಯೆ ನಾವು ಕೈಕೊಂಡ ಶ್ರಮೆಯು ಸಾರ್ಥಕವಾಯಿತೆಂದು ಸಂತೋಷಿಸುವೆವು.

ಸಾರವತ್ತಾಗಿ ಸಂಗತಿಗಳುಳ್ಳದ್ದಾಗಿ ಸುಲಭಖರೀದಿಗೆ ದೊರೆಯುವ ಈ ಗ್ರಂಥವನ್ನು ಅಪೇಕ್ಷಿಸುವವರು ಈ ಕೆಳಗೆ ರುಜುಮಾಡಿರತಕ್ಕ ಯಾರಿಗಾದರೂ ಬರೆದು ತರಿಸಿಕೊಳ್ಳಬಹುದು.

ಗುರುಶಾಂತಪ್ಪ,
ಹೆಡ್ಮಾಸ್ಟರ್.
ತಾ॥ ಗೌ॥ ಕನ್ನಡಸ್ಕೂಲ್.
ಹಿರಿಯೂರು.

ಹೆಚ್. ಚಿದಂಬರಯ್ಯ,
ಪ್ಯೂಪಿಲ್ ಟೀಚರ್.
ತಾ॥ ಗೌ॥ ಕನ್ನಡಸ್ಕೂಲ್.
ಹಿರಿಯೂರು.

1889 ನೇ ಡಿಸೆಂಬರ್.

16.8.16

ಪ್ರಶ್ನೋತ್ತರ.

# ಚರಿತ್ರಚಿಂತಾಮಣಿ.

ಕಂ|| ಶಾರದೆಯಕರುಣಮಹಿಮ್ಮೆ | ಚಾರಿತ್ರದಿನೆಲಸಿಪಠಕರಿಗೆಶುಭಸುಖಮಂ ||
ತೋರಲಿಬುಧಜನಚಿತ್ತವು | ಸೇರುತಲೀ ಚರಿತ್ರ ಚಿಂತಾಮಣಿಯೋಳ್ ||

1. ಚರಿತ್ರೆಯನ್ನು ಅಭ್ಯಾಸ ಮಾಡೋಣದರಿಂದ ಫಲವೇನು?

ಚರಿತ್ರೆಯನ್ನು ಅಭ್ಯಾಸ ಮಾಡೋಣದರಿಂದ ಬಾಲಕರ ಆಲೋಚನಾ ಶಕ್ತಿಯು ಬಲಹೊಂದಿ ಕೃತಜ್ಞತೆ ಮುಂತಾದ ಸುಗುಣಗಳಿಂದ ನೀತಿವಂತರನ್ನಾಗಮಾಗುತ್ತದೆ.

2. ಭರತವರ್ಷ ಅಂದರೆ ಏನು? ಈ ಹೆಸರು ಇಂಡಿಯಾ ದೇಶಕ್ಕೆ ಯಾಕೆ ಬಂತು?

ಭರತವರ್ಷ ಅಂದರೆ ಭರತನರಾಜ್ಯವೆಂದರ್ಥ. ಈ ನಮ್ಮ ಇಂಡಿಯಾ ದೇಶವನ್ನು ಪೂರ್ವಕಾಲದಲ್ಲಿ ಸೂರ್ಯವಂಶದಲ್ಲಿ ಪ್ರಸಿದ್ಧನಾದ "ಭರತ ಮಹಾರಾಯ" ಆಳುತ್ತಿದ್ದದ್ದರಿಂದ ಈ ಹೆಸರು ಬಂತು.

3. ಇಂಡಿಯಾದ ಪೂರ್ವಕಾಲದ ನಿವಾಸಿಗಳು ಯಾರು?

ಖಾಂಡರು, ಬೀಲರು, ಸಂತಾಳರು, ತೋದರರೂ, ನಾಯರರೂ, ಮುಂತಾದವರು.

4. ಅವರಲ್ಲಿ ಯಾರ್ಯಾರು ಎಲ್ಲೆಲ್ಲಿ ಇದ್ದಾರೆ?

ಖಾಂಡರು ಮಧ್ಯಹಿಂದೂಸ್ಥಾನದಲ್ಲಿಯೂ, ಭಿಲ್ಲರು ರಾಜಪುಟಾಣದಲ್ಲಿಯೂ, ಸಂತಾಳರು ಬಂಗಾಳದಲ್ಲಿಯೂ, ತೋದರರು ಮತ್ತು ನಾಯರು ದಕ್ಷಿಣದಲ್ಲಿಯೂ ಇದ್ದಾರೆ.

5. ಪಂಚದ್ರಾವಿಡ ಭಾಷೆಗಳ್ಯಾವವು?

ತಮಿಳು, ಕನಡ, ತೆನುಗು, ಮಲೆಯಾಳಾ, ತುಳು ಇವು.

6. ದ್ರಾವಿಡರು ಯಾರು ? ಅವರು ವಿಶೇಷವಾಗಿ ಎಲ್ಲಿದ್ದರು.

ದ್ರಾವಿಡರೆಂಬವರೆಲ್ಲಾ ಮಂಗೋಲಿಕರ ಪೂರ್ವಿಕರು. ಅವರು ದಕ್ಷಿಣಾ ದೇಶದಲ್ಲಿ ವಿಶೇಷವಾಗಿ ಇದ್ದರು.

7. ಇಂಡಿಯಾದೇಶಕ್ಕೆ ಮೊದಲು ಬಂದ ಪರಾಯಿದೇಶದವರ್ಯಾರು? ಟುರೇನಿಯರು ಎಂಬುವರು.

8. ಅವರು ಯಾವ ಸಂತತಿಗೆ ಸೇರಿದವರು ?

ಮೊಂಗೋಲಿಯಾ ಮತ್ತು ಶಿದ್ಧಿಯ ಸಂತತಿಯವರು.

9. ಅವರು ಎಲ್ಲಿಂದ ಬಂದರು ?

ಟಾರ್ಟರಿ ಮತ್ತು ಟಿಬಿಟ್ ದೇಶಗಳಿಂದಾ ಬಂದರು.

10. ಇಂಡಿಯಾದೇಶಕ್ಕೆ ಬರುವದಕ್ಕೆ ಪೂರ್ವ ಆರ್ಯರು ಎಲ್ಲಿದ್ದರು? ಆಸ್ಯಖಂಡದ ಮಧ್ಯದಲ್ಲಿ ಇರುವ ಅಕ್ಸಸ್ ನದಿಯ ಬಳಿ ಇದ್ದರು.

11. ಆರ್ಯರು ಇಂಡಿಯಾದಲ್ಲಿ ಮೊಟ್ಟಮೊದಲು ಎಲ್ಲಿನಿಂತರು? ಸಿಂಧು ನದಿಯ ತೀರದಲ್ಲಿ ನಿಂತರು.

12. ಯಾರು ಮತ್ತು ಯಾತಕ್ಕೋಸ್ಕರ ಆರ್ಯರನ್ನು ಹಿಂದುಗಳೆಂತ ಕರದರು ?

ಪಶ್ಚಿಮ ದೇಶದವರು "ಸಿಂಧು" ಯವರು ಎಂಬುದು ಬಿಡದೆ "ಹಿಂದು" ಎಂದು ಕರದರು.

13. ಈ ಭರತವರ್ಷಕ್ಕೆ ಇಂಡಿಯಾ ಎಂಬಹೆಸರು ಹ್ಯಾಗೆಬಂತು?

ಗ್ರೀಕರು ಇಲ್ಲಿನವರನ್ನು "ಇಂಡಾಯರು" ಎಂದು ಕರೆದ್ದರಿಂದ ಇಂಡಿಯಾ ಎಂಬ ಹೆಸರುಬಂತು.

14. ಬ್ರಹ್ಮರ್ಷಿ ದೇಶಯಾವದು ? ಅಲ್ಲಿಗೆ ಈ ಹೆಸರು ಯಾಕೆ ಬಂತು ?

ಸರಸ್ವತಿ ಮತ್ತು ಗಂಗಾನದಿಗಳ ಮಧ್ಯಪ್ರದೇಶವೇ ಬ್ರಹ್ಮರ್ಷಿದೇಶವು. ಈ ಸ್ಥಳವು ಬ್ರಾಹ್ಮಣ ಋಷಿಗಳ ವಾಸಸ್ಥಳವಾದ್ದರಿಂದಾ ಆರ್ಯರು ಅದಕ್ಕೆ ಅನ್ವರ್ಥಉಳ್ಳ ಬ್ರಹ್ಮರ್ಷಿದೇಶವೆಂಬ ಹೆಸರನ್ನುಕೊಟ್ಟರು.

15. ಬ್ರಹ್ಮಾವರ್ತ ಯಾವದು? ಅಲ್ಲಿಗೆ ಈ ಹೆಸರು ಯಾಕೆಬಂತು?

ದೃಷದ್ವತಿ ಮತ್ತು ಸರಸ್ವತಿನದಿಗಳ ಮಧ್ಯಪ್ರದೇಶವೇ ಬ್ರಹ್ಮಾ

ವರ್ತವು. ಈ ಸ್ಥಳವು ದೇವತೆಗಳ ಸಂಚಾರಸ್ಥಳವಾಗಿ ಇದ್ದದ್ದರಿಂದ ಆರ್ಯರು ಈ ಹೆಸರನ್ನು ಕೊಟ್ಟರು.

16. ಮಧ್ಯದೇಶ ಯಾವದು ?

ವಿಂಧ್ಯಪರ್ವತಕ್ಕೂ ಹಿಮಾಲಯಕ್ಕೂ ಮತ್ತು ಅಲಹಾಬಾದಿಗೂ ಮಧ್ಯ ಇರತಕ್ಕ ಸ್ಥಳ.

17. ಆರ್ಯಾವರ್ತ ಯಾವದು ?

ಹಿಮಾಲಯ ಮತ್ತೂ ವಿಂಧ್ಯಪರ್ವತಕ್ಕೂ, ಪೂರ್ವ ಪಶ್ಚಿಮ ಸಮುದ್ರತೀರಗಳಿಗೂ ಮಧ್ಯದ ಪ್ರದೇಶವು.

18. ಪುರೋಹಿತರ ಉತ್ಪತ್ತಿ ಹ್ಯಾಗೆ? ರಾಜರು ಹ್ಯಾಗೆಉಂಟಾದರು?

ಆರ್ಯರು ಸರಸ್ವತಿನದಿಯನ್ನು ದಾಟಿಬರಲು ಅಲ್ಲಿ ರಾಕ್ಷಸರು ಮುಂತಾದವರೊಡನೆ ಯುದ್ಧಮಾಡಬೇಕಾಗಿ ಬಂದದ್ದರಿಂದಾ ಆಯುದ್ಧಕ್ಕೆ ನಿಂತ ಗುಂಪಿನ ಆರ್ಯರು ರಾಜರೆನ್ನಿಸಿಕೊಂಡರು. ಮನೆಯಲ್ಲಿ ಕರ್ಮಾದಿಗಳನ್ನು ಮಾಡಲಿಕ್ಕೆ ನಿಂತ ಗುಂಪಿನ ಆರ್ಯರು ಪುರೋಹಿತರಾದರು.

19. ವೇದ ಅಂದರೇನು ? ಇವುಗಳೆಷ್ಟು ? ಅವುಗಳಲ್ಲಿ ಏನಾದರೂ ಭೇದಗಳು ಉಂಟೋ ?

ವೇದ ಅಂಧರೆ ತಿಳುವಳಿಕೆ. ಇವು ರುಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದಗಳೆಂತ 4 ವಿಧ. ಇದರಲ್ಲಿ ಮಂತ್ರ, ಬ್ರಾಹ್ಮಣ, ಉಪನಿಷತ್ತುಗಳು, ಎಂದು 3 ಬಗೆ ಇದೆ.

20. ಮಂತ್ರಗಳಿಂದೇನುತಿಳಿಯುತ್ತದೆ ?

ಇದು 1500—2000 ವರ್ಷಗಳ ಮುಂಚೆ ಆರ್ಯರು ಬ್ರಹ್ಮಾವರ್ತದಲ್ಲಿ ಇದ್ದಾಗ್ಯೆ ಬರಿಯಲ್ಪಟ್ಟ ಸಂಹಿತೆಯು. ಇದರಿಂದ ಆರ್ಯರು ಭೂತಾರಾಧಕರೆಂದು ವಿಗ್ರಹವನ್ನು ಪೂಜಿಸುತ್ತಿದ್ದರೆಂದು ತಿಳಿಯುತ್ತೆ. ಮತ್ತೂ ಜಾತಿ ಭೇದವೂ ಪರದೇಶಕ್ಕೆ ಪಯಣಮಾಡಕೂಡದೆಂಬದೂ ಇರಲಿಲ್ಲವೆಂತ ತೋರುತ್ತೆ. ಆರ್ಯರಲ್ಲಿ ಗುಂಪಿಗೆ ಒಬ್ಬನು ಸರ್ವಾಧಿಕಾರಿಯಾಗಿದ್ದು ಈಗಿನ ಅರಸರಂತೆ ಕಾರ್ಬಾರ ನಡಿಸುತ್ತಿದ್ದನೆಂದು ಸೂಚಿಸುತ್ತೆ.

21. ಬ್ರಾಹ್ಮಣಗಳಿಂದೇನು ತಿಳಿಯುತ್ತೆ ?

ಇದು 800—500 ವರ್ಷಗಳ ಮಧ್ಯೆ ಬರಿಯಲ್ಪಟ್ಟ. ಇದರ ಕಾಲದಲ್ಲಿ

ಪುರೋಹಿತ್ಯವು ಪ್ರಬಲವಾಗಿ ಆಹುತಿದ್ರವ್ಯಗಳಲ್ಲಿ ಅನೇಕ ಬದಲಾವಣೆಗಳಾಗಿ ಜಂತುಗಳನ್ನು ಮತ್ತು ಮನುಷ್ಯರನ್ನು ಸಹ ಬಲಿ ಕೊಡುವದು ಆಚರಣೆಗೆ ಬಂತು.

22. ಉಪನಿಷತ್ತುಗಳ ವಿಷಯವೇನು ?

ಜಂತುಗಳನ್ನು ಮತ್ತು ಮನುಷ್ಯರನ್ನು ಬಲಿ ಕೊಡೋಣದರಿಂದ ಉಂಟಾಗುವ ನಷ್ಟವನ್ನು ಕುರಿತು ಆರ್ಯರು ನಾನು ಯಾರು ? ಎಲ್ಲಿಂದ ಬಂದೆ, ನನ್ನ ಪರಿಣಾಮವೇನು ಎಂಬ ಆತ್ಮ ವಿಚಾರದಲ್ಲಿ ಬರಿಯಲ್ಪಟ್ಟ ಜ್ಞಾನಮಾರ್ಗದಿಂದ ಮುಕ್ತಿಯಾಗಬೇಕೆಂದು ಬೋಧಿಸುತ್ತದೆ.

23. ಮನು ಸ್ಮೃತಿಯಿಂದ ತಿಳಿಯುವದೇನು ?

(ಜಾತಿಗಳವಿಷಯ, ರಾಜ್ಯಾಧಿಕಾರಪದ್ಧತಿ, ಗ್ರಾಮವಿಚಾರಣೆ.)

ಜಾತಿಗಳವಿಷಯ—ಜನರೆಲ್ಲರೂ ಬ್ರಾಹ್ಮಣರು (ವಿದ್ಯಾವ್ಯಾಸಂಗದಿಂದ ಇರತಕ್ಕವರು.) ಕ್ಷತ್ರಿಯರು (ರಾಜ್ಯಪಾಲಕರು.) ವೈಶ್ಯರು (ವ್ಯಾಪಾರಿಗಳು. ) ಶೂದ್ರರು (ವ್ಯವಸಾಯದಾರರು) ಎಂದು ವಿಂಗಡಿಸಲ್ಪಟ್ಟಿದ್ದರು.

ರಾಜ್ಯಾಧಿಕಾರಪದ್ಧತಿ—ಗುಂಪಿಗೆ ಒಬ್ಬೊಬ್ಬ ಸರ್ವಾಧಿಕಾರಿ ಇದ್ದು ಅವನ ಕೈ ಕೆಳಗೆ 100 ಗ್ರಾಮಗಳಿಗೆ ಒಬ್ಬ ಹುದ್ದೇದಾರನು ಇವನ ಅಧಿಕಾರಕ್ಕೆ ಒಳಪಟ್ಟು 10 ಗ್ರಾಮಕ್ಕೆ ಒಬ್ಬ ತಾಬೇದಾರನು ಪ್ರತಿಗ್ರಾಮದಲ್ಲಿ ಪಟೇಲನು ಇವನಿಗೆ ಸಹಾಯಕರಾಗಿ ಬಾರಾಬಲೂತಿ ಜನಗಳು ಇದ್ದರು.

ಗ್ರಾಮವಿಚಾರಣೆ—ಪ್ರತಿ ಗ್ರಾಮಕ್ಕೂ ಪಟೇಲನೇ ಸರ್ಕಾರಕ್ಕೆ ಜವಾಬದಾರನಾಗಿ ಇದ್ದು ಸರ್ಕಾರದ ಕಂದಾಯಮುಂತಾದ್ದು ವಸೂಲ್ಮಾಡಿ ತನ್ನಮೇಲಣ ಅಧಿಕಾರಿಗೆ ಕಳುಹಿಸುತ್ತಿದ್ದನು. ಗ್ರಾಮ ನವಕರರಲ್ಲಿ ಕೆಲವರಿಗೆ ಸಂಬಳವೂ ಕೆಲವರಿಗೆ ಮಾನ್ಯವು ನಡಿಯುತ್ತಿತ್ತು.

24. ಧೊರೆಗಳಲ್ಲಿ ಎರಡು ದೊಡ್ಡಮನೆತನ ಯಾವದು ?

ಆಯಾ ಮನೆತನದಲ್ಲಿ ಪ್ರಸಿದ್ಧರಾದ ಅರಸರ ಹೆಸರುಹೇಳು ?

ಧೊರೆಗಳಲ್ಲಿ ಸೂರ್ಯವಂಶ ಚಂದ್ರವಂಶವೆಂತ ಎರಡು ದೊಡ್ಡ ಮನೆತನಗ

ಳುಂಟು. ಸೂರ್ಯವಂಶದವರಲ್ಲಿ ಅಯೋಧ್ಯೆಯಲ್ಲಿ ಆಳಿದ ರಾಮನು. ಚಂದ್ರವಂಶದಲ್ಲಿ ಡಿಲ್ಲಿಯಲ್ಲಿ ಆಳಿದ ಪಾಂಡವರೂ, ಇದಕ್ಕೆ ಉದಹರಣೆಯು.

25. ಬೌದ್ಧಮತವನ್ನು ಕಂಡುಹಿಡಿದವನು ಯಾರು ?

ಕಪಿಲವಸ್ತುರಾಜ್ಯದ ಅರಸನಾದ ಶುದ್ಧೋದನನ ಮಗ ಗೌತಮನು.

26. ಆ ಮತದ ಮೂರು ನೇಮಗಳೇನು?

(1) ಜಾತಿಭೇದವಿಲ್ಲ. (2) ಕರ್ಮಾಚರಣೆಯಲ್ಲಿ ಮುಕ್ತಿಯಾಗುವದಿಲ್ಲ. (3) ಮಮತೆಯನ್ನು ಬಿಟ್ಟರೆ ನಿರ್ವಾಣವಾಗುವದು.

27. ಬೌದ್ಧಮತದಿಂದ ಬ್ರಾಹ್ಮಣಮತದಲ್ಲಿ ಉಂಟಾದ 2 ಬದಲಾವಣಿಗಳೇನು?

(1) ಜಂತುಗಳನ್ನು ಬಲಿ ಕೊಡುವದು ನಿಂತುಹೋಯಿತು.

(2) ಜ್ಞಾನದಿಂದಲೂ ಒಳ್ಳೇ ಕೆಲಸದಿಂದಲೂ ಮೋಕ್ಷವಾಗುವದೆಂಬ ಸಿದ್ಧಾಂತವು ಅಂಗೀಕರಿಸಲ್ಪಟ್ಟಿತು.

28. ಮಗಧ ದೇಶವು ಯಾವಾಗ ಪ್ರಖ್ಯಾತಿಗೆ ಬಂತು ?

ಈ ರಾಜ್ಯವು ಮೌರ್ಯರ ಕಾಲದಲ್ಲಿ ಪ್ರಖ್ಯಾತಿಗೆ ಬಂತು.

29. ಬೌದ್ಧಮತವು ಅಭಿವೃದ್ಧಿಯಾದ್ದಕ್ಕೆ ಕಾರಣಗಳೇನು?

(1) ಜಾತಿಭೇದವಿಲ್ಲದ್ದರಿಂದ ಅನೇಕ ಜನರು ಸೇರಿದರು.

(2) ಬ್ರಾಹ್ಮಣರ ಕರ್ಮಬಂಧನೆಯನ್ನು ತಪ್ಪಿಸಿಕೊಳ್ಳಬೇಕೆಂದು ಅನೇಕರು ಸೇರಿದರು.

(3) ಕೆಲವು ದೊರೆಗಳು ಈ ಮತಕ್ಕೆ ಸೇರಿದ್ದರಿಂದ ಅಲ್ಲಿನವರೆಲ್ಲಾ ಬೌದ್ಧರಾದರು.

30. ಬೌದ್ಧಮತವು ಕ್ಷೀಣಿಸುವದಕ್ಕೆ ಕಾರಣಗಳೇನು ?

(1) ಮೌರ್ಯರ ತರುವಾಯ ಮತಾಭಿಮಾನಿಗಳು ಕಮ್ಮಿ ಆದರು.

(2) ಕುಮಾರಿಲ ಭಟ್ಟನೆಂಬ ಬ್ರಾಹ್ಮಣನು ಸಿಂಧನ್ವನೆಂಬ ಅರಸನಿಗೆ ಬೋಧಿಸಿ ಅನೇಕ ಬೌದ್ಧರನ್ನು ಕೊಲ್ಲಿಸಿದನು.

(3) ಅಗ್ನಿಕುಲರೂ ಶಂಕರಾಚಾರ್ಯರೂ ಬೌದ್ಧರನ್ನು ಓಡಿಸಿದರು.

31. ಅಗ್ನಿಕುಲದ ಉತ್ಪತ್ತಿ ಸ್ಥಿತಿಯು ಹ್ಯಾಗೆ ?

ಅಂಬೂಬೆಟ್ಟದ ಮೇಲಣ ಬ್ರಹ್ಮರ್ಷಿಗಳು ಬ್ರಹ್ಮನಲ್ಲಿಗೆ ಹೋಗಿ ಬೌದ್ಧರು (ರಾಕ್ಷಸರು) ವೇದವನ್ನು ಕದ್ದುಕೊಂಡು, ಹೋದರೆಂತ ದೂರಲು ಅವರನ್ನು ನಾಶಮಾಡಲು ಬ್ರಹ್ಮಹೇಳಿದ ವಿಧಿಯಪ್ರಕಾರ ಅಗ್ನಿಕುಂಡವನ್ನು ರಚಿಸಿ ಅದನ್ನು ಗಂಗಾನದಿಯ ನೀರಿನಿಂದ ಪ್ರೋಕ್ಷಿಸಲು, ಅಲ್ಲಿ 4 ಜನರು ಹುಟ್ಟಿ ಬೌದ್ಧರನ್ನು ಓಡಿಸಿದರೆಂತ ಪುರಾಣದಲ್ಲಿ ಹೇಳಿ ಇದೆ. (ಇದನ್ನು ಇಂಗ್ಲೀಷನವರು ನಂಬುವದಿಲ್ಲ.)

32. ಹಿಂದೂಸ್ಥಾನಕ್ಕೆ ಬೌದ್ಧಮತದ ಯಾತ್ರೆಗಾರರಾಗಿ ಬಂದ ಇಬ್ಬರು ಯಾರು ?

ಚೈನಾದೇಶದ ಫಾಹಿಯಾನ್ ಮತ್ತು ಹ್ಯುಯನಿಸ್ತಾಂಗ್ ಇವರು.

33. "ಫಾಹಿಯಾನ್" ಎಂಬಹೆಸರು ಚರಿತ್ರೆಯಲ್ಲಿ ಹ್ಯಾಗೆ ಸಂಬಂಧಿಸಿದೆ.

ಚೈನಾದೇಶದ ಬೌದ್ಧನಾದ ಇವನು ಕ್ರಿ. ಅ. 400 ಲ್ಲಿ ಕಾಬೂಲಿನಿಂದಾ ಪಾಟಲೀಪುರದ ವರಿಗೂ ಪ್ರಯಾಣಮಾಡಿ ಬೌದ್ಧಮತಾಭಿವೃದ್ಧಿಯನ್ನು ನೋಡಿಹೋದನು.

34. "ಹ್ಯುಯನಿಸ್ತಾಂಗ್" ಎಂಬ ಹೆಸರು ಚರಿತ್ರೆಯಲ್ಲಿ ಹ್ಯಾಗೆ ಸಂಬಂಧಿಸಿದೆ ?

ಬೌದ್ಧನಾದ ಈ ಚೈನಾದೇಶಿಗನು ಕ್ರಿ. ಅ. 629 ಲ್ಲಿ ಇಂಡಿಯಾಕ್ಕೆಬಂದು ಮತಯಾತ್ರೆ ಮಾಡಿ ಬೌದ್ಧಮತದ ಕ್ಷೀಣತೆಯನ್ನು ನೋಡಿಕೊಂಡು ಹೋದನು.

35. ಸೆಲ್ಯುಕಸ್ ಯಾರು ?

ಗ್ರೀಕ್ ದೇಶದ ಅಲಕ್ಸಾಂದರನ ಸೇನಾಪತಿಯಾಗಿದ್ದು ಬಾಕ್ಟ್ರಿಯಾದೇಶದ ಅರಸಾದವನು.

36. ಯಾತಕ್ಕೋಸ್ಕರ ಯಾವಾಗ ಇಂಡಿಯಾದಲ್ಲಿ ಎಲ್ಲಿಗೆಬಂದನು?

ಅಲಕ್ಸಂದರ್ ಜೈಸಬೇಕೆಂದು ನಿಶ್ಚೈಸಿಕೊಂಡಿದ್ದ ದೇಶವನ್ನೆಲ್ಲಾ ಜೈಸಬೇಕೆಂದು ಚಂದ್ರಗುಪ್ತನ ಆಳ್ವಿಕೆಯಲ್ಲಿ ಮಗಧದೇಶಕ್ಕೆ ಬಂದನು.

37. ಯಾವ ಹಿಂದೂ ಅರಸನೊಡನೆ ವಿವಾಹವನ್ನು ಬೆಳಸಿದನು?

ಮಗಧ ದೇಶದ ಚಂದ್ರಗುಪ್ತನೊಡನೆ ವಿವಾಹ ಸಂಬಂಧವನ್ನು ಬೆಳಸಿದನು.

38. ಮೌರ್ಯರಲ್ಲಿ ಪ್ರಸಿದ್ಧನಾದವನು ಯಾರು?

ಬಿಂದು ಸಾರನ ಮಗ (ಚಂದ್ರಗುಪ್ತನ ಮೊಮ್ಮಗ) ಅಶೋಕನು.

39. ಅವನು ಯಾವ ಹೆಸರನ್ನು ಇಟ್ಟುಕೊಂಡನು?

ಪ್ರಿಯದಾಶಿಯೆಂದು ಹೆಸರಿಟ್ಟುಕೊಂಡನು.

40. ಇಂಡೂ ಶಿದ್ಧಿಯರ ಸ್ಥಿತಿ ಲಯಗಳ ವಿಷಯವೇನು?

ಬಾಕ್ಟ್ರಿಯಾ ದೇಶದಿಂದ ಗುಪ್ತಗನ್ನು ಓಡಿಶಿದ್ದ ಇವರಲ್ಲಿ ಕನಿಷ್ಕನೇ ಮುಖ್ಯನು. ಅಫ್ಘಾನಿಸ್ಥಾನ ಮತ್ತು ಪಂಜಾಬನ್ನು ಗೆದ್ದು ಕಾಬೂಲಿನಿಂದ ಆಗ್ರಾವರಿಗೆ ಇರತಕ್ಕ ದೇಶವನ್ನೆಲ್ಲ ಸ್ವಾಧೀನಪಡಿಸಿಕೊಂಡ ಈ ಬೌದ್ಧನನ್ನು ಉಜ್ಜಯನಿಯಲ್ಲಿ ಅರಸನಾಗಿದ್ದ ವಿಕ್ರಮಾದಿತ್ಯನು ಗುಪ್ತರ ಸಹಾಯದಿಂದ ಸೋಲಿಶಿದನು.

41. ಚರಿತ್ರೆಯಲ್ಲಿ ಗುಪ್ತರ ವಿಷಯವಾಗಿ ಏನು ತಿಳಿಯುತ್ತೆ?

ಬಾಕ್ಟ್ರಿಯಾದೇಶದಲ್ಲಿ ಇದ್ದು ಇಂಡೂ ಶಿದ್ಧಿಯರಿಂದ ಓಡಿಸಲ್ಪಟ್ಟು ಇಂಡಿಯಾಕ್ಕೆ ಬಂದು ಉಜ್ಜಯನಿಯ ವಿಕ್ರಮಾದಿತ್ಯನೊಂದಿಗೆ ಶೇರಿ ಇಂಡೂ ಸಿದ್ಧಿಯರನ್ನು ಸೋಲಿಶಿದರು.

42. ಶಾಲಿವಾಹನನ ಚರಿತ್ರೆಯನ್ನು ಬರೆಯಿರಿ?

ದಕ್ಷಿಣ ಹಿಂದೂಸ್ಥಾನದಲ್ಲಿ ಬಹು ಪ್ರಖ್ಯಾತನಾದ ಇವನು ಗೋದಾವರೀ ತೀರದಲ್ಲಿರುವ ಪ್ರತಿಷ್ಠಾನಗರದಲ್ಲಿ ಆಳುತ್ತಿದ್ದನು. ಇವನ ಶಕೆಯು ಕ್ರಿ. ಅ 78ಲ್ಲಿ ಮೊದಲಾಯಿತು.

43. ವಿಕ್ರಮಾದಿತ್ಯನ ಚರಿತ್ರೆಯನ್ನು ಬರಿ?

ಆಂಧ್ರರಾಜರಲ್ಲಿಯೂ ರಾಜಪುತ್ರರಲ್ಲಿಯೂ ಪ್ರಖ್ಯಾತನಾದ ಇವನು ಉಜ್ಜನೀಯಲ್ಲಿ ಆಳುತ್ತಿದ್ದನು. ಇವನ ಶಕೆಯು ಕ್ರಿ. ಪೂ. 56ಲ್ಲಿ ಹುಟ್ಟಿತು.

44. ಈಗಿನ ರಾಜಪುತ್ರರಲ್ಲಿ ಅನೇಕರು ಯಾವ ವಂಶದವರೆಂದು ಹೇಳಿಕೊಳ್ಳುತ್ತಾರೆ?

ಅಗ್ನಿಕುಲರ ವಂಶೀಯರೆಂದು ಹೇಳಿಕೊಳ್ಳುತ್ತಾರೆ.

45. ಇವರಲ್ಲಿ ಪ್ರಖ್ಯಾತನಾದವನು ಯಾರು ?

ಮಾಳವದೇಶದಲ್ಲಿ ಇದ್ದ ವಿಕ್ರಮಾದಿತ್ಯನು.

46. ದಕ್ಷಿಣ ಹಿಂದೂಸ್ಥಾನದ ಪೂರ್ವರಾಜ್ಯಗಳ್ಯಾವು

(1) ಪಾಂಡ್ಯ (2) ಚೋಳ (3) ಚೇರ (4) ಕೇರಳ, ಇವು.

47. ಕಲ್ಲಿ ಕೋಟೆಯು ಯಾವ ರಾಜ್ಯದಿಂದ ಹುಟ್ಟಿತು ?

ಕೇರಳ ರಾಜ್ಯದಿಂದ ಹುಟ್ಟಿತು.

48. ಭೋಜರಾಜನಾರು ? ಇವನ ಸಭೆಯನ್ನು ಅಲಂಕರಿಸುತ್ತಿದ್ದ ಕವಿಗಳು ಯಾರು ?

ಇವನು ಮಾಳವದೇಶದ ದೊರೆಯು. ಕಾಳಿದಾಸ, ಭವಭೂತಿ ಎಂಬ ಪ್ರಸಿದ್ಧರಾದ ಕವಿಗಳು ಇವನ ಆಸ್ಥಾನದಲ್ಲಿ ಇದ್ದರು.

49. ಲಿಂಗವಂತರ ಮತ ಹುಟ್ಟಿದ್ದು ಎಲ್ಲಿ ? ಯಾವ ದೊರೆಗಳು ಅದನ್ನು ಅವಲಂಬಿಸಿ ಪ್ರಚಾರಮಾಡಿದರು?

ಕಲ್ಯಾಣನಗರದಲ್ಲಿ ಹುಟ್ಟಿದ ಈ ಮತವನ್ನು ಕಾಲಚೂರ್ಯರು ಅವಲಂಬಿಸಿ ಪ್ರಚಾರ ಮಾಡಿದರು.

50. ಘಸ್ನಿಮಹಮೂದ್‌ನು ಯಾವ ಉದ್ದೇಶದಮೇಲೆ ಇಂಡಿಯಾಕ್ಕೆ ದಂಡೆತ್ತಿ ಬಂದನು ?

ಮಹಮ್ಮದೀಯ ಮತವನ್ನು ಅಭಿವೃದ್ಧಿಮಾಡ ಬೇಕೆಂತಲೂ ಬಹಳ ಐಶ್ವರ್ಯವನ್ನು ಸಂಪಾದಿಸ ಬೇಕೆಂತಲೂ ಬಂದನು.

51. ಘಸ್ನಿ ಮಹಮೂದನ ಮುಖ್ಯವಾದ ದಂಡಯಾತ್ರೆಗಳನ್ನು ವಿವರಿಸು?

1ನೇ ದಂಡಯಾತ್ರೆ—ಇವನು 1001ಲ್ಲಿ ಲಾಹೂರ್‌ಮೇಲೆ ದಂಡೆತ್ತಿ ಪಿಷಾವರಿನ ಬಳಿ ಜಯಪಾಲನನ್ನು ಸೆರೆಹಿಡಿದನು.

4ನೇ ದಂಡಯಾತ್ರೆ—ಇವನು 1008 ಲ್ಲಿ ಲಾಹೂರಿನ ಅನಂಗಪಾಲನನ್ನು ಸೋಲಿಸಿ ನಾಗರಕೋಟೆ ದೇವಾಲಯವನ್ನು ಲೂಟಿ ಮಾಡಿದನು.

10 ನೇ ದಂಡಯಾತ್ರೆ.—ಇವನು 1022ಲ್ಲಿ ಲಾಹೂರಿನ 2ನೇ ಜಯಪಾಲನನ್ನು ಗೆದ್ದು ಸಿಂಧೂ ನದಿಯ ಪೂರ್ವಕಡೆ ರಾಜ್ಯವನ್ನು ಘಸ್ನಿಗೆ ಸೇರಿಶಿದನು.

21 ನೇ ದಂಡಯಾತ್ರೆ.—ಇವನು 1024 ಲ್ಲಿ ಗುಜರಾತು ದೇಶದ ಸ್ವಾಮಿನಾಥ ದೇವಾಲಯವನ್ನು ಲೂಟಿ ಮಾಡಿ ಆ ಲಿಂಗವನ್ನು ವಡದು ಆದರ ಕೆಳಗೆ ಇದ್ದ ಬಹು ಬೆಲೆಯುಳ್ಳ ರತ್ನಗಳನ್ನು ತೆಕ್ಕೊಂಡು ಹೋದನು.

52. ಘೋರಿಯಮನೆತನದ ಮೂಲಪುರುಷ ಯಾರು ?

ಈಜುದ್ದಿನ್ ಎಂಬುವನು.

53. ಡಿಲ್ಲಿಯಲ್ಲಿ ಆಳಿದ ಕೊನೆ ಹಿಂದೂ ಅರಸ ಯಾರು?

ಪೃಥ್ವಿ ರಾಜನೆಂಬುವನು.

54. ಯಾರು ಯಾವಾಗ ಮಹಮ್ಮದಿಯರ ಪ್ರಭುತ್ವವನ್ನು ಇಂಡಿಯಾದಲ್ಲಿ ಸ್ಥಾಪಿಶಿದರು ?

ಮಹಮ್ಮದಘೋರಿಯು 1193 ಲ್ಲಿ ಸ್ಥಾಪಿಶಿದನು.

55. ಡಿಲ್ಲಿಯಲ್ಲಿ ಆಳಿದ ಮೊದಲನೆ ಮಹಮ್ಮದಿಯ ಯಾರು?

ಕುತ್ಬುದ್ದಿನ್ ಎಂಬವನು.

56. ಮಹಮ್ಮದಿಯರಲ್ಲಿ ಯಾರು ಯಾವಾಗ ದಕ್ಷಿಣ ಹಿಂದೂಸ್ಥಾನದ ಮೇಲೆ ದಂಡೆತ್ತಿದರು ?

ಅಲ್ಲಾವುದ್ದಿನನು 1294 ರಲ್ಲಿ ದಂಡೆತ್ತಿದನು

57. ಡಿಲ್ಲಿಯಲ್ಲಿ ಆಳಿದ ಮೊದಲನೆ ಹೆಂಗಸು ಯಾರು ? ಅವಳ ಚರಿತ್ರೆ ಬರಿ?

ಸುಲ್ತಾನ್ ರಿಜಯಾ ಎಂಬವಳು,—ಅಲ್ತಮಷನ ಮಗಳಾದಇವಳು ಗಂಡಸಿನಂತೆ ಸುಲ್ತಾನ್ ಯೆಂದು ಹೆಸರಿಟ್ಟುಕೊಂಡು ಆಳುತ್ತಿದ್ದು ಅಬ್ಸಿನಿಯಾ ದೇಶದ ಜುಮಾಲ್ ಯೆಂಬ ಕುದುರೆಯ ನೌಕರನಿಗೆ ಹೆಚ್ಚು ಅಭಿಮಾನ ತೋರಿಸುತ್ತಿದ್ದದ್ದರಿಂದ ಸರ್ ಹಿಂದಿನ ಅಧಿಕಾರಿಗಳಲ್ಲೊಬ್ಬನು ತಾನು ಸಿಂಹಾಸನಕ್ಕೆ ಬರಬೇಕೆಂದು ಇವಳನ್ನು ಸೆರೆ ಹಿಡಿದು ಡಿಲ್ಲಿಯ ಮೇಲೆ ಬರಲು ಡಿಲ್ಲಿಯವರು ಇವರನ್ನು ಕೊಂದರು.

58. ರಾಜಸ್ಥಾನ ಯಾವದು ? ಇದನ್ನು ಯಾವಾಗ ಯಾತಕ್ಕೋಸ್ಕರ ಹಿಂದೂ ಅರಸರು ಆಕ್ರಮಿಸಿದರು.

ರಾಜಪುಟಾಣಿಯೆಂಬದೇ ರಾಜಸ್ಥಾನವು. ಇದನ್ನು 1206 ಲ್ಲಿ ಮಹಮ್ಮದ ಘೋರಿಯಿಂದ ಓಡಿಸಲ್ಪಟ್ಟ ಡಿಲ್ಲಿಯ ರಾಜಪುತ್ರರು ತಮ್ಮ ಸ್ವಸ್ಥಾನ ಹೋದ್ದರಿಂದ ಇದನ್ನು ಆಕ್ರಮಿಸಿದರು.

59. ಜೋಹಾರ್ ಅಂದರೇನು ? ಈ ಪದ್ಧತಿಯನ್ನು ಯಾರು ಯಾವಾಗ ಅನುಸರಿಸಿದರು ?

ಜೋಹರ್ ಅಂದರೆ ಪ್ರಾಣದಾಶೆ ಇಲ್ಲದೆ ಇರುವದು. (ಅಗ್ನಿಪ್ರವೇಶ) ಈ ಪದ್ಧತಿಯನ್ನು ಗುಜರಾತಿನ ರಾಜಪುತ್ರರು 1303 ಲ್ಲಿ ನಡೆಸಿದ್ದರು.

60. ಮಹಮ್ಮದ ತುಗ್ಲಕಿನಲ್ಲಿ ಒಳ್ಳೇ ಗುಣಗಳೂ ಕೆಟ್ಟ ಗುಣಗಳು ಇದ್ದವು ಅವು ಯಾವು ?

ಒಳ್ಳೇ ಗುಣಗಳು,--ವಿದ್ಯಾವಂತರನ್ನು ಬಹಳ ಗೌರವದಿಂದ ಭಾವಿಸುತ್ತಿದ್ದನು. ಔದಾರ್ಯವೂ ಸಮಯೋಚಿತವಾಗಿ ಮಾತನಾಡುವ ಶಕ್ತಿಯೂ ಇತ್ತು.

ಕೆಟ್ಟಗುಣಗಳು,—ಅವಿವೇಕವಾದ ಕಾರ್ಬಾರವನು ಮಾಡುತ್ತಿದ್ದನು. ಪ್ರಾಣಹಿಂಸೆ ಮಾಡೋಣದರಲ್ಲಿ ಬಹಳ ಆಸಕ್ತಿಯುಳ್ಳವನಾಗಿದ್ದನು.

61. ಯಾರೇ ಆಗಲಿ ವಿದ್ಯಾವಂತರಾದ ಮಾತ್ರಕ್ಕೆ ನೀತಿವಂತ ರಾಗುತ್ತಾರೆಂಬದು ಗೊತ್ತಿಲ್ಲಾ. ಇದಕ್ಕೆ ಒಬ್ಬ ವಿದ್ಯಾವಂತನ್ನ ಸಾಮ್ಯಕೊಡು.

ಮಹಮ್ಮದತುಗ್ಲಕ್,--ಇವನು ಒಳ್ಳೇವಿದ್ಯಾವಂತನು. ಡಿಲ್ಲಿಗೆ ಬದಲಾಗಿ ದೌಲತಾಬಾದನ್ನು ರಾಜಧಾನಿಯನ್ನಾಗಿ ಮಾಡಿ ಡಿಲ್ಲಿಯ ಯೆಲ್ಲರನ್ನು ಅತಿ ದೂರದಲ್ಲಿರತಕ್ಕ ಹೊಸ ರಾಜಧಾನಿಗೆ ಹೋಗಬೇಕೆಂತ ಬಲಾತ್ಕರಿಸಿದನು. ಹೋಗದ ಬಡವರನ್ನೆಲ್ಲಾ ಕೊಲ್ಲಿಸಿದನು. ತಮಾಷೆಗಾಗಿ ಮನುಷ್ಯರನ್ನು ಬೇಟೆಯಾಡಿದನ್ನು. ಕಾಗದವನ್ನು ನಾಣ್ಯವಾಗಿ ಚಲಾಯಿಸಲೆತ್ನಿಸಿದನು. ಚೈನಾದೇಶದ ಮೇಲೆ ಲಕ್ಷ ಸೇನೆಯನ್ನು ಹಿಮಾಲಯಪರ್ವತದ ಮಾರ್ಗವಾಗಿ ಕಳುಹಿಸಿದನು, ಅವರೆಲ್ಲರೂ ಸತ್ತರು.

62. ದಕ್ಷಿಣ ಹಿಂದೂಸ್ತಾನದಲ್ಲಿ ಸ್ಥಾಪಿಸಲ್ಪಟ್ಟ ಸ್ವತಂತ್ರದ ಮೊದಲನೆ ಮುಹಮ್ಮದೀಯ ರಾಜ್ಯಯಾವದು?

ಬಹಮನಿಯರಾಜ್ಯವು

63. ಬಹಮನಿಯ ರಾಜ್ಯ ಯಾರಿಂದ ಯಾವಾಗ ಯಲ್ಲಿ ಸ್ಥಾಪಿಸಲ್ಪಟ್ಟಿತು?

ಹಸನ್ ಗಂಗೊ ಬಹಮನಿಯಿಂದ 1347ಲ್ಲಿ ಕಲ್ಬುರ್ಗಿಯಲ್ಲಿ ಸ್ಥಾಪಿಸಲ್ಪಟ್ಟಿತು.

64. ವಿಜಯನಗರದ ರಾಜ್ಯ ಯಾರಿಂದ ಯಾವಾಗ ಎಲ್ಲಿ ಸ್ಥಾಪಿಸಲ್ಪಟ್ಟಿತು ?

ಓರಂಗಲ್‌ನ ಹಿಂದೂ ಅಧಿಕಾರಿಗಳಿಂದ 1336ಲ್ಲಿ ತುಂಗಭದ್ರಾತೀರದಲ್ಲಿ ಸ್ಥಾಪಿಸಲ್ಪಟ್ಟಿತು.

65. ಭಾಮಿನಿಯ ರಾಜ್ಯ ವಡೆದು ಯಾವ ರಾಜ್ಯಗಳು ಏರ್ಪಾಟಾದವು ?

(1) ಬೀಜಾಪುರ. (2) ಅಹಮ್ಮದನಗರ. (3) ಗೋಲಕೊಂಡ. (4) ಬಾರಾರ್. (5) ಬಿದಾರ್. ಇವು.

66. ಫಿರೋಜಷಹನ ಆಳಿಕೆಯಂತೆ ಪ್ರಸಿದ್ಧಿಗೆ ಬಂತು ?

ಇವನು ಮಾಡಿದ ಮರಮ್ಮತು ಕೆಲಸಗಳಿಂದ ಪ್ರಸಿದ್ಧಿಗೆ ಬಂತು.

67. ಇವನು ಸತ್ತಮೇಲೆ ಹಿಂದೂಸ್ಥಾನದ ಸ್ಥಿತಿ ಹ್ಯಾಗಿತ್ತು ?

ಗುಜರಾತು, ಮಾಳವ, ಕ್ಯಾಂಡಿಷ್, ಜೌನ್‌ಪುರ್ ರಾಜ್ಯಗಳು ಸ್ವತಂತ್ರವಾಗಿ ಕೊಳ್ಳೆ ಹೊಡೆಯತಕ್ಕವರಿಗೆ ಬಹಳ ಅನುಕೂಲವಾಗಿ ಇತ್ತು.

68. ತೈಮೂರಿನ ಯುದ್ಧ ಯಾತ್ರೆಯನ್ನು ಸಂಕ್ಷೇಪವಾಗಿ ವಿವರಿಸು ?

ತುರ್ಕಿ ವಂಶಸ್ಥನಾದ ಇವನು ಮೊಗಲರ ಯಜಮಾನನಾಗಿ 1399ಲ್ಲಿ ಡಿಲ್ಲಿಯನ್ನು ಆಕ್ರಮಿಸಿ ಅಲ್ಲಿನ ಜನರನ್ನು ಕೊಂದು ದೇಶವನ್ನು ಲೂಟಿ ಮಾಡಿಕೊಂಡು ಹೋದನು.

69. ತೈಮೂರ್ ಹೋದಮೇಲೆ ಹಿಂದೂಸ್ಥಾನದ ಸ್ಥಿತಿ ಹ್ಯಾಗಾಯಿತು ?

ಷ್ಠಾಮಪ್, ಅಂಟು ರೋಗವ್, ಪ್ರಬಲವಾಯಿತು. ಮಹಮ್ಮದ ತು ಗ್ಲಾಕ್ ಸತ್ತನು.

70. ಖುಸ್ರುಖಾನ್ ಯಾರು ? ಇವನ ಕಾಲದಲ್ಲಿ ಹಿಂದೂರಾಜರು ಗೆಲಿಗಟ್ಟಿ ಕೊಳ್ಳಬಹುದಾಗಿದ್ದದ್ದು ಯಾಕೆ ತಪ್ಪಿತು?

ಇವನು ಹಿಂದುವಾಗಿದ್ದು ಜಾತಿ ಕೆಟ್ಟು ಪ್ರಬಲನಾದವನು. ಜಾತಿ ಕೆಟ್ಟವನಾದ್ದರಿಂದ ಹಿಂದುಗಳು ಇವನನ್ನು ಪ್ರೋತ್ಸಾಹಿಸಲಿಲ್ಲ.

17. ಅಲ್ತಮಷನ ಚರಿತ್ರೆಯನ್ನು ಬರೀರಿ ?

ಇವನ ಕಾಲದಲ್ಲಿ ಘಸ್ನಿ ಅರಸನಾದ ಯೆಲ್ಡಜ್‌ನು ಚಂಗೇಸ್‌ಖಾನ್ ನಿಂದ ಓಡಿಸಲ್ಪಟ್ಟು ಬಂದ ಇವನನ್ನು ಅಲ್ತಮಷ್ ಶೆರೆ ಹಿಡಿದನು. ಅವನಿಗೆ ಈ ಧೊರೆಯು ಆಶ್ರಯ ಕೊಟ್ಟದ್ದರೆ ದೇಶ ಹಾಳಾಗುತ್ತಿತ್ತು. ಇವನುಸಿಂಧು ಮಾಳವ ದೇಶಗಳನ್ನು ಡಿಲ್ಲಿಗೆ ಸೇರಿಸಿದನು. ಇವನ ಕಾಲದಲ್ಲಿತುತ್ಬುದ್ದೀನ್ ಮೊದಲು ಮಾಡಿದ್ದ ಕುಟ್ಬ್ಮಿನರ್ ಎಂಬ ಕಟ್ಟಡ ಪೂರೈಸಿತು.

72. ಹಿಂದುಗಳಿಗೆ ತುರುಕರ ದಿವಸದಲ್ಲಿ ದೊಡ್ಡ ಅಧಿಕಾರವಾಯ್ತು ಅದು ಯಾವಾಗ ?

ಬಹಮನಿ ರಾಜ್ಯಸ್ಥಾಪನೆಯಾದಂದಿನಿಂದ.

73. ಬಾಲ್ಬನ್ನ ಚರಿತ್ರೆ ಬರಿಯಿರಿ ?

ಇವನ ಅಲ್ತಮಷ್‌ನ ಅಳಿಯ. ತನ್ನ ಕಡೆಯವರನ್ನೆಲ್ಲಾ ಕೊಲ್ಲಿಶಿ ಎಲ್ಲಾ ಕಡೆಯಲ್ಲಿಯೂ ಗೂಢ ಚಾರಿಗಳನ್ನಿಟ್ಟದ್ದು ಕಠಿಣವಾದ ಕಾನೂನನ್ನು ಮಾಡಿ ಧಂಗೆ ಎದ್ದಿದ್ದ ಬಂಗಾಳದ ತುಗ್ರಾಲನನ್ನು ಕೊಂದು ತನ್ನ ಮಗನಿಗೆ ಬಂಗಾಳೆಯ ಅಧಿಕಾರವನ್ನುಕೊಟ್ಟಿರಲುಇವನ ಆಶ್ರಯದಲ್ಲಿದ್ದ ರಾಜಪುತ್ರರೊಡನೆ ಯುದ್ಧಕ್ಕೆ ಬಂದ ಮೋಗಲರ ಕಲಹದಲ್ಲಿ ಮಗ ಸತ್ತದ್ದರಿಂದಾ ಆವ್ಯಸನದಲ್ಲಿ ಸತ್ತನು,

74. ಯಾರಿಂದ ಯಾವಾಗ ಮೊಗಲರ ಪ್ರಭುತ್ವ ಹಿಂದೂಸ್ಥಾನದಲ್ಲಿ ಸ್ಥಾಪಿಸಲ್ಪಟ್ಟಿತು ?

ಬಾಬರ್‌ನಿಂದ 1526ಲ್ಲಿ ಸ್ಥಾಪಿಸಲ್ಪಟ್ಟಿತು,

75. ಬಾಬರ್ ದಂಡೆತ್ತುವದಕ್ಕೆ ಅನುಕೂಲವಾದ್ದು ಹ್ಯಾಗೆ ?

(1) ಡಿಲ್ಲಿಯಲ್ಲಿ ರಾಜಸ್ಥಾನದಲ್ಲಿ ಒಬ್ಬೊಬ್ಬರಿಗೆ ದ್ವೇಷವಿತ್ತು.

(2) ಪಂಜಾಬಿನ ದೌಲತ್‌ಖಾಲೂದಿಯು ಬಾಬರ್‌ನನ್ನು ದಂಡೆತ್ತಿ ಬರುವಂತೆ ಕರೆದನು.

76. ಬಾಬರ್‌ನ ಚರಿತ್ರೆ ಬರಿ ?

ಅವನು ಪಾಣಿಪಟ್ಟದ 1ನೆ ಯುದ್ಧದಿಂದ ಸಿಂಹಾಸನಕ್ಕೆ ಬಂದು 1527ಲ್ಲಿ ಚಿತ್ತೂರು ಸಂಗನನ್ನು ಸಿಕ್ರಿ ಯುದ್ಧದಲ್ಲಿ ಕೊಂದು 1528ಲ್ಲಿ ಮೇದಿನಿರಾಯನ ಚಂದ್ರಿಕೋಟೆಯನ್ನು ಹಿಡಿದು ಬಂಗಾಳಾ ಬಿಹಾರ್ ದೇಶಗಳನ್ನು ಗೆದ್ದು ಸತ್ತನು.

77. ಬಾಬರ್‌ನ ಸಾವು ವಿಚಿತ್ರವಾದೆನ್ನುವರು ಅದೇನು ?

ಬಾಬರನು ಕಾಯಿಲೆಯಿಂದ ನರಳುವ ತನ್ನ ಮಗನಾದ ಹುಮಾಯೂನ್‌ನನ್ನು ನೋಡಿ ಮಗನ ಮೇಲಣ ಕನಿಕರದಿಂದ "ಹುಮಾಯೂನ್‌ಗೆ ಗುಣವಾಗಲಿ ಆ ಜಾಡ್ಯ ತನಗೆ ಬರಲಿ" ಯೆಂದು ಮಂತ್ರ ಹೇಳಿ ಅವನನ್ನು 3 ಸಲ ಪ್ರದಕ್ಷಿಣೆ ಮಾಡಲು ಹುಮಾಯೂನ್‌ಗೆ ಗುಣವಾಯಿತು ಬಾಬರ್ ಆ ರೋಗ ಬಂದು ಸತ್ತನು.

78. ಹುಮಾಯೂನ್‌ನ ಸಿಂಹಾಸನವನ್ನು ಕಿತ್ತು ಕೊಂಡವನ್ಯಾರು ?

ಅಫ್ಘಾನಿಸ್ಥಾನದ ಸೂರ್ ಮನೆತನದ ಶೇರ್‌ಖಾನ್ ಎಂಬುವನು.

79. ಹುಮಾಯೂನ್‌ನ ಚರಿತ್ರೆಯನ್ನು ಸಂಕ್ಷೇಪಿಸಿ ತಿಳಿಸು ?

ಗುಜರಾತಿನ ಬಹದೂರ್ ಷಹನು ಡಿಲ್ಲಿಯನ್ನು ಜೈಸಿ ಚಕ್ರವರ್ತಿತ್ವ ಪಡೆಯಬೇಕೆಂದು ದಂಡೆತ್ತಿ ಚಿತ್ತೂರಿಗೆ ಬರಲು ಅಲ್ಲಿದ್ದ ಸಂಗನ ವಿತಂತುವು ತನ್ನ ಮಗಳನ್ನು ಕಾಯಬೇಕೆಂಬ ಕೋರಿಕೆಯಂತೆ ದಂಡೆತ್ತಿ ಬಹದೂರ್‌ನ ಖಜಾನೆಯನ್ನು ಹಿಡಿದುಕೊಂಡನು. ಬಂಗಾಳದಲ್ಲಿದ್ದ ಶೇರ್‌ಖಾನ್ ದಂಗೆಯೆದ್ದದ್ದರಿಂದ ಅದನ್ನು ಅಡಗಿಸಲು ಚುನಾರ್ ಕೋಟೆಯವರೆಗೆ ಹೋಗಿ ಸೋತು ತನ್ನ ಹೆಂಡತಿಯನ್ನು ಶೇರ್‌ಖಾನನ ಸೆರೆಗೆ ಬಿಟ್ಟು ಪುನಃ ಕನೂಜಿನ ಬಳಿ ಸೋತು ಸಿಂಹಾಸನವನ್ನು ಕಳಕೊಂಡು ಅಮರಕೋಟೆಯ ಆಶ್ರಯದಲ್ಲಿ ಇದ್ದು ಪುನಃ ಹೆಂಡತಿಯನ್ನು ಕೂಂ

ದಿ ಅಲ್ಲಿ ಅಕ್ಬರನನ್ನು ಪಡೆದು ಪರ್ಷಿಯ ದೇಶಕ್ಕೆ ಹೋಗಿ ಆ ಅರಸಿನ ಅಭಿಪ್ರಾಯಾನುಸಾರ ಸುನ್ನಿ ಮತವನ್ನು ಬಿಟ್ಟು ಷಿಯಾ ಮತಕ್ಕೆ ಸೇರಿ ಆ ಅರಸನ ಸಹಾಯದೊಡನೆ 1555 ಲ್ಲಿ ಡಿಲ್ಲಿ ಸಿಂಹಾಸನವನ್ನು ಪಡೆದು ಒಂದು ದಿವಸ ಉಪ್ಪರಿಗೆಯ ಮೆಟ್ಟಿನಿಂದ ಬಿದ್ದು ಸತ್ತನು.

80. ದೇಶದ ಅಭಿವೃದ್ಧಿಗಾಗಿ ಷೇರುಷಾ ಮಾಡಿದ ಕೆಲಸಗಳೇನು?

(1) ಸಿಂಧೂನದಿಯಿಂದ ಬಂಗಾಳೆಯವರೆಗೆ 2000 ಮೈಲ್ ರಸ್ತೆ ಮಾಡಿಸಿದನು. (2) ಅಂಚೆ ಇಲಾಖೆಯನ್ನು ಏರ್ಪಾಟುಮಾಡಿದನು. (3) ಮರಮತ್ತು ಕೆಲಸಗಳಿಂದ ವ್ಯವಸಾಯವನ್ನು ಅಭಿವೃದ್ಧಿಮಾಡಿದನು.

81. ಷೇರುಷಾನಿಗೆ ಬಂದ ಅಪವಾದವೇನು ?

ಇವನು ಮಾಳವಕ್ಕೆ ಹೋಗಿ ರೇಸೀನ್ ಕೋಟೆಯನ್ನು ಮುತ್ತಿ ಕೋಟೆಯನ್ನು ಬಿಟ್ಟರೆ ಪ್ರಾಣರಕ್ಷಣೆ ಮಾಡುವೆನೆಂತ ಹೇಳಿ ಹಾಗೆ ಅವರು ಕೋಟೆಯನ್ನು ಬಿಟ್ಟಮೇಲೆ ಅವರನ್ನೆಲ್ಲಾ ಕೊಂದನು.

82. ಅಕ್ಬರನು ರಾಜಪುತ್ರರೊಡನೆ ಸ್ನೇಹ ಬೆಳಸಿದ ತಂತ್ರವೇನು ?

ವಿವಾಹ ಸಮ್ಮಂಧವಾದ್ದು (ಜಯಪುರ ಮತ್ತು ಜೋಡ್ಪುರದ ರಾಜರ ಮಕ್ಕಳನ್ನು ಅಕ್ಬರನು ಮದುವೆಯಾದನು.)

83. ಅಕ್ಬರನ ದಂಡು ಹೆಂಗಸಿನ ಮೇಲೆ ಯುದ್ಧಮಾಡಿ ಸೋತಿತು ಎಂದು ಹೇಳುವರು ? ಇದನ್ನು ಸಾಕ್ಷಿತ್ವದಿಂದ ತೋರಿಸು.

ಅಕ್ಬರನ ದಂಡು ಮುರಾದನೊಡನೆ ಅಹಮ್ಮದ ನಗರಕ್ಕೆ ಹೋಗಿ ಚಾಂದಬೀಬಿಯಿಂದ ಸೋಲಿಸಲ್ಪಟ್ಟಿತು.

84. ತೋದರು ಮಾಲ್ ಯಾರು? ಇವ ಮಾಡಿದ ಮುಲ್ಕಿ ಏರ್ಪಾಡುಗಳೇನು?

ಇವನು ಅಕ್ಬರನ ಆಳಿಕೆಯಲ್ಲಿ ಪ್ರಸಿದ್ಧನಾದ ಆಫಿಸರ್. ಇವನು ಮುಲ್ಕಿಯಲ್ಲಿ ಕಲಶಾಜಮೀನ್, ಜಹಗೀರ್ ಎಂದು ವಿಂಗಡಿಸಿ ಕಲಶಾ ಜಮೀನಿನ ಮೊಬಲಗು ಪಾದುಷಹನಿಗೆ ಸಲ್ಲಬೇಕೆಂತಲೂ ಜಹಗೀರ್ ಜಮೀನ್

ಸರ್ಕಾರದ ಉದ್ಯೋಗಸ್ಥರು ಅನುಭವಿಸಿಕೊಂಡು ಕ್ಲುಪ್ತವಾದ ಕಂದಾಯವನ್ನು ಸರ್ಕಾರಕ್ಕೆ ಕೊಡುವಂತೆಯೂ ಏರ್ಪಾಡು ಮಾಡಿದನು.

85. ಐನೆ ಅಕ್ಬರಿ ಅಂದರೇನು ? ಇದರಿಂದ ಏನು ತಿಳಿಯುತ್ತೆ?

ಐನೆ ಅಕ್ಬರಿ ಅಂದರೆ ಅಕ್ಬರಿನ ಚರಿತ್ರೆ. ಇದರಲ್ಲಿ ಅಕ್ಬರನ ಕಾನೂನುಗಳು ಮತ್ತು ತಿದ್ದುಪಾಟುಗಳು ತಿಳಿಯುತ್ತೆ.

86. ಅಕ್ಬರನ ಆಳಿಕೆಯಲ್ಲಿ ಡಿಲ್ಲಿಗೆ ಸೇರಿದ ದೇಶಗಳ್ಯಾವವು?

ಚಿತ್ತೂರು, ಅಹಮ್ಮದನಗರ, ಬಂಗಾಳ, ಇನ್ನು

87. ಜಹಾಂಘೀರನ ನ್ಯಾಯ ವಿಚಾರಣೆಯಲ್ಲಿ ಆಶ್ಚರ್ಯವೇನು ?

ದೂರು ಹೇಳಿಕೊಳ್ಳತಕ್ಕವರು ಅರಮನೆಯ ಬಾಗಿಲಲ್ಲಿ ಕಟ್ಟಿದ್ದ ಸರಪಣಿಯನ್ನು ಅಲ್ಲಾಡಿಸಿದರೆ ದೊರೆಯ ಕೊಠಡಿಯಲ್ಲಿ ಒಂದು ಘಂಟೆ ಶಬ್ದವಾಗುತ್ತಿತ್ತು. ಕೂಡ್ಲೆ ದೊರೆಯು ಬಂದು ಖುದ್ದು ವಿಚಾರಿಸುತ್ತಿದ್ದನು.

88. ಜಹಾಂಗೀರನು ಯಾರಿಂದ ಶೆರೆ ಹಿಡಿಯಲ್ಪಟ್ಟನು?

ಸೈನ್ಯಾಧಿಕಾರಿಯಾದ ಮಹಬತ್‌ಖಾನನಿಂದ ಶೆರೆ ಹಿಡಿಯಲ್ಪಟ್ಟನು.

89. ಚರಿತ್ರೆಯಲ್ಲಿ ಮಹಬತ್‌ಖಾನನ ವಿಷಯವಾಗಿ ಏನು ತಿಳಿಯುತ್ತೆ?

ಇವನು ಕಾಬೂಲಿನ ಅಧಿಕಾರಿಯಾಗಿದ್ದು ನೂರ್ಜಹಾನ ಅಪೇಕ್ಷೆಯಂತೆ ಡಿಲ್ಲಿಯ ಸೈನ್ಯಾಧಿಕಾರವನ್ನುವಹಿಸಿ ಇದ್ದಾಗ್ಯೂ ನೂರ್ಜಹಾನ ಅಭಿಪ್ರಾಯಕ್ಕೆ ವಿರೋಧವಾಗಿ ಪರ್ವಿಜ್ ಎಂಬವನಿಗೆ ಸಿಂಹಾಸನ ಬರುವಹಾಗೆ ಮಾಡಬೇಕೆಂದು ಇರುವಲ್ಲಿ ಜಹಾಂಗೀರನಿಂದ ಕರಿಸಲ್ಪಟ್ಟು ದೊರೆಯು ಮುಖನೋಡುವದಿಲ್ಲವೆಂದು ಹೇಳಿದ್ದನ್ನು ಕೇಳಿ ಈ ಅವಮಾನವನ್ನು ಕಳಕೊಳ್ಳಲು ನೂರ್ಜಹಾನೊಡನೆ ಜಹಾಂಗೀರ್‌ನನ್ನು ಜೇಲಂ ನದಿಯ ಬಳಿ ಶೆರೆ ಹಿಡಿದುಕೊಂಡನು.

90. ಉದಯಸಿಂಗ್‌ನ ಚರಿತ್ರೆಯನ್ನು ಬರೀರಿ ?

ಇವನು ಚಿತ್ತೂರನ್ನು ಆಳುತ್ತಿದ್ದಾಗ ಅಕ್ಬರನು ಇವನ ಮೇಲೆ ದಂಡೆತ್ತಿದಾಗ ಇವನು ಅಕ್ಬರನ ಅಭಿಪ್ರಾಯದಂತೆ ವಿವಾಹ ಸಮ್ಮಂಧವನ್ನು ಬೆಳಸದೆ ಹೋದ್ದರಿಂದಾ ಅಕ್ಬರನಿಂದ ಓಡಿಸಲ್ಪಟ್ಟು ಆರಾವಲಿ ಬೆಟ್ಟಕ್ಕೆ

ಓಡಿಹೋಗಿ ಅಲ್ಲಿ ಉದಯ ಪುರವೆಂಬ ಪಟ್ಟಣವೆಂಬ ಊರನ್ನು ಕಲ್ಪಿಸಿ ಕೊಂಡನು.

91. ಹೇಮುವಿನ ಚರಿತ್ರೆಯನ್ನು ಬರೆಯಿರಿ ?

ಇವನು ಸರವುನೆತನದ ಆದಿಲ್‌ಷಹನ ಪ್ರಧಾನನಾಗಿದ್ದು ಹಿಂದುಗಳ ಪ್ರಭುತ್ವವನ್ನು ಸ್ಥಾಪಿಸಬೇಕೆಂದು ಇಂಡಿಯಾದ ಮೇಲೆ ದಂಡೆತ್ತಿ 1556ಲ್ಲಿ ಪಾಣಿಪಟ್ಟಣದ 2 ನೆಯುದ್ಧದಲ್ಲಿ ಅಕ್ಬರನಿಂದ ಸೋಲಿಸಲ್ಪಟ್ಟನು.

92. ಬೈರಾಂಖಾನನ ಚರಿತ್ರೆ ಬರೆಯಿರಿ?

ಇವನು ಮೊಗಲಾಯರ ಮಂತ್ರಿಯಾಗಿದ್ದಾಗ್ಯೂ ಅಕ್ಬರನ ಚಿಕ್ಕ ವಯಸ್ಸಿನಲ್ಲಿ ರಾಜ್ಯದ ಆಡಳಿತವನ್ನು ನೋಡುತ್ತಾ ಆಗ ದಂಡೆತ್ತಿ ಬಂದ ಹೇಮುವನ್ನು ಯುದ್ಧದಲ್ಲಿ ಸೋಲಿಶಿ ತನ್ನ ಅಹಂಕಾರ ತನ್ನಕೆಲಸವನ್ನುಕಳೆಕೊಂಡು ಮಕ್ಕಾಕ್ಕೆ ಹೋಗುತ್ತಾ ದಾರಿಯಲ್ಲಿ ಒಬ್ಬ ಶತ್ರುವಿನಿಂದಾ ಕೊಲ್ಲಲ್ಪಟ್ಟನು.

93. ಷಹಾಜಹಾನನು ಪೋರ್ಚುಗೀಸರನ್ನು ಕೊಲ್ಲಿಸುವದಕ್ಕೆ ಕಾರಣವೇನು ? ಕೊಲೆ ಹ್ಯಾಗೆ ನಡಿಯಿತು ?

ಇವನು ತನ್ನ ತಂದೆಯಮೇಲೆ ಧಂಗೆ ಯದ್ದಾಗ ತನ್ನ ಇರಾದೆಯಂತೆ ಪೋರ್ಚುಗೀಸರು ತನಗೆ ಸಹಾಯ ಮಾಡದ್ದರಿಂದಾ ತಾನು ಸಿಂಹಾಸನಕ್ಕೆ ಬಂದಮೇಲೆ ಆದ್ವೇಷದಿಂದಾ ಪೋರ್ಚುಗೀಸರು ಮಹಮ್ಮದಿಯರಾಗಬೇಕು. ಮತ್ತು ತಮ್ಮ ಕೋಟೆಗಳನ್ನು ಬಿಟ್ಟು ಬಿಡಬೇಕೆಂತ ಬಲಾತ್ಕರಿಸಲು ಅವರು ಹಾಗೆ ಮಾಡಲಿಲ್ಲಾ ಆದ್ದರಿಂದಾ ಅವರನ್ನು ಕೊಂದು ಅವರ ಹೆಂಗಸರನ್ನು ಜನಾನಕ್ಕೆ ತಕ್ಕೊಂಡನು.

94. ಷಹಾಜಹಾನನಿಗೆ ಎಷ್ಟು ಜನ ಮಕ್ಕಳಿದ್ದರು ? ಅವರ ಗುಣಗಳನ್ನು ವಿವರಿಸು ?

ಷಹಾಜಹಾನನಿಗೆ 4 ಜನ ಗಂಡು ಮಕ್ಕಳು ಇದ್ದರು. ಅವರಲ್ಲಿ—

1ನೇ ದಾರ—ನಿಷ್ಕಪಟಿ, ಉದಾರಿ, ಮುಂಗೋಪಿ, ನಿಷ್ಪಕ್ಷಪಾತಿ.

2ನೇ ಸೂಜ—ಷೋದಾತನಉಳ್ಳವನು.

3ನೇ ಔರಂಗಜೇಬ್—ಜಾಗ್ರತೆವಂತ,ಧೈರ್ಯಶಾಲಿ,ಕಪಟಿ, ಮೋಸಗಾರ.
4ನೇ ಮುರಾದ-ವ್ಯಭಿಚಾರಿ.

95. ಷಹಾಜಹಾನನನ್ನು ಯಾರು ಯಾವಾಗ ಯಾತಕ್ಕೋಸ್ಕರ ಸೆರೆಹಿಡಿದರು ?

ಇವನ 3 ನೆ ಮಗನಾಗಿ ದಕ್ಷಿಣದ ಅಧಿಕಾರಿಯಾಗಿದ್ದ ಔರಂಗ್ ಜೇಬ್ 1658ಲ್ಲಿ ಷಹಾಜಹಾನನಿಗೆ ದಾರನಮೇಲೆ ಇದ್ದ ಮಮತೆಯನ್ನು ತಪ್ಪಿಸಬೇಕಾಗಿ ಸೆರೆ ಹಿಡಿದನು.

96. ಮಯೂರಸನದ ವಿಷಯದಲ್ಲಿ ಏನೇನು ತಿಳಿದಿದೆ ?

ಇದು ಷಹಾಜಹಾನನಿಂದ ಕಟ್ಟಲ್ಪಟ್ಟ ಅತಿ ರಮ್ಯವಾದ ಸಿಂಹಾಸನವು 1739ಲ್ಲಿ ಇದನ್ನು ನಾದಿರ್‌ಷಹ ತೆಗದುಕೊಂಡು ಹೋದನು.

97. ತಾಜಮಹಲ್‌ನ ವಿಷಯದಲ್ಲಿ ನಿನಿಗೆ ಏನು ತಿಳಿದಿದೆ?

ಷಹಜಹಾನನು ತನ್ನ ಹೆಂಡತಿಯಾದಮುಂಟಾಜಮಹಾಲ್‌ಯಂಬವಳ ಗೌರವಾರ್ಥವಾಗಿ ಅಲಂಕಾರ ವೈಖರಿಯಿಂದ ಕಟ್ಟಲ್ಪಟ್ಟ ಈ ನೂತನ ಕಟ್ಟಡವೂ ಈಗಲೂ ಇದೆ.

98. ಸಿಂಹಾಸನವನ್ನು ವಶ ಪಡಿಸಿ ಕೊಳ್ಳುವದಕ್ಕೆ ಔರಂಗಜೇಬ್ ಮಾಡಿದ ತಂತ್ರವೇನು ?

ಮುರಾದನಿಗೆ ಸಿಂಹಾಸನಕೊಟ್ಟು ತಾನು ಮಕ್ಕಾಕ್ಕೆ ಹೋಗುವಂತೆ ಔರಂಗಜೇಬನು ಮುರಾದನಿಗೆ ಕಾಗದ ಬರದು ಅವನನ್ನು ಕೂಡಿಸಿಕೊಂಡು ಷಹಾಜಹಾನನನ್ನು ಸೆರೆ ಹಿಡಿದು ಸಿಂಹಾಸನವನ್ನು ಮುರಾದನಿಗೆ ಕೊಡುವವನಂತೆ ನಟಿಸಿ ಅವನು ಹೆಂಡ ಸುಡುಕನೆಂತ ಸಾರಿ ತಾನು ಸಿಂಹಾಸನಕ್ಕೆ ಬಂದನು.

99. ಔರಂಗಜೇಬ್ ರಾಜ ತಂತ್ರಕ್ಕೆ ವಿರೋಧವಾಗಿ ಮಾಡಿದ ಕಾರ್ಯವೇನು ?

ಔರಂಗಜೇಬನು ಸಿಂಹಾಸನಕ್ಕೆ ಬರಲು ರಾಜಪುತ್ರರು ಸಹಾಯ ಮಾಡಿದ್ದರು. ಸಿಂಹಾಸನಕ್ಕೆ ಬಂದ ಮೇಲೆ ಆ ಉಪಕಾರವನ್ನೆಣಿಸದೆ ಅವರೊಡನೆ ದ್ವೇಷವನ್ನು ಬೆಳಸಿದನು. ಅನ್ಯಾಯವಾಗಿ ತನ್ನ ದೇಶದ

ಮುಸಲ್ಮಾನ್ ಮತ್ತು ಹಿಂದುಗಳೊಡನೆ ದ್ವೇಷ ಬೆಳಸಿದನು.

100. ಇವನು ಡಿಲ್ಲಿಗೆ ಸೇರಿಸಿದ ದಕ್ಷಿಣದ ರಾಜ್ಯಗಳು ಯಾವವು?

ಬಿಜಾಪುರ, ಗೋಲಕೊಂಡ, ಕರ್ನಾಟಕ, ತೆಲಿಂಗನ, ಇವು.

101. ಸತ್ಯ ನಾರಾಯಣರು ಯಾರು? ಇವರನ್ನು ಯಾರು ಯಾತಕ್ಕೋಸ್ಕರ ಅಡಗಿಸಿದರು?

ನಾರ್ನಲ್ ಸ್ಥಳದ ಹಿಂದುಗಳೆ ಸತ್ಯನಾರಾಯಣರು. ಇವರು ತಮಗೆ ಮರಣವಿಲ್ಲದಹಾಗೆ ದೇವರ ವರವಿದೆ ಎಂದು ಪ್ರಸಿದ್ಧ ಮಾಡುತ್ತಿದ್ದುದರಿಂದಾ ಇವರು ಹೆಚ್ಚಿದರೆ ತನಗೆ ಒಳ್ಳೇದಾಗಲಾರದೆಂದು ಔರಂಗಜೇಬನು ಅಡಗಿಸಿದನು.

102. ಮೊಗಲಾಯಿ ಚಕ್ರವರ್ತಿಗಳ ಪ್ರಸಿದ್ಧರಾದ ಇಬ್ಬರು ಯಾರು? ಅವರ ಗುಣದ ತಾರತಮ್ಯವೇನು.

| 1 ಅಕ್ಬರ್ (ಸುಗುಣಿ) | 2 ಔರಂಗಜೇಬ್ (ದುರ್ಗುಣಿ) |
|---|---|
| 1 ಅಕ್ರಮವಾದ ತಲೆ ತೆರಿಗೆಯನ್ನು ಮನ್ನಾ ಮಾಡಿದ್ದನು. | ಇವನು ಜಾರಿಗೆ ತಂದನು. |
| 2 ಮತದ್ವೇಷ ಮಾಡಲಿಲ್ಲಾ (ಹಿಂದುಗಳೊಡನೆವಿವಾಹವನ್ನುಮಾಡಿದ) | ಮತದ್ವೇಷದಿಂದ ಹಿಂದುಗಳೊಡನೆ ದ್ವೇಷಮಾಡಿದನು. |

103. ಮೀರಜುಮ್ಲಾ, ಯಶವಂತಸಿಂಗ್ ಇವರು ಯಾರು ?

ಮೀರಜುಮ್ಲನು ಔರಂಗಜೇಬನ ದಳಪತಿ, ಯಶವಂತಸಿಂಗನು ರಾಜಪುತ್ರರ ಅಧಿಕಾರಿಗಳಲ್ಲೊಬ್ಬನು.

104. ಮಯೂರಾಸನದ ಮೇಲೆ ಮೊದಲನೆ ಮತ್ತು ಕೊನೆಯವರ್ಯಾರು?

ಮೊದಲನೆಯವನು ಷಹಾಜಹಾನ್ ಕೊನೆಯವನು ಮಹಮ್ಮದಷಹನು.

105. ನಾದಿರ್‌ಷಹಯಾರು ? ಇವನು ಯಾವಾಗ ಯಾತಕ್ಕೋಸ್ಕರ ಇಂಡಿಯಾಕ್ಕೆ ಬಂದು ಏನು ಮಾಡಿದಾ?

ಪರ್ಷ್ಯಾದೇಶದ ಧೊರೆಯಾದ ಇವನು ನೈಜಾಮುಲ್ ಮುಲ್ಕನ ಕೋರಿಕೆಯಂತೆ 1739ಲ್ಲಿ ಇಂಡಿಯಾಕ್ಕೆ ಬಂದಿಕರ್ನಾಲ್ ಬಳಿ ಮಹಮ್ಮದಷಹ

ಚಕ್ರವರ್ತಿಯನ್ನು ಸೋಲಿಸಿ ಡಿಲ್ಲಿಯನ್ನು ಲೂಟಮಾಡಿ ಮಯೂರಾಸನವನ್ನು ತೆಕ್ಕೊಂಡು ಹೋದನು.

106. ಮೊಗಲಾಯಿ ರಾಜ್ಯದ ಕ್ಷೀಣ ದಶೆಯಲ್ಲಿ ಪ್ರಸಿದ್ಧರಾದ ಇಬ್ಬರು ಮಂತ್ರಿಗಳು ಯಾರು? ಅವರಿಗೆ ಯಾವ ಹೆಸರು ಬಂತು? ಯಾಕೆ?

1 ಬಿಹಾರ್ ದೇಶದ ಸೈಯ್ದ ಹುಸೇನ್ಅಲಿ, 2 ಅಲಹಾಬಾದಿನ ಸೈಯ್ದ ಅಬ್ದುಲ್ಲಾ ಇವರು ಜಹಂದರನ ತರುವಾಯ 4 ಮಂದಿಗೆ ಸಿಂಹಾಸನಕ್ಕೆ ಬರುವದಕ್ಕೆ ಸಹಾಯಮಾಡಿದ್ದರಿಂದ ಇವರಿಗೆ ರಾಜ ಪ್ರತಿಷ್ಠಾಪಕರೆಂಬ ಹೆಸರು ಬಂತು.

107. ಅಹಮ್ಮದಷ ಅಬ್ದಾಲಿ ಯಾರು? ಇವನು ಎಷ್ಟುಸಲ ಇಂಡಿಯಾದಮೇಲೆ ದಂಡೆತ್ತಿದನು?

ಇವನು ಕಾಂದಹಾರ್ ದೇಶದ ಧೊರೆ ಇವನು ಯಿಂಡಿಯಾದಮೇಲೆ 6 ಸಲ ದಂಡೆತ್ತಿದನು.

108. ಮೊಗಲರಿಗೆ ಜಯವಾದ ಆಖೈರ್ ಯುದ್ಧವ್ಯಾವದು?

ಸರ್ಹಿಂದಿನ ಎರಡನೆ ಯುದ್ಧ.

109. ಮೊಗಲಾಯಿ ಚಕ್ರವರ್ತಿಗಳಲ್ಲಿ ಕೊನೆಯವನು ಯಾರು? ಅವನ ಪರ್ಯವಸಾನವೇನು?

ಮಹಮ್ಮದ ಬಹದೂರ್ ಷಹನೆ ಕೊನೆಯವನು. ಇವನು ನಾನಾರಾಯನ ಧಂಗೆಯಲ್ಲಿ ಸೇರಿದ್ದನೆಂದು ಇಂಗ್ಲೀಷರಿಂದ ರಂಗೂನಿಗೆ ಕಳುಹಿಸಲ್ಪಟ್ಟನು.

110. ಇಂಡಿಯಾದ ಮೇಲೆ ದಂಡೆತ್ತಿದ ಮೊದಲನೆ ಮಹಮ್ಮದಿಯ ಯಾರು?

ಅರಬಿಯ ಮಹಮ್ಮದ ಕಾಸಿಂ ಎಂಬುವನು.

111. ಮೊಗಲಾಯಿ ಚಕ್ರವರ್ತಿಗಳಲ್ಲಿ ಈ ಕೆಳಗಿನವರು ಯಾರು?

ವ್ಯವಸಾಯಕ್ಕೆ ಅನುಕೂಲ ಮಾಡಿದವನು = ಷಹಾಜಹಾನ್
ಬಹಳ ಕಷ್ಟಕ್ಕೆ ಒಳಪಟ್ಟವನು = ಹುಮಾಯೂನ್

ನ್ಯಾಯವಿಚಾರಣೆಯಲ್ಲಿ ನಿರತನಾದವನು = ಜಹಾಂಗೀರ
ಅನ್ಯಮತದ್ವೇಷಿ = ಔರಂಗಜೇಬ್
ಜನರ ಅನುರಾಗಕ್ಕೆ ಪಾತ್ರ = ಅಕ್ಬರ

112. ಮಹಾರಾಷ್ಟ್ರರ ಅಧಿಕಾರವನ್ನು ಸ್ಥಾಪಿಸಿದವನು ಯಾರು? ಅವನು ಯಾವಾಗ ಎಲ್ಲಿ ಹುಟ್ಟಿದನು?

ಮಹಾರಾಷ್ಟ್ರರ ಅಧಿಕಾರವನ್ನು ಸ್ಥಾಪಿಸಿದವನು ಶಿವಾಜಿಯು. ಅವನು 1627ಲ್ಲಿ ಸೇಯೋನೂರು ಕೋಟೆಯಲ್ಲಿ ಹುಟ್ಟಿದನು.

113. ಶಿವಾಜಿಯು ಮೊಟ್ಟ ಮೊದಲು ಯಾವ ಕೋಟೆಯನ್ನು ಲೂಟ ಮಾಡಿದ, ಅದರಿಂದ ಅವನಿಗೆ ಏನು ಅನುಕೂಲ ವಾಯಿತು ?

ಶಿವಾಜಿಯು ಮೊದಲು ತೋರಣ ಕೋಟೆಯನ್ನು ಲೂಟ ಮಾಡಿದನು ಆದರಿಂದ ಅವನಿಗೆ ಧಾರಾಳವಾಗಿ ಯುದ್ಧ ಸಾಮಗ್ರಿಗಳು ಬದಗಿದವು.

114. ಶಿವಾಜಿಗೂ ಬೀಜಾಪುರದ ಗೌರ್ನಮೆಂಟಿನವರಿಗೂ ಸಂಬಂಧಿಸಿದ ಚರಿತ್ರೆಯನ್ನು ಬರೀರಿ ?

ಶಿವಾಜಿಯು ಬೀಜಾಪುರಕ್ಕೆ ಸೇರಿದ್ದ ಕಲ್ಯಾಣ ಪಟ್ಟಣವನ್ನು ಹಿಡಿಯಲು ಆ ಸುಲ್ತಾನನಿಂದ ಕಳುಹಿಸಲ್ಪಟ್ಟ ಅಫಜಲ್‌ಖಾನನು 1659ಲ್ಲಿ ಶಿವಾಜಿಯಿಂದ ಕೊಲ್ಲಲ್ಪಟ್ಟನು.

115. ಶಿವಾಜಿಯನ್ನು ದಂಡಿಸಲು ಔರಂಗಜೇಬ ಯಾಕೆ ಯತ್ನಿಸಿದಾ ?

ಶಿವಾಜಿಯು ಮೊಗಲರ ಯಾತ್ರೆಗಾರರ ಹಡಗನ್ನು ಲೂಟ ಮಾಡಿದ್ದನು ಆದ್ದರಿಂದ ಶಿವಾಜಿಯನ್ನು ದಂಡಿಸಲು ಪ್ರಯತ್ನ ಪಟ್ಟನು.

116. ಶಿವಾಜಿಗೂ ಔರಂಗಜೇಬಗೂ ಸಂಬಂಧಪಟ್ಟ ಚರಿತ್ರೆಯನ್ನು ವಿವರಿಸು ?

ಶಿವಾಜಿಯು ಮೊಗಲರ ಯಾತ್ರೆಗಾರರ ಹಡಗನ್ನು ಲೂಟ ಮಾಡಿದ್ದರಿಂದ ಶಿವಾಜಿಯನ್ನು ದಂಡಿಸುವದಕ್ಕಾಗಿ ಔರಂಗಜೇಬನಿಂದ ಕಳುಹಿಸಲ್ಪಟ್ಟದ್ದ ಷಾಯಿಸ್ತಾಖಾನ ಪುನಹೆಯಿಂದ ಓಡಿಸಲ್ಪಟ್ಟು ಹೋದ್ದಲ್ಲದೆ ಶಿವಾಜಿಯು ಸೂರತ್ತನ್ನು ಉಂಟುಮಾಡಿದ್ದಲ್ಲದೆ ಮೊಗಲಾಯಿ ರಾಜ್ಯ

ವನ್ನು ಕೊಳ್ಳ ಹೊಡೆದ್ದರಿಂದಾ ಈ ಘುಂಡುತನವನ್ನು ಅಣಗಿಸಲು ಔರಂಗಜೇಬಿನಿಂದ ಕಳುಹಿಸಲ್ಪಟ್ಟ ಜಯಶಿಂಗ್, ದಿಲಾವರ್‌ಖಾನ್ ಇವರೊಡನೆ ಪುರಂದರನಲ್ಲಿ ಒಂದು ಕರಾರುಮಾಡಿಕೊಂಡನು. (1ನೇ ಕರಾರು)

117. ಶಿವಾಜಿಯ ಗುಣಾತಿಶಯಗಳೇನು ? ಇವನಿಗೆ ಇನ್ನೊಂದು ಹೆಸರು ಯಾವದು ?

ಇವನು ತಂತ್ರಗಾರನು ಮತ್ತು ಶೂರನು, ವಿದ್ಯಾವಿಹೀನನು, ಧೈರ್ಯಶಾಲಿ ಇವನನ್ನು ಬೆಟ್ಟದ ಇಲಿ ಎನ್ನುವರು.

118. ಕ್ರಿ. 1680ರಿಂದ 1714 ವರಿಗೆ ಮರಾಟಿಯವರ ಚರಿತ್ರೆಯ ವಿಶೇಷವೇನು ?

ಸಾಂಬಾಜಿಯು ಗೋವಾ ಮತ್ತು ಜಂಜಿರಾ ಸ್ಥಳಗಳಲ್ಲಿದ್ದ ಪೋರ್ಚುಗೀಸರನ್ನು ಕೊಂದನು. ಇವನನ್ನು ಔರಂಗಜೇಬನು 1783ಲ್ಲಿ ಕೊಂದನು. ಆಗ ಮರಾಟಿಯವರು ರಾಮರಾಜನನ್ನು ಅರಸನನ್ನಾಗಿ ಮಾಡಿಕೊಂಡರು. 1700ಲ್ಲಿ ಔರಂಗಜೇಬನು ಸಾತಾರನ್ನು ಹಿಡಿದುಕೊಂಡನು. ರಾಮರಾಜ ಸತ್ತಮೇಲೆ ತಾರಾಬಾಯಿ ಆಳಿದಳು. ಅಷ್ಟರಲ್ಲೆ ಸಾಹು ಶಿಂಹಾಸನಕ್ಕೆ ಬಂದು ಹೆಂಗಸರೊಡನೆ ಕಾಲವನ್ನು ಕಳಯುತ್ತಿದ್ದನು. 1714ಲ್ಲಿ ಬಾಳಾಜಿ ವಿಶ್ವನಾಥನೆಂಬ ಬ್ರಾಹ್ಮಣನು ಪೇಷ್ವನಾದನು,

119. ಪೇಷ್ವ ಅಂದರೇನು ? ಮೊದಲನೇ ಪೇಷ್ವ ಯಾರು ? ಅವನಚರಿತ್ರೆಯನ್ನು ಬರೀರಿ ?

ಪೇಷ್ವ ಅಂದರೆ ಮುಖ್ಯ ಮಂತ್ರಿಯು ಇವರಲ್ಲಿ ಬಾಳಾಜಿ ವಿಶ್ವನಾಥನೆ ಮೊದಲನೆ ಪೇಷ್ವನು ಬಾಳಾಜವಿಶ್ವನಾಥಾ 1714-1720=6 ಇವನು ದೇಶದ ಸ್ಥಿತಿಯನ್ನು ಕ್ರಮಕ್ಕೆ ತಂದು ಚವುತಾಯವನ್ನು ವಸೂಲ್ಮಾಡಲಿಕ್ಕೂ ಶಿವಾಜಿಯು ಸಂಪಾದಿಶಿದ್ದ ಶೀಮೆಯನ್ನೆಲ್ಲಾ ಸ್ವತಂತ್ರವಾಗಿ ಆಳಲಿಕ್ಕೂ ಫರುಕ್ಸಿಯರಿಂದ ಅಪ್ಪಣೆ ಪಡದನು.

120. ಪೇಷ್ವರಲ್ಲಿ ಮುಖ್ಯನು ಯಾರು ? ಅವನು ತನ್ನಅಧಿಕಾರವನ್ನು ಬಲಪಡಿಸಿಕೊಳ್ಳುವದಕ್ಕೆ ಮಾಡಿದ ತಂತ್ರವೇನು?

ಬಾಜೀರಾವ್ 2 ನೇ ಪೇಷ್ವನೇ ಮುಖ್ಯಪೇಷ್ವೆ-ಇವನು ಸಾತಾರಕ್ಕೆ ದೂರಪ್ರದೇಶಗಳಲ್ಲೆಲ್ಲಾ ಚೌತಾಯಿ ವಸೂಲೀಗೆ ಮರಾಟೆಯ ಅಧಿಕಾರಿಗಳನ್ನಿಟ್ಟು ಅವರೆಲ್ಲರೂ ಒಂದೇ ಕಡೆಸೇರಿ ದೊಂಬಿ ಏಳವಂತೆ ಮಾಡಿದನು.

121. 3ನೇ ಪೇಷ್ವೆ ಯಾರು ? ಇವನ ಕಾಲದಲ್ಲಿ ದೇಶವು ಮಹೋನ್ನತತ್ವವನ್ನು ಹೊಂದಿತು? ಮತ್ತು ಬಹುಭಂಗಪಟ್ಟತು? ಅದನ್ನು ತೋರಿಸಿರಿ ?

ಬಾಳಾಜೀ ಬಾಜೀರಾವ್‌ನೇ 3ನೇ ಪೇಷ್ವೆ.

ದೇಶದ ಮಹೋನ್ನತಿ,—ಸಾಲ್‌ಬತ್‌ಜಂಗ್ ಮತ್ತು ನೈಜಾಮನಲ್ಲಿಯು ಅಹಮ್ಮದ ನಗರದಮೇಲೆ ದಂಡೆತ್ತಿ 1760ರಲ್ಲಿ ಸೋತು ದೌಲತಾಬಾದ್ ಆಸೀರ್‌ಘರ್, ಬಿಜಾಪುರ ಈ ಶೀಮೆಗಳನ್ನು ಪೇಷ್ವೆಗೆ ಕೊಟ್ಟನು. ಮರಾಟೆಯವರಿಗೆ ಇದರಷ್ಟು ಜಯ ಇನ್ನೆಲ್ಲಿಯೂ ಆಗಲಿಲ್ಲಾ.

ಭಂಗಪಡುವಿಕೆ,—ಮರಾಟೆಯವರು ಪಂಜಾಬಿನಮೇಲೆ ಬಿದ್ದು 1761ರಲ್ಲಿ ಅಬ್ದಾಲಿಯಿಂದ ಸೋಲಿಸಲ್ಪಟ್ಟರು. (ಪಾಣಿಪಟ್ಟು 3ನೇ ಯುದ್ಧ)

122. ಮಹಾರಾಷ್ಟ್ರರಿಗೆ ಕೇವಲಜಯವಾದ ಮತ್ತು ಕೇವಲ ಅಪಜಯವಾದ ಯುದ್ಧ ಯಾವದು ?

ಜಯವಾದ್ದು=ಉದಯಗಿರಿಯುದ್ಧ, ಅಪಜಯವಾದ್ದು =ಪಾಣಿಪಟ್ಟು 2ನೇ ಯುದ್ಧ.

123. 4ನೇ ಪೇಷ್ವೆ ಯಾರು ? ಇವನ ಕಾಲದಲ್ಲಿ ಮಹಾರಾಷ್ಟ್ರರು ಹಿಂದೂಸ್ಥಾನದ ಮೇಲೆ ಮಾಡಿದ ಸಾಹಸವೇನು ?

ಮಾಧವರಾಯನೇ 4ನೇ ಪೇಷ್ವೆನು ಇವನು ಹೈದರನನ್ನು ರಾಜಪುತ್ರರನ್ನು ಜಾತರನ್ನು ಗೆದ್ದು ಘಗದಿಯನ್ನು ಸಂಪಾದಿಸಿ ರೋಹಿಲ್ ಖಂಡವನ್ನು ಕೊಳ್ಳೆಹೊಡೆದನು.

124, ನಾನಾಫರ್ನವೀಸಯಾರು ? ಅವನ ಚರಿತ್ರೆಯನ್ನು ಬರಿ?

ಇವನು 6ನೇ ಪೇಷ್ವೆ ಮಾಧವರಾಯನ ಸಭಾಧ್ಯಕ್ಷನು. ಇವನುಪುರಂದರಿನ ಕರಾರ್ ಇಂಗ್ಲಂಡಿನ ಡೈರೆಕ್ಟರಗಳಿಂದ ರದ್ದುಮಾಡಲ್ಪಟ್ಟು 1779ಲ್ಲಿ ಬೊಂಬಾಯಿ ಡಂಡಿಫೊಡನೆ ಇವನಿಗೆ ಯುದ್ಧ ನಡದು (ತೆಲಗಾ)

ವಾಗರ್ಗಾಂ ಕರಾರು ಆಗಿ ಅದೂ ಮಂಜೂರಾಗದೆ ಬಂಗಾಳ ದಂಡಿನವರು ಶಿಂಧ್ಯನನ್ನು ಸೋಲಿಸಿದ ಮೇಲೆ ಹೈದರನು ಮದ್ರಾಸಿನ ಮೇಲೆ ದಂಡೆತ್ತಿದ್ದರಿಂದ ವಾರ್ರನ್ ಹೇಸ್ಟಿಂಗ್ಸ ನಾನಾಫರ್ನವೀಸನನ್ನು ಸರ್ವಾಧಿಕಾರಿಯಾಗಿ ಒಪ್ಪಿ 1800 ಲ್ಲಿ ಕರಡ್ಲದ ಯುದ್ಧದಲ್ಲಿ ನೈಜಾಮನನ್ನು ಸೋಲಿಸಿ ಸತ್ತನು.

125. ಮೊದಲನೇ ಮರಾಟಿ ಕಲಹದಲ್ಲಿ ಮರಾಟೆಯವರ ದಂಡು ಯಾರ ಕೈಕೆಳಗೆ ಬಂತು?

ಶಿಂಧ್ಯನ ಕೈಕೆಳಗೆ ಬಂತು.

126. ಮೊದಲನೇ ಮಹಾರಾಷ್ಟ್ರ ಕಲಹದಲ್ಲಿ ಸೇರಿದ ಇಂಗ್ಲೀಷು ಸರದಾರರು ಮಾಡಿದ ಸಾಹಸವನ್ನು ಹೇಳು?

1 ಕೀಟಿಂಗ್—ಆರಾಸ ಬಳಿ ಮರಾಟೆಯವರನ್ನು ಗೆದ್ದನು.

2 ಕೊಬರ್ನ—ತಲೆಗಾಂವ ಬಳಿ ಸೋತನು.

3 ಕರ್ನಲ ಗಾಡಾರ್ಡ್—ಅಹಮ್ಮದಾಬಾದನ್ನು ಹಿಡಿದುಕೊಂಡು ಶಿಂಧ್ಯ ಮತ್ತು ಹೋಲ್ಕರನನ್ನು ಸೋಲಿಸಿದನು.

4 ಹಾರಟ್ಲಿ—ಬೇಸೀನನ್ನು ಹಿಡಿದುಕೊಂಡನು.

5 ಕೇಪ್ಟನ್ ಪೋಫಾಂ—ಲೇಹಾರ್ ಮತ್ತು ಗ್ವಾಲಿಯರನ್ನು ಹಿಡಿದುಕೊಂಡನು!

127. ಮೊದಲನೆ ಮರಾಟೆಗರ ಕಲಹದಲ್ಲಿ ಇಂಗ್ಲೀಷರಿಗೆ ಜಯವಾಯಿತು. ಆದರೂ ಮರಾಟೆಯವರೊಡನೆ ಸಮಾಧಾನ ಮಾಡಿಕೊಳ್ಳಬೇಕಾಯಿತು ಯಾಕೆ ?

ಮೈಸೂರು ದೇಶದ ಹೈದರನು ಮದ್ರಾಸಿನಮೇಲೆ ದಂಡೆತ್ತಿದ್ದರಿಂದಾ ಅವನನ್ನು ಎದುರಿಸಲು ವಾರ್ರನ್ ಹೇಸ್ಟಿಂಗ್ಸ ಶಿಂಧ್ಯನಿಗೆ ಲಂಚ ಕೊಟ್ಟು ತನ್ನ ಕಡೆಗೆ ಕರಕೊಂಡನು.

128. ಮರಾಟೆ ಅಧಿಕಾರಿಗಳು ಪೇಷ್ವನ ಅಧಿಕಾರದ ಕೈ ಕೆಳಗೆ ಮಾಡಿದ ಆಖೈರ ಯುದ್ಧವ್ಯಾವದು ?

ಕರಡ್ಲದ ಯುದ್ಧ.

129. ಬೇಸೀನ ಕರಾರಿನ ಮುಖ್ಯೋದ್ದೇಶವೇನು ?

ಪೇಷ್ವನು ಇಂಗ್ಲೀಷರಿಗೆ ಅಧೀನನಾಗಿ ಇರಬೇಕೆಂಬ.

130. ಎರಡನೆ ಮರಾಟೆ ಕಲಹದಲ್ಲಿ ಸೇರಿದ 2 ಇಂಗ್ಲೀಷು ಸರದಾರರ ಹೆಸರನ್ನು ಅವರವರ ಸಾಹಸಗಳನ್ನೂ ಹೇಳಿ?

1. ಜನರಲ್ ವೆಲ್ಲೆಸ್ಲಿ—ಅಹಮ್ಮದನಗರ ಆಲಿಘರನ್ನು ತೆಗೆದುಕೊಂಡು ಶಿಂಧ್ಯಮತ್ತು ರಘೋಜಿಬೋನಸ್ಲಿಯನ್ನು ಗೆದ್ದು ಅವರೊಡನೆ ದೇವರ್ಗ್ ಕರಾರ್ಮಾಡಿಕೊಂಡನು.
2. ಜನರಲ್‌ಲೇಕ್—ಅಲಿಘರ್, ಆಗ್ರಾ,ಡೆಲ್ಲಿ ಇವನ್ನು ಹಿಡಿದುಕೊಂಡು ಶಿಂಧ್ಯನನ್ನು ಸೋಲಿಸಿ ಅವನೊಡನೆ ಸರ್ಜಿಅಂಜಿಂಗಾರ್ವ್ ಕರಾರ್ಮಾಡಿಕೊಂಡನು.

131. ಹೋಲ್ಕರನ ಮೇಲೆ ಇಂಗ್ಲೀಷರು ಮಾಡಿದ ಕಲಹ ಯಾವದು?

ಮಾಹಿದ್‌ಪುರದ ಯುದ್ಧ.

132. ಕೊನೆ ಪೇಷ್ವೆ ಯಾರು? ಅವನಿಗೂ ಇಂಗ್ಲೀಷರಿಗೂ ನಡದ ಆಖೈರ ಯುದ್ಧ ಯಾವದು ?

2ನೇ ಬಾಜೀರಾವ್ ಕೊನೇ ಪೇಷ್ವೆ ಇವನ ಕೊನೆ ಯುದ್ಧ ಕೊರಿಗಾಂ ಯುದ್ಧ.

133. ನಾಗಪುರದ ಅಪ್ಪಾ ಸಾಹೇಬನ ಚರಿತ್ರೆಯನ್ನು ಹೇಳಿ ?

ಇವನು ಸಿತಾಬಲ್ಡಿ ಬೆಟ್ಟದಲ್ಲಿದ್ದ ಇಂಗ್ಲೀಷು ರೆಸಿಡೆಂಟ್ ಜೆಂಕಿನ್ಸ್‌ನನ್ನು ಮುತ್ತಿ ಕೇಪ್ಟನ್ ಹಿಡ್ಜರಾಲ್ಡ್‌ನಿಂದ ಓಡಿಸಲ್ಪಟ್ಟು ಹೋದನು. ಇವನ ದಂಡು ಜಬ್ಬಲ್‌ಪುರದ ಯುದ್ಧದಲ್ಲಿ ಜನರಲ್ ಹಾರ್ಜಿಮ್ಯಾರ್ನಿಂದ ಸೋತಿತು.

134. ಪಿಂಡಾರಿಗಳು ಯಾರು? ಅವರ ಕಲಹವನ್ನು ವಿವರಿಸು ?

ಕೊಳ್ಳೆ ಹೊಡದು ಜೀವಿಸುತ್ತಿದ್ದ ಕಳ್ಳರೇ ಪಿಂಡಾರಿಗಳು. ಇವರಲ್ಲಿ ಕೆಲವರನ್ನು ಜನರಲ್ ಹಿಸ್ಲಾಪ್, ಲಾರ್ಡ ಹೇಸ್ಟಿಂಗ್ಸ್, ಮೆ. ಲಾರ್ಕಿನ್ಸ್ ಇವರು ಕೊಂದರು. ಇವರ ಮುಖ್ಯಸ್ಥರಲ್ಲಿ ಚೀಟು ಹುಲಿಯಿಂದ ಸತ್ತನು. ಕರೀಂಖಾನ್ ಇಂಗ್ಲೀಷರಿಗೆ ವಿಧೇಯನಾಗಿ ಜಹಗೀರ ಪಡದನು.

135. ಮರಾಟೆಯವರ ಅಧಿಕಾರವು ಕ್ಷೀಣಿಸುವದಕ್ಕೆ ಕಾರಣವೇನು?

1 ಮಹಾದಾಜಿ ಶಿಂಧ್ಯನು ಪೇಷ್ವನ ಅಧಿಕಾರಕ್ಕೆ ಒಳಪಡಲಿಲ್ಲ.

2 ನಾರಾಯಣರಾವ್ ಸತ್ತಮೇಲೆ ಆ ಸ್ಥಾನದಲ್ಲಿ ಕಲಹ ಹುಟ್ಟಿತು.

3 ಎರಡನೆ ಷಾ ಆಲಂ ಇಂಗ್ಲೀಷರ ಪೋಷಣೆಗೆ ಸಿಕ್ಕಿದನು.

4 ಪಾಣಿಪಟ್ಟ 2ನೆ ಯುದ್ಧ. (5) ಕೊರಿಂಗಾಂ ಯುದ್ಧ. (6) ಬೇಶೀನ್ ಕರಾರು.

136. ತ್ರ್ಯಂಬಕ್ಜಿ ಡೆಂಗ್ಲಿಯನ ವಿಷಯವೇನು ?

ಗೂಢಚಾರಿಯಾದ ಇವನು ಬಾಜೀರಾವ್ ಹೋಲ್ಕರ ಶಿಂಧ್ಯ ಇವರುನ್ನು ಇಂಗ್ಲೀಷರ ಮೇಲೆ ಯುದ್ಧ ಮಾಡುವಂತೆ ಯುಕ್ತಿ ಕಟ್ಟಿದ್ದರಿಂದಾ ಎಲಿಫಿನ್‌ಸ್ಟನ್‌ನಿಂದ ಸೆರೆ ಇಡಲ್ಪಟ್ಟು ಸ್ನೇಹಿತನಮರಾಟಿ ಲಾವಣಿಯಿಂದ ಉಪಾಯವನ್ನರಿತು ತಪ್ಪಿಸಿಕೊಂಡು ಬಂದು ಪೇಷ್ವನು ಕೊಡುತ್ತಿದ್ದ ಹಣದಿಂದ ದಂಡನ್ನು ಜಮಾಯಿಸುತ್ತಿದ್ದು ಪುನಃ ಇಂಗ್ಲೀಷರಿಗೆ ಸೆರೆಯಿಕ್ಕಿ ಸೆರೆಮನೆಯಲ್ಲಿ ಸತ್ತನು.

137. ಇಂಡಿಯಾ ದೇಶದ ವರ್ತಕ ಸರಕುಗಳು ಪೂರ್ವದಲ್ಲಿ ಯುರೋಪ್ ಖಂಡಕ್ಕೆ ಹ್ಯಾಗೆ ಸಾಗಿಸಲ್ಪಡುತ್ತಿತ್ತು?

ಮೂರರೆಂಬ ಅರಬಿಯ ಮಹಮ್ಮದಿಯರಿಂದ ವೆನಿಸ್ ಮತ್ತು ಜಿನೊಆ ಪಟ್ಟಣಕ್ಕೆ ಸೇರಿ ಅಲ್ಲಿಂದ ಇಂಗ್ಲೀಷರಿಗೆ ತಲಪುತ್ತಿತ್ತು.

138. ಯೂರೋಪ್‌ನವರ ಪೈಕಿ ಯಾವ ದೇಶದವರು ಯಾರ ಕೆಳಗೆ ಯಾತಕ್ಕೋಸ್ಕರ ಇಂಡಿಯಾಕ್ಕೆ ಬಂದರು ?

ಪೋರ್ಚುಗಲ್ ದೇಶದವರು ವಾಸ್ಕೋಡಿಗಾಮನ ಕೆಳಗೆ ವ್ಯಾಪಾರಕ್ಕೋಸ್ಕರ ಬಂದರು.

139. ಯಾವ ಸಂಸ್ಥಾನದಲ್ಲಿ ನಿಂತರು? ಅಲ್ಲಿನ ಧೊರೆಯಾರು? ಆಗ ಡಿಲ್ಲಿಯಲ್ಲಿ ಯಾರಿದ್ದರು?

ಕಲ್ಲಿಕೋಟೆಯಲ್ಲಿ ನಿಂತರು. ಅಲ್ಲಿನ ಧೊರೆ ಜಾಮೋರಿನ್ ಆಗಿದ್ದನು. ಆಗ ಡಿಲ್ಲಿಯಲ್ಲಿ ಶಿಕಂದರ ಲೋಡಿಯು ಆಳುತ್ತಿದ್ದನು.

140. ವಾಸ್ಕೋಡಿಗಾಮನನ್ನು ಜಾಮೋರಿನನು ಮೊದಲು ಹ್ಯಾಗೆಬರಮಾಡಿಕೊಂಡರು ಆದ್ಯಾಕೆ ?

ವಾಸ್ಕೋಡಿಗಾಮನು ತಾನು ಪೋರ್ಚುಗಲ್‌ನ ಅರಸನಿಂದ ರಾಯಭಾರಿಯಾಗಿ ಕಳುಹಿಸಲ್ಪಟ್ಟು ಬಂದಿರುವದಾಗಿ ಹೇಳಿದ್ದರಿಂದ ಬಹಳ ಮರ್ಯಾದೆಯಾಗಿ ಕಂಡನು.

141. ಜಾಮೊರಿನನು ತನ್ನ ಅಭಿಪ್ರಾಯವನ್ನು ಯಾಕೆ ಬದಲಾಯಿಸಿದನು?

ಈ ವಾಸ್ಕೋಡಿಗಾಮನು ರಾಯಭಾರಿಯಲ್ಲವೆಂತಲೂ ಇಂಡಿಯಾದಲ್ಲಿ ವ್ಯಾಪಾರಕ್ಕೋಸ್ಕರ ಬಂದಿರುವೆಂತೆ ಆ ದೇಶದಲ್ಲಿ ವ್ಯಾಪಾರದಿಂದ ಜೀವಿಸುತ್ತಿದ್ದ ಮೂರರೆಂಬ ವರ್ತಕರಿಗೆ ತಿಳಿದದ್ದರಿಂದ ಅವನನ್ನು ಇಲ್ಲಿಂದ ಹೊರಡಿಸಬೇಕಾಗಿ ಇವನು ಸಮುದ್ರದ ಕಳ್ಳನೆಂದು ಆ ವರ್ತಕರೆಲ್ಲರು ಧೊರೆಯೊಡನೆ ಚಾಡೀ ಹೇಳಿದ್ದರಿಂದ ಬದಲಾಯಿಸಬೇಕಾಯಿತು.

142. ಪೋರ್ಚುಗೀಸರ ಅಧಿಕಾರವನ್ನು ಇಂಡಿಯಾದಲ್ಲಿ ಸ್ಥಾಪಿಸಿದವನ್ಯಾರು ?

ಪೋರ್ಚುಗಲ್ ದೇಶದ ಕೆಬ್ರಾಲ್ ಎಂಬವನು.

143. ಇವರ ಮೊದಲನೆ ವೈಸರಾಯಿಯಾರು? ಅಲ್ಫಾನ್ಸೊ ಆಲ್ಬುಕರ್ಕ ಎಂಬುವನು ಎಷ್ಟನೆ ವೈಸರಾಯಿ?

ಆಲ್‌ಮೇಡ್ ಎಂಬುವನೆ ಮೊದಲನೆ ವೈಸರಾಯಿ. ಅಲ್ಫಾನ್ಸೋ ಅಲ್ಬುಕರ್ಕ್‌ಯೆಂಬವನು ಎರಡನೆ ವೈಸರಾಯಿ.

144. ಅಲ್ಫಾನ್ಸೋ ಅಲ್ಬುಕರ್ಕ ಇಂಡಿಯಾದಲ್ಲಿ ಮಾಡಿದ ಸಾಹಸವೇನು?

ಬೀಜಾಪುರಕ್ಕೆ ಸೇರಿದ ಗೋವಾಪಟ್ಟಣವನ್ನು ಧೊರೆಯಿಲ್ಲದ ಕಾಲದಲ್ಲಿ ಸ್ವಾಧೀನಪಡಿಸಿಕೊಂಡು ಆರ್ಮುಜ್ ದ್ವೀಪದಿಂದ ಮೊಲಕ್ಕಾದ್ವೀಪದವರೆಗೆ ತನ್ನ ಹಡಗುಗಳು ತಿರುಗುವದಕ್ಕೆ ದಾರಿಯನ್ನು ಮಾಡಿದನು.

145. ಈಗ ಇಂಡಿಯಾದಲ್ಲಿ ಪೋರ್ಚುಗೀಸರ ಸ್ವಾಸ್ಥ್ಯಗಳ್ಯಾವು?

ಗೋವಾ, ಡಯೂ, ಡಾಮನ್ ಇವು 3 ಮಾತ್ರ.

146. ಪೋರ್ಚುಗೀಸರ ಅನಂತರ ಇಂಡಿಯಾಕ್ಕೆ ಬಂದ ಅನ್ಯದೇಶೀಯರನ್ನು ಕ್ರಮವಾಗಿ ಹೇಳು ? ಇವರಲ್ಲಿ ರಾಜ್ಯಸಾಧನೇ ಮಾಡಿದವರ್ಯಾರು ?

ಡಚ್ಚರು, ಡೇನರು, ಇಂಗ್ಲೀಷರು ಇವರಲ್ಲಿ ಇಂಗ್ಲೀಷರೆ ರಾಜ್ಯಸಾಧನೆ ಮಾಡಿದರು.

147. ಡಚ್ಚರು ಯಾವಾಗ ಇಂಡಿಯಾಕ್ಕೆ ಬಂದರು? ಯಾವಸ್ಥಳಗಳನ್ನು ಇಂಡಿಯಾದಲ್ಲಿ ಸಂಪಾದಿಸಿದರು ? ಅವೇನಾದವು?

ಡಚ್ಚರು 16ನೇ ಶತಮಾನದ ಆರಂಭದಲ್ಲಿ ಬಂದರು. ಇಂಡಿಯಾದಲ್ಲಿ ಅಂಬಾಯಿನಾ, ಮಲಕಾ, ಸಿಲೋನ್, ಮದ್ರಾಸ್, ನಾಗಪಟ್ಣ, ಪುಲಿಕ್ಯಾಟ್. ಈ ಸ್ಥಳಗಳನ್ನು ಸಂಪಾದಿಸಿದರು. ಇವುಗಳನ್ನು 1782 ಲ್ಲಿ ಇಂಗ್ಲೀಷರು ಕಿತ್ತುಕೊಂಡರು.

148. ಡೇನರು ಯಾವಾಗ ಇಂಡಿಯಾಕ್ಕೆ ಬಂದರು? ಯಾವ ಸ್ಥಳಗಳನ್ನು ಇಂಡಿಯಾದಲ್ಲಿ ಸಂಪಾದಿಸಿದರು? ಅವೇನಾದವು?

ಡಚ್ಚರು ಬಂದಾಗಲೇ ಡೇನರು ಬಂದರು, ಇಂಡಿಯಾದಲ್ಲಿ ಶ್ರೀರಾಂಪುರ, ಟ್ರಾಂಕೂಬಾರ್, ಪೋರ್ಟೋನೋವೋ ಈ ಸ್ಥಳಗಳನ್ನು ಸಂಪಾದಿಸಿದರು. ಇವುಗಳನ್ನು 1845 ಲ್ಲಿ ಇಂಗ್ಲೀಷರು ಕೊಂಡುಕೊಂಡರು.

149. ಇಂಗ್ಲೀಷರ ಈಸ್ಟಿಂಡಿಯಾ ಕಂಪೆನಿಯ ಉತ್ಪತ್ತಿಯು ಹ್ಯಾಗೆ? ಇದಕ್ಕೆ ಮೊದಲು ಯಾರಿಂದ ಯಾವಾಗ ಯಾವ ನಿಬಂಧನೆಮೇಲೆ ಶಾಸನ ಕೊಡಲ್ಪಟ್ಟಿತು ?

ಲಂಡನ್ ಪಟ್ಣದ ವರ್ತಕರು ಇಂಡಿಯಾದಲ್ಲಿ ವ್ಯಾಪಾರ ಮಾಡಲೆತ್ನಿಸಿ ಈಸ್ಟಿಂಡಿಯಾ ಕಂಪೆನಿಯನ್ನು ಏರ್ಪಾಟು ಮಾಡಿದರು. ಇದಕ್ಕೆ ಎಲಿಜಬೆತ್ ಎಂಬ ರಾಣಿಯು ಇವರು 15 ವರುಷಮಾತ್ರ ಇಂಡಿಯಾದಲ್ಲಿ ವ್ಯಾಪಾರಮಾಡುವಂತೆ 1599 ಲ್ಲಿ ಒಂದುಶಾಸನವನ್ನು ಕೊಟ್ಟಳು.

150. ಅಂಬಾಯಿನಾದ್ವೀಪದ ಕೊಲೆಯಾಕೆ ನಡೆಯಿತು? ಆಗ ಡಿಲ್ಲಿಯಲ್ಲಿ ಯಾರು ಆಳುತ್ತಿದ್ದರು.

ವ್ಯಾಪಾರದಿಂದ ಅಭಿವೃದ್ಧಿಗೆ ಬರುತ್ತಿದ್ದ ತಮ್ಮ ಅನುಕೂಲವನ್ನು ಕಿತ್ತುಕೊಂಡರೆಂದು ಡಚ್ಚರು ಅಂಬಾಯಿನಾ ದ್ವೀಪದಲ್ಲಿದ್ದ 10ಜನ ಇಂಗ್ಲೀಷರನ್ನು ಕೊಂದರು. ಆಗ ಡಿಲ್ಲಿಯಲ್ಲಿ ಜಹಾಂಗೀರ್ ಇದ್ದನು.

151. ಮದ್ರಾಸ್, ಬಾಂಬೆ, ಕಲ್ಕತ್ತೆ, ಇವು ಇಂಗ್ಲೀಷರಿಗೆ ಹ್ಯಾಗೆ ಸೇರಿತು,

ಮದ್ರಾಸ್—1639ಲ್ಲಿ ಚಂದ್ರಗಿರಿ ರಾಜನಿಂದ ಕೊಡಲ್ಪಟ್ಟಿತು.

ಬಾಂಬೆ—1668ಲ್ಲಿ ಜಾರ್ಲೆಸ್ ಧೊರೆಯಿಂದ ಕೊಡಲ್ಪಟ್ಟಿತು.

ಕಲ್ಕತ್ತೆ—1698ಲ್ಲಿ ಔರಂಗಜೇಬನ ಮೊಮ್ಮಗನಿಂದ ಕೊಂಡು ಕೊಂಡರು.

152. ಫೋರ್ಟಸೆಂಟಜಾರ್ಜ್, ಫೋರ್ಟಸೆಂಟ್ ಡೇವಿಡ್, ಫೋರ್ಟವಿಲಿಯಂ ಇವು ಯಾರಿಂದ ಯಾವಾಗ ಎಲ್ಲಿಕಟ್ಟಲ್ಪಟ್ಟವು?

ಫೋರ್ಟಸೆಂಟ್ಜಾರ್ಜ್—ಇಂಗ್ಲೀಷರಿಂದ 1640ಲ್ಲಿ ಮದ್ರಾಸಿನ ಬಳಿ ಕಟ್ಟಲ್ಪಟ್ಟಿತು.

ಫೋರ್ಟಸೆಂಟ್ಡೇವಿಡ್—ಇಂಗ್ಲೀಷರಿಂದ 1670ಲ್ಲಿ ದೇವನಾಂ ಪಟ್ಟಣದ ಬಳಿ ಕಟ್ಟಲ್ಪಟ್ಟಿತು.

ಫೋರ್ಟವಿಲಿಯಂ—ಇಂಗ್ಲೀಷರಿಂದ 1698ಲ್ಲಿ ಕಲ್ಕತ್ತೆಯ ಬಳಿ ಕಟ್ಟಲ್ಪಟ್ಟಿತು.

153. ಈಗ ಇಂಡಿಯಾದಲ್ಲಿ ಫ್ರೆಂಚರ ಸ್ವಾಸ್ಥ್ಯಗಳ್ಯಾವು ?

ಪಾಂಡಿಚೆರಿ, ಚಂದ್ರನಗರ, ಮಾಹಿ, ಕರಿಕಲ್, ಯಾನಾಂ, ಇವುಗಳು.

154. ಇಂಡಿಯಾದಲ್ಲಿ ಇಂಗ್ಲೀಷರಿಗೂ ಫ್ರೆಂಚರಿಗೂ ಮೊದಲನೆ ಕಲಹಕ್ಕೆ ಕಾರಣವೇನು? ಅದು ಹ್ಯಾಗೆ ಪೂರ್ತಿಯಾಯಿತು?

ಯೂರೋಪ್‌ನಲ್ಲಿ ಇಂಗ್ಲೀಷರಿಗೂ ಫ್ರೆಂಚರಿಗೂ ಕಲಹ ಹುಟ್ಟಿದ್ದರಿಂದಾ ಇಂಡಿಯಾದಲ್ಲಿಯೂ ಹುಟ್ಟಿತು. 1746ಲ್ಲಿ ಮದ್ರಾಸ್ ಲಾಬೊರ್ಡನೆ ಎಂಬ ಫ್ರೆಂಚ್ ಸರದಾರನಿಂದ ಹಿಡಿಯಲ್ಪಟ್ಟು ಮಿತವಾದ ಬಿಡುಗಡೆ ದ್ರವ್ಯದಿಂದ ಬಿಡುವದಾಗಿ ಅಲ್ಲಿದ್ದ ಮೋರಸ್ ನೊಡನೆ ಕರಾರು ನಡದು ಕಡೆಗೆ ಅದೂ ಫ್ರೆಂಚರ ಗೌರ್ನರಾದ ಡೂಪ್ಲೆಯಿಂದ ತಿರಸ್ಕರಿಸಲ್ಪಟ್ಟು ಯೂರೋಪ್‌ನಲ್ಲಿ ಎರಡು ಪಂಗಡದವರಿಗೂ ಸಮಾಧಾನವಾದ್ದರಿಂದ ಇಲ್ಲಿಯೂ ಸಮಾಧಾನವಾಯಿತು.

155. ಡೂಪ್ಲೆ ಯಾರು ? ಅವನು ಲಾಬೊರ್ಡನೆಗೂ ಮೋರಸ್ಗೂ ನಡದ ಕರಾರನ್ನು ಯಾಕೆ ಒಪ್ಪಲಿಲ್ಲಾ ?

ಡೂಪ್ಲೆಯು ಪಾಂಡಿಚೆರಿಯ ಗೌರ್ನರ್. ಇಂಗ್ಲೀಷರನ್ನು ಇಂಡಿಯಾ

ದಿಂದ ಓಡಿಸಬೇಕೆಂದು ಲಾಬೋರ್ಡನೇಯು ಪೋರಸನೊಡನೆ ಮಾಡಿಕೊಂಡಿದ್ದ ಕರಾರನ್ನು ಒಪ್ಪಲಿಲ್ಲ.

156. ಹೈದರಾಬಾದ್ ರಾಜರ ಮೂಲ ಪುರುಷ ಯಾರು ? ಇವನು ಅನ್ವರುದ್ದೀನನ್ನು ಕರ್ನಾಟಕದ ನವಾಬನನ್ನಾಗಿ ನಿಯಮಿಸಲು ಕಾರಣವೇನು ?

ನೈಜಾಮುಲ್ ಮುಲ್ಕನೆ ಹೈದರಾಬಾದ್ ರಾಜವಂಶದ ಮೂಲ ಪುರುಷನು. ಇವನು ಕರ್ನಾಟಕದಲ್ಲಿ ಮೊದಲು ಒಬ್ಬ ನವಾಬನನ್ನು ನಿಯಮಿಶಿದ್ದನು. ಅವನು ಸತ್ತಮೇಲೆ ಆತನ ಸಾಕು ಮಗನು ನೈಜಾಮುಲ್ ಮುಲ್ಕಿಗೆ ತಿಳಿಸದೇನೆ ಶಿಂಹಾಸನಕ್ಕೆ ಬಂದು ಪೊಗದಿಯನ್ನು ಸಹ ಕೊಡದೆ ಇದ್ದದ್ದರಿಂದಾ ಅವನನ್ನು ಶಿಂಹಾಸನದಿಂದ ತೆಗೆದು ಅನ್ವರುದ್ದೀನನನ್ನು ನಿಯಮಿಶಿದನು.

157. ಅನ್ವರುದ್ದೀನನನ್ನು ಶಿಂಹಾಸನದಿಂದ ತಪ್ಪಿಸಿ ತಾನು ಬರಬೇಕೆಂತ ಪ್ರಯತ್ನ ಪಟ್ಟವನ್ಯಾರು? ಹೈದರಾಬಾದ್ ಶಿಂಹಾಸನಕ್ಕೆ ಯಾರು ಪ್ರಯತ್ನಪಟ್ಟರು?

ಚಂದಾಸಾಹೇಬ್ ಎಂಬುವನು. ಹೈದರಾಬಾದ್ ಶಿಂಹಾಸನಕ್ಕೆ ಬರಲು ನೈಜಾಮನ ಮೊಮ್ಮಗನಾದ ಮುಜಾಫರ್ ಜಂಗ್ ಪ್ರಯತ್ನಪಟ್ಟನು.

158. ಇದಕ್ಕಾಗಿ ಅವರು ಏನು ಮಾಡಿದರು, ಅದರ ಫಲವೇನು?

ಇದಕ್ಕಾಗಿ ಅವರು ಡೋಪ್ಲೆಯ ಸಹಾಯವನ್ನು ಕೇಳಿದರು. ಡೊಪ್ಲೆಯು ಇದಕ್ಕೆ ಒಪ್ಪಿ ಆಂಬೂರಿನಯುದ್ಧದಲ್ಲಿ ಅನ್ವರುದ್ದೀನನನ್ನು ಕೊಂದು ಚಂದಾಸಾಹೇಬನನ್ನು ಆರ್ಕಾಟ್ ನವಾಬನೆಂದು ಒಪ್ಪಿದನು. ಹೈದರಾಬಾದ್ ಸಿಂಹಾಸನಕ್ಕೆ ಪ್ರತಿಕಕ್ಷಿಯಾಗಿದ್ದ ನಾಸಿಕ್ ಜಂಗ್ ಕಡಪಾ ನವಾಬನಿಂದ ಕೊಲ್ಲಲ್ಪಟ್ಟು ಮುಜಾಫರ್ ಜಂಗ್ ಹೈದರಾಬಾದ್ ಸಿಂಹಾಸನಕ್ಕೆ ಬಂದನು.

159. ಮಹಮ್ಮದಲ್ಲಿ ಯಾರು ? ಇವನಿಗೆ ಇಂಗ್ಲೀಷರು ಯಾತಕ್ಕೆ ಸಹಾಯ ಮಾಡಿದರು?

ಮಹಮ್ಮದಲ್ಲಿ ಎಂಬುವನು ಕರ್ನಾಟಕದ ನವಾಬನಾದ ಅನ್ವರುದ್ದೀನನ ಮಗನು. ಅನ್ವರುದ್ದೀನನು ತಮ್ಮ ಕಡೆಯವನಾಗಿದ್ದಾಗ್ಯೂ ಮೃತಪಟ್ಟನಾದರೂ ಜೀವಂತನಾದ ಮಹಮದಲ್ಲಿಗಾದರೂ ಸಹಾಯ ಮಾಡಿ

ದ್ದರೆ ತನಗೆ ಫ್ರೆಂಚರಿಂದ ಅಪಾಯ ಸಂಭವಿಸುವದೆಂದು ಸಹಾಯ ಮಾಡಿದರು.

160. ಡೊಪ್ಲೆ ಫತಾಬಾದ್‌ನ ವಿಷಯವಾಗಿ ತಿಳಿಯುವದೇನು?

ಇದು 1750 ಲ್ಲಿ ನಾಜಿರ್‌ಜಂಗ್ ಕೊಲ್ಲಲ್ಪಟ್ಟಸ್ಥಳದಲ್ಲಿ ಡೊಪ್ಲೆಯು ಜಯದ ಜ್ಞಾಪಕಾರ್ಥವಾಗಿ ಕಟ್ಟಲ್ಪಟ್ಟ ಈಡೊಪ್ಲೆಯ ಜಯನಗರವು 1751 ಲ್ಲಿ ಕ್ಲೈವ್‌ನಿಂದ ನಾಶ ಪಡಿಸಲ್ಪಟ್ಟಿತು.

161. ಮೊಟ್ಟಮೊದಲು ಇಂಗ್ಲೀಷರು ತಂಜಾವೂರು ಅಡಚಣೆಯಲ್ಲಿ ಯಾಕೆ ಪ್ರವರ್ತಿಸಿದರು?

ತಂಜಾವೂರು ರಾಜನಾದ ಸಾಹುಜಿಯು ತನ್ನ ತಮ್ಮನಾದ ಪ್ರತಾಪ ಸಿಂಗ್‌ನಿಂದ ಓಡಿಸಲ್ಪಟ್ಟು ತನಗೆ ಇಂಗ್ಲೀಷರು ರಾಜ್ಯ ಕೊಡಿಸುವದಾದರೆ ದೇವಿಕೋಟೆಯನ್ನು ಕೊಡುವದಾಗಿ ಹೇಳಿದ್ದರಿಂದ ಪ್ರವರ್ತಿಸಿದರು.

162. ತಿರುಚನಾಪಲ್ಲಿಯಲ್ಲಿದ್ದ ಮಹಮ್ಮದಿಯನ್ನು ಫ್ರೆಂಚರ ಮುತ್ತಿಗೆಯಿಂದ ಬಿಡಿಸಲು ಕ್ಲೈವ್ ಮಾಡಿದ ತಂತ್ರವೇನು?

ತಿರುಚನಾಪಲ್ಲಿಯ ಬಳಿಯಲ್ಲಿ ಚಂದಾಸಾಹೇಬನ ಸೈನ್ಯವೆಲ್ಲಾ ಇದೆ. ಚಂದಾಸಾಹೇಬನ ರಾಜಧಾನಿಯಾದ ಆರ್ಕಾಟನ್ನು ತಾವು ಹಿಡಿದರೆ ತನ್ನ ರಾಜ್ಯವನ್ನು ಬಿಡಿಸಿಕೊಳ್ಳಲು ಸೈನ್ಯವನ್ನು ತರುವನು. ಮಹಮ್ಮದಲ್ಲಿಗೆ ಮುತ್ತಿಗೆಯು ತಪ್ಪುವದು ಹೀಗೆಂದು ಯೋಚಿಸಿದನು,

163. ಈಗ ಹ್ಯಾಗೆ ಪರಿಣಮಿಸಿತು?

ಹಾಗೆಯೇ ನಡೆದು ತಿರುಚನಾಪಲ್ಲಿಯ ಮುತ್ತಿಗೆ ಬಿಡುಗಡೆಯಾಯಿತು

164. ಫ್ರೆಂಚರಿಗೆ ಉತ್ತರ ಸರ್ಕಾರ ಕೈತಪ್ಪುವದಕ್ಕೇನು ಕಾರಣ?

ಕರ್ನಲ್ ಫೋರ್ಡ್ ಕಂಫ್ಲಾನ್ಸ್‌ನನ್ನು ಕಂಡೂರಿನ ಯುದ್ಧದಲ್ಲಿ ಸೋಲಿಸಿ ಫ್ರೆಂಚರನ್ನು ಉತ್ತರಸರ್ಕಾರಗಳಿಂದ ಓಡಿಸಿದನು.

165. ಆಂಬೂರಿನ ಯುದ್ಧದಲ್ಲಿ ಇಂಗ್ಲೀಷರು ಫ್ರೆಂಚರೂ ಸಂಧಿಸುವದಕ್ಕೆ ಕಾರಣವೇನು?

ಅನ್ವರುದ್ದೀನ್ ಮತ್ತು ನಾಸಿರ್‌ಜಂಗನ ಪ್ರಾರ್ಥನೆಯಂತೆ ಇಂಗ್ಲೀಷರು ಬಂದಿದ್ದರು. ಚಂದಾಸಾಹೇಬ ಮತ್ತು ಮುಜಾಫರ್‌ಜಂಗ್‌ನ ಪ್ರಾರ್ಥನೆಯಂತೆ ಫ್ರೆಂಚರು ಬಂದಿದ್ದರು.

166. ಬುಸ್ಸಿಯ ಚರಿತ್ರೆಯನ್ನು ಬರೀರಿ?

ಈ ಫ್ರೆಂಚ್ ಸರದಾರನು ಮುಜಾಫರನನ್ನು ಹೈದರಾಬಾದ್ ಸಿಂಹಾಸನಕ್ಕೆ ತಂದು ಅವನು ಸಾಯಲು ಸಾಲಬಂತಜಂಗನನ್ನು (ನೈಜಾಮುಲ್ ಮುಲ್ಕನ ಇನ್ನೊಬ್ಬ ಮಗ) ಸಿಂಹಾಸನಕ್ಕೆ ತಂದನು. ಮತ್ತು ಲಾಲಿಯೊಡನೆ ಫೋರ್ಟಸೆಂಟ್‌ಜಾರ್ಜನ್ನು ಮುತ್ತಿ 1758ಲ್ಲಿ ಇಂಗ್ಲೀಷರ ಹಡಗು ದಂಡು ಬಂತೆಂಬ ಸುದ್ದಿಯನ್ನು ಕೇಳಿ ಓಡಿಹೋಗಿ ವಂದಿವಾಸವನ್ನು ಹಿಡಿದು ಅಲ್ಲಿ ಸರಐರಕೂಟ್‌ಗೆ ಸೆರೆ ಸಿಕ್ಕಿದನು.

167. ಕೌಂಟಡಿಲಾಲಿಯ ಚರಿತ್ರೆಯನ್ನು ಬರೀರಿ?

ಇಂಡಿಯಾದ ಫ್ರೆಂಚರ ಸ್ವಾಸ್ಥ್ಯಗಳಿಗೆ ಗೌರ್ನರಾದ ಇವನು ಫೋರ್ಟಸೆಂಟ್‌ಡೇವಿಡ್ಡನ್ನು ಹಾಳುಮಾಡಿ ಬುಸ್ಸಿಯ ಸಹಾಯದಿಂದ ಫೋರ್ಟಸೆಂಟ್‌ಜಾರ್ಜನ್ನು ಮುತ್ತಿ ಇಂಗ್ಲೀಷರ ಹಡಗು ದಂಡು ಬಂತೆಂಬ ಸುದ್ದಿಯನ್ನು ಕೇಳಿ ಓಡಿಹೋಗಿ ವಂದಿವಾಸವನ್ನು ಮುತ್ತಿ ಸರಐರಕೂಟ್‌ನಿಂದಾ ಸೋತು ಸೆರೆ ಸಿಕ್ಕಿ ಮದ್ರಾಸ್‌ಗೆ ಕಳುಹಿಸಲ್ಪಟ್ಟನು.

168. ಫ್ರೆಂಚರ ಅಧಿಕಾರವು ಕ್ಷೀಣಿಸುವದಕ್ಕೆ ಕಾರಣಗಳೇನು?

1. ಡೂಪ್ಲೆಯನ್ನು ಯೂರೋಪಿಗೆ ಕರಸಿದ್ದು.
2. ಬುಸ್ಸಿಯನ್ನು ಹೈದರಾಬಾದಿನಿಂದ ಕರಿಸಿದ್ದು.
3. ಫ್ರೆಂಚರ ಆಫೀಸರಲ್ಲಿ ಒಗ್ಗಟ್ಟು ತಪ್ಪಿದ್ದು.

169. ಸುರಾಜದವಲನು ಯಾರು? ಇವನು ಕಲ್ಕತ್ತೆಯನ್ನು ಯಾತಕ್ಕೆ ಮುತ್ತಿದನು? ಆಗ ಡ್ರೇಕ ಏನುಮಾಡಿದ? ಉಳಿದವರೇನಾದರು?

ಸುರಾಜದೌಲನು ಬಂಗಾಳೆಯ ನವಾಬನು ಕಲ್ಕತ್ತೆಯಲ್ಲಿ ಫೋರ್ಟವಿಲಿಯಂನ ಅಧಿಕಾರಿಯಾಗಿದ್ದ ಡ್ರೇಕನು ತನ್ನ ಅಪ್ಪಣೆಯಂತೆ ಕೋಟೆಗಳ ರಿಪೇರಿಯನ್ನು ನಿಲ್ಲಿಸದೆಹೋದ್ದರಿಂದಲೂ ತನ್ನ ಶತ್ರುವಾದ ಒಬ್ಬ ಹಿಂದುವಿಗೆ ಡ್ರೇಕ ಆಶ್ರಯಕೊಟ್ಟದ್ದರಿಂದಲೂ ಕಲ್ಕತ್ತೆಯನ್ನು ಮುತ್ತಿದನು. ಆಗ ಡ್ರೇಕ ಮುಂತಾದವರು ಹಡಗಿನಲ್ಲಿ ಓಡಿದರು. ಕೆಲವರು ಕಾದಿ ಸೋತು ಸೆರೆ ಸಿಕ್ಕಿದರು.

170. ಕತ್ತಲೆ ಕೋಣೆಯ ಚದರವೆಷ್ಟು? ಅಲ್ಲಿ ಎಷ್ಟುಮಂದಿ ಕಾ

ಕೆಲ್ಪಟ್ಟರು ? ಅದರಲ್ಲಿ ಎಷ್ಟು ಜನ ಬದುಕಿದರು ?

ಕತ್ತಲೆಕೋಣೆಯು 18 ಅಡಿ ಚದರ ಸಹ ಇರಲಿಲ್ಲ. 146 ಮಂದಿ ಅದರಲ್ಲಿ ಕೊಡಲ್ಪಟ್ಟರು. ಮಾರನೆ ದಿನ 23 ಜನ (22 ಗಂ. 1ಹೆಂ.) ಉಳಿದಿದ್ದರು.

171. ಈ ತಪ್ಪಿತ ಸುರಾಜದೌಲನದಲ್ಲವೆಂತ ಕೆಲವರು ಹೇಳು ತ್ತಾರೆ ನಿಜವೇ ?

ಈ ತಪ್ಪಿತವು ಸುರಾಜದೌಲನದಲ್ಲ, ಸೆರೆಸಿಕ್ಕಿದ ಶಿಪಾಯಿಗಳ ನ್ನು ತನ್ನ ಅಧಿಕಾರಿಗಳವಶಕ್ಕೆ ಕೊಟ್ಟು ತಾನು ಮನೆಗೆ ಹೋದನು. ಆ ಅಧಿಕಾರಿಗಳು ಈ ಕೃತ್ಯವನ್ನು ಮಾಡಿದರು. ಆದರೆ ಈ ಕೆಟ್ಟಕೃ ತ್ಯಕ್ಕೆ ನವಾಬನು ಆ ಅಧಿಕಾರಿಗಳಿಗೆ ಯಾವವಿಧವಾದ ಶಿಕ್ಷೆಯು ಕೊಡಲಿಲ್ಲ.

172. ಕ್ಲೈವ್ ಎರಡನೇಸಲ ಇಂಡಿಯಾಕ್ಕೆ ಬಂದು ಮೊಟ್ಟಮೊದ ಲು ಮಾಡಿದ ಸಾಹಸವೇನು ?

ಪಶ್ಚಿಮಸಮುದ್ರದ ಹಡಗನ್ನು ಕೊಳ್ಳೆಹೊಡೆಯುತ್ತಿದ್ದ ಆಂಗ್ರಿ ಯಾಯೆಂಬ ಸರದಾರನ ಘೇರಿಯ ಎಂಬ ಕೋಟೆಯನ್ನು ಹಾಳುಮಾಡಿ ಸಮುದ್ರಚೋರರ ಪುಂಡಣಗಿಸಿದನು.

173. ಕತ್ತಲೆಮನೆ ಕೊಲೆ ಮದ್ರಾಸಿಗೆ ತಿಳಿದಕೂಡ್ಲೆ ಬಂಗಾಳೆ ಯ ಮೇಲೆ ಯಾರು ಹೊರಟರು?

ಅಡ್ಮಿರಲ್ ವಾಟ್ಸನ್, ಮತ್ತು ರಾಬರ್ಟ ಕ್ಲೈವ್, ಇವರು ಹೊ ರಟರು.

174. ಮೀರ್‌ಜಾಫರ್‌ಯಾರು? ಇವನು ಸುರಾಜದ್ದೌಲನಿಗೆ ಮಾಡಿ ದ ದ್ರೋಹವೇನು ?

ಮೀರ್‌ಜಾಫರನು ಸುರಾಜದ್ದೌಲನ ಸರ್ವಾಧಿಕಾರಿಯು ಇವನು ತಾ ನೇ ಸುರಾಜದೌಲನ ಶಿಂಹಾಸನಕ್ಕೆ ಬರಬೇಕೆಂತ ಕ್ಲೈವಿನೊಡನೆ ಪಿ ತೂರಿ ಮಾಡಿದನು.

175. ಕ್ಲೈವ್ ಉಮಿಚಂದನ ಕಾಟನೆನ್ನುತಪ್ಪಿಸಿಕೊಳ್ಳಲು ಮಾ ಡಿದ ತಂತ್ರವೇನು ?

ಕ್ಲೈವ್ ಉಮಿಚಂದನ ಇರಾದೆಯಂತೆ ನಡಸುವದಾಗಿ ಅವನ ಹೆಸರು ವಗೈರೆ ಇಲ್ಲದೆ ಬಿಳೀಕಾಗದದ ಕರಾರನ್ನು ಸರಿಯಾಗಿ ಬರದ ಕೆಂಪುಕಾಗದದಲ್ಲಿ ಒಂದು ಕರಾರನ್ನು ಮಾಡಿದನು. ಆ ಕಾಲದಲ್ಲಿ ಕೆಂಪು ಕಾಗದದ ಕರಾರ ಸರ್ಕಾರದಲ್ಲಿ ಮಂಜೂರಾಗುತ್ತಿರಲಿಲ್ಲ. ಆದ್ದರಿಂದ ಅಂಥಾ ಮೋಸದ ಕರಾರಿಗೆ ವಾಟ್ಸನ್ ಸರದಾರನು ರುಜು ಹಾಕುವದಿಲ್ಲವೆಂತ ಹೇಳಿದ್ದರಿಂದ ಆ ರುಜುವನ್ನು ತಾನೆ ಹಾಕಿ ಕೊಟ್ಟನು.

176. ಎರಡನೆ ಷಾಆಲಂನ ಚರಿತ್ರೆಯನ್ನು ಬರಿ ?

ಅವನು ಸೂಜಾದೌಲನ ಸಹಾಯದಿಂದ ಪಾಟ್ನಾವನ್ನು ಮುತ್ತಿ ಕ್ಲೈವಿನಿಂದ ಓಡಿಸಲ್ಪಟ್ಟು ಎರಡನೆ ಸಲ ಕರ್ನಲ್ ಕಾಲಿಯಡ್‌ನಿಂದ ಸೋತು ಬೇಹಾರ ದೇಶವನ್ನು ಆಕ್ರಮಿಸಲುಪಕ್ರಮಿಸಿ ಬಾಕ್ಸರ ಯುದ್ಧದಲ್ಲಿ ಇಂಗ್ಲೀಷರಿಗೆ ವಿಧೇಯನಾಗಿ ಪುನಃ ಕ್ಲೈವಿನಿಂದ ರಾಜ್ಯ ಪಡದು ಸಿಂಧ್ಯನಕಡೆಗೆ ಸೇರಿದನು. ಇಷ್ಟರಲ್ಲಿ ಗುಲಾಂಖಾದರನು ಇವನ ಕಣ್ಣು ತಿವಿದದ್ದರಿಂದ ಜನರಲ್ ಲೇಕ್ ಡಿಲ್ಲಿಯನ್ನು ತೆಕ್ಕೊಂಡು ಇವನು ತನ್ನ ಪೋಷಣೆಗೆ ಒಳಪಡಿಸಿಕೊಂಡನು.

177. ರಾಮನಾರಾಯಣನ ಚರಿತ್ರೆಯನ್ನು ಬರೀರಿ ?

ಪಾಟ್ನಾದ ಗೌರ್ನರಾದ ಇವನು ಕ್ಲೈವಿನ ಸಹಾಯದಿಂದ ಎರಡನೆ ಷಾಆಲಂನನ್ನು ಗೆದ್ದು ಸರ್ಕಾರದ ಹಣವನ್ನು ತಿಂದನೆಂಬ ತಪ್ಪಿತದಿಂದ ಮೀರಖಾಸೀಂನಿಗೆ ಸೂರೆ ಹೋದನು.

178. ಉಮಿಚಂದನ ಚರಿತ್ರೆಯನ್ನು ಬರೀರಿ ?

ಬಂಗಾಳದ ವರ್ತಕನಾದ ಇವನು ಕ್ಲೈವ್ ಮತ್ತು ಮೀರಜಾಫರ ಮುಂತಾದವರು ಕೂಡಿ ಸಿರಾಜದೌಲನನ್ನು ಸಿಂಹಾಸನದಿಂದ ತಪ್ಪಿಸಬೇಕೆಂದು ಪಿತೂರಿ ನಡಿಸುತ್ತಿದ್ದದ್ದನ್ನು ತಿಳಿದು ತನಗೆ 30· ಲಕ್ಷ ರೂಪಾಯಿ ಕೊಡದಿದ್ದರೆ ತಂತ್ರವನ್ನು ಸುರಾಜದೌಲನಿಗೆ ಹೇಳುವಂತೆ ಹೆದರಿಸಿ ಆ ಮೂಲಕ ತನ್ನ ಇಷ್ಟದಂತೆ ಕರಾರು ಬರಿಸಿಕೊಂಡು ಕಡೆಗೆ ಏನೂ ಕೊಡಬೇಕಾದ್ದಿಲ್ಲವೆಂದು ಕ್ಲೈವಿನಿಂದ ತಿಳಿಸಲ್ಪಟ್ಟು ಸತ್ತನು.

179. (1) ಮೀರ ಖಾಸೀಂ ಯಾರು? (2) ಇವನು ತನ್ನ ದೇಶಗಳಲ್ಲಿ ಮಾಡಿದ ಏರ್ಪಾಡುಗಳೇನು ? (3) ಇವನಿಗೂ ಇಂಗ್ಲೀ

ಷರಿಗೂ ಕಲಹ ಹುಟ್ಟಲು ಕಾರಣವೇನು? (4) ಈ ತ
ಪ್ಪಿತವನ್ನು ಯಾರ ಮೇಲೆ ಆರೋಪಿಸಬಹುದು?

(1) ಮೀರ್‌ಜಾಫರನ ಆಳಿಕೆ. (2) ರಂಡನ್ನು ಬಲಹಡಿಸಿದನು ಕಂ
ದಾಯದ ವಸೂಲಾತಿಯನ್ನು ಸರಿಯಾದ ಸ್ಥಿತಿಗೆ ತಂದನು.

(3) 1. ಕಂಪೆನಿಯ ನವಕರರು ತಮ್ಮ ಸ್ವಂತ ಸರಕನ್ನು ಸಹ ಸುಂಕವಿಲ್ಲದೆ ಸಾಗಿಸುತ್ತಿದ್ದರು.

2. ಇಂಗ್ಲೀಷರು ತಮ್ಮ ಸರಕನ್ನು ಹೆಚ್ಚು ಬೆಲೆಗೆ ಕೊಳ್ಳಬೇಕೆಂತಲೂ ತಮಗೆ ಸುಲಭವಾಗಿ ಮಾರಬೇಕೆಂತಲೂ ಬಲಾತ್ಕರಿಸಿದರು.

3. ಕಂಪೆನಿಯ ನವಕರರು ಉಪ್ಪಿಗೆಮಾತ್ರ ಶೇಕಡ 2½ಯಂತೆ ಸುಂಕ ಕೊಡುತ್ತೇವೆ. ಇತರ ಸರುಕುಗಳಿಗೆ ಕೊಡುವದಿಲ್ಲವೆಂತ ಹೇಳಿದರು.

4. ಮೀರಕಾಸೀಂನು ತನ್ನ ದೇಶದ ವರ್ತಕರಿಗೂ ಸುಂಕ ತಪ್ಪಿಸಿ ಎಲ್ಲರನ್ನು ಸಮಾನವನ್ನಾಗಿ ಮಾಡಿದ್ದರಿಂದಾ ಕಂಪೆನಿಯವರು ಒಪ್ಪಲಿಲ್ಲಾ.

ಈ ಕಾರಣದಿಂದ ಕಲಹ ಹುಟ್ಟಿತ್ತು.

(4) ಈ ತಪ್ಪಿತವನ್ನು ಇಂಗ್ಲೀಷರ ಮೇಲೆ ಆರೋಪಿಸ ಬಹುದು.

180. ದಿವಾನಿ ಅಂದರೇನು? ಬಂಗಾಳಾ, ಬಿಹಾರ್, ಒರಿಸ್ಸಾ ಈ ದೇಶಗಳ ದಿವಾನಿ ಇಂಗ್ಲೀಷರಿಗೆ ಹ್ಯಾಗೆ ಬಂತು ?

ದಿವಾನಿ ಅಂದರೆ ಕಂದಾಯ ವಸೂಲ್ಮಾಡಿಕೊಳ್ಳುವ ಹಕ್ಕು. ಎರಡನೆ ಷಾಆಲಂ ಇಂಗ್ಲೀಷರಿಂದ 26 ಲಕ್ಷರೂ, ತೆಗದುಕೊಂಡು ಆ ದೇಶಗಳ ದಿವಾನಿಯನ್ನು ಕೊಟ್ಟನು,

181. ಕ್ಲೈವ್ ತನ್ನ 2ನೆ ಅಧಿಪತ್ಯದಲ್ಲಿ ಶಿವಿಲ್ ಮತ್ತು ದಂಡಿನಲ್ಲಿ ಮಾಡಿದ ಹೊಸ ಏರ್ಪಾಡುಗಳೇನು ?

ಶಿವಿಲ್‌ನಲ್ಲಿ—ಕಂಪೆನಿಯವರು ವ್ಯಾಪಾರಮಾಡಕೂಡದು ಮತ್ತು ಇಂಡಿಯಾದವರಿಂದ ಬಹುಮಾನ ಪಡೆಯ ಕೂಡದು.

ದಂಡಿನಲ್ಲಿ—ಯುದ್ಧಕಾಲದಲ್ಲಿ ದುಪ್ಪಟ್ಟು ಭತ್ಯ ಕೊಡುವದಿಲ್ಲ ಸಂಬಳಗಳನ್ನು ಜಾಸ್ತಿ ಮಾಡಿದನು.

182. ವಾರನ್ ಹೇಸ್ಟಿಂಗ್ಸ್ ಯಾರು ಆವನು ಬಂಗಾಳೆಯ ಗೌರ್ನರಾಗಿದ್ದಾಗ ಮಾಡಿದ ಹೊಸ ಏರ್ಪಾಡುಗಳೇನು ?

ವಾರನ್ ಹೇಸ್ಟಿಂಗ್ಸ್ ಎಂಬುವನು ಒಬ್ಬ ಗೌರ್ನರ ಜನರಲ್ಲನು. ಆವನು ಬಂಗಾಳೆಯಲ್ಲಿ ಇದ್ದಾಗ ಜಂಟಿ ಅಧಿಪತ್ಯವನ್ನು ನಿಲ್ಲಿಸಿ ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳನ್ನು ಏರ್ಪಾಡುಮಾಡಿ ಆ ಕೋರ್ಟುಗಳಲ್ಲಿ ಹುದ್ದೆಗಳಿಗೆ ಬಂಗಾಳದವರಿಗೆ ಬದಲಾಗಿ ಇಂಗ್ಲೀಷು ಕಲೆಕ್ಟರ್‌ಗಳನ್ನು ನಿಯಮಿಶಿದನು.

183. (1) ಮೈಸೂರಿನಲ್ಲಿ ಈಗ ಆಳುವ ಮಹಾರಾಜರ ಮೂಲಪುರುಷ ಯಾರು? (2) ಒಡೆಯರು ಎಂಬ ಬಿರದು ಹ್ಯಾಗೆ ಬಂತು? (3) ದಂತದ ಶಿಂಹಾಸನದ ಮೇಲೆ ಕೂತುಕೊಳ್ಳತಕ್ಕ ಮರ್ಯಾದೆಯನ್ನು ಯಾರು ಪಡದರು?

(1) ವಿಜಯ. (2) ಆವನು ಮಾವನ ಮನೆಯ ಒಡೆತನವನ್ನು ವಹಿಶಿದ್ದರಿಂದ ಈ ಹೆಸರು ಬಂತು. (3) ಚಿಕ್ಕದೇವರಾಜ ಒಡೆಯರು.

184. ಮೈಸೂರಿನ ಮೊದಲನೆ ಕಲಹಕ್ಕೆ ಕಾರಣವೇನು ? ಹ್ಯಾಗೆ ಪೂರೈಶಿತು ?

ಹೈದರನು ಮೈಸೂರು ಶೀಮೆಯನ್ನು ಆಕ್ರಮಿಶಿ ಇಂಗ್ಲೀಷರಮೇಲೆ ಕಲಹವನ್ನು ಮಾಡಲು ಫ್ರೆಂಚರೊಡನೆ ಫಿತೂರಿ ನಡಸುತ್ತಿದ್ದದ್ದರಿಂದ ಕಲಹ ಹುಟ್ಟಿ ನಡದು ಮದ್ರಾಸ್ ಕರಾರಿನಿಂದ ಪೂರೈಶಿತು.

185. ಮೈಸೂರಿನ ಎರಡನೆ ಕಲಹವನ್ನು ವಿವರಿಸು ?

4ನೇ ಪೇಷ್ವೆ ಮಾಧವರಾವ್ ಮೈಸೂರಿನ ಮೇಲೆ ದಂಡೆತ್ತಿದ್ದರಿಂದ ಇಂಗ್ಲೀಷರ ಸಹಾಯವನ್ನು ಹೈದರನು ಅಪೇಕ್ಷಿಸಿದನು. ಅವರು ಸಹಾಯ ಮಾಡಲಿಲ್ಲ. ಹೈದರನ ದೇಶದ ಮಧ್ಯ ಮಾಹೀಯು ಫ್ರೆಂಚರವಶವಲ್ಲಿತ್ತು. ಅದನ್ನು ಇಂಗ್ಲೀಷರು ಹೈದರನ ಅಪ್ಪಣೆ ಇಲ್ಲದೆ ಹಿಡಿಯಲು ಹೈದರನು ನೈಜಾಂ ಮತ್ತು ಮರಾಟಿಗರ ಸಹಾಯದಿಂದ ಕೆಲ

ಯನ್ನು ಸೋಲಿಸಿ ವಂದಿವಾಸವನ್ನು ಮುತ್ತಿ ಕಡೆಗೆ ಜೋಳಂಗಿಪುರವುಂತಾದ ಯುದ್ಧಗಳಲ್ಲಿ ಹೈದರನು ಸೋತನು. ಟೀಪೂ ಕರ್ನಲ್ ಬ್ರಾತವೇಟನ್ನು ಸೋಲಿಸಿದನು. ಪುನಃ ಹೈದರನು ಆರಣಿಯ 2ನೇ ಯುದ್ಧದಲ್ಲಿ ಸೋತನು.

186. ಟೀಪು ಯಾರು ? ಇವನ ಮತ್ತು ಹೈದರನ ಗುಣಗಳನ್ನು ವಿವರಿಸಿ ?

| | | |
|---|---|---|
| ಟೀಪು ಹೈದರನ ಮಗನು. | ಟೀಪೂ ಗುಣ. | ಹೈದರನ ಗುಣ. |
| ಸಾಹಸಗಾರ, | ವಿದ್ಯಾವಂತ, ಮತಾಭಿಮಾನಿ. | ವಿದ್ಯಾವಂತನಲ್ಲ. ಭೂತದಯಮುಂತಾದ ಗುಣಗಳಿರಲಿಲ್ಲ. |

187. ಟೀಪೂ ನಡಸಿದ ಮತಸಂಬಂಧವಾದ ಕಲಹವೇನು ?

ಕೇರಳದೇಶದ 30 ಸಾವಿರಮಂದಿ ಕ್ರಿಸ್ತರನ್ನು ಮಹಮ್ಮದೀಯರನ್ನಾಗಿ ಮಾಡಿ ಕೊಡಗನ್ನು ಕೊಳ್ಳೆ ಹೊಡೆದು 70 ಸಾವಿರ ಮಂದಿಯನ್ನು ಕೆಡಿಸಿ ಮಲೆಯಾಳದವರನ್ನು ಹೆದರಿಸಿದನು.

188. ಮೈಸೂರಿನ 3ನೇ ಕಲಹಕ್ಕೆ ಕಾರಣವೇನು ? ಈ ಕಲಹದಲ್ಲಿ ಇಂಗ್ಲೀಷುದಂಡಿನ ಯಜಮಾನ ಯಾರು ? ಇದ್ದು ಹ್ಯಾಗೆ ನಿಂತಿತು ?

ಟೀಪೂ ತಿರುವಾಂಕೂರನ್ನು ಕೊಳ್ಳೆ ಹೊಡೆದ್ದರಿಂದ ಈ ಕಲಹ ಹುಟ್ಟಿತು. ಈ ಕಲಹದಲ್ಲಿ ಇಂಗ್ಲೀಷರ ಕಡೆ ಲಾರ್ಡ್ ಕಾರ್ನವಾಲೀಸ್ ಇದ್ದನು. ಇದು ಶ್ರೀರಂಗಪಟ್ಟಣದ ಕರಾರಿನಿಂದ ನಿಂತಿತು.

189. ಮೈಸೂರಿನ 4 ನೇ ಕಲಹ ಯಾಕೆ ಹುಟ್ಟಿತು. ಹ್ಯಾಗೆ ಮುಗಿಯಿತು ? ಈ ಕಲಹದಲ್ಲಿ ನಡೆದ 2 ಯುದ್ಧಗಳನ್ನು ಅವುಗಳನ್ನು ನಡಿಸಿದ ಸರದಾರರ ಹೆಸರನ್ನು ಹೇಳಿ ?

ಟೀಪೂ ಇಂಗ್ಲೀಷರನ್ನು ಓಡಿಸಬೇಕೆಂತ ಫ್ರೆಂಚರೊಡನೆ ಫಿತೂರಿ ನಡಿಸಿದ್ದರಿಂದ ಹುಟ್ಟಿ ಇಂಗ್ಲೀಷರಿಗೆ ಜಯವಾಗಿ ನಿಂತಿತು, ಇದರಲ್ಲಿ ನಡದ

| ದೊಡ್ಡ ಯುದ್ಧ. | ಅದರ ಸರದಾರರು |
|---|---|
| ಶಿದಾಶಿಯರ್ ಯುದ್ಧವನ್ನು | ಜನರಲ್ ಸ್ಟೂವರ್ಟ್ |
| ಮಳವಳ್ಳಿ. | ಜನರಲ್ ಹಾರಿಸ್ಸ್ ಸಹ ಆಳಿದರು. |

190. ತಂದೆ ರಾಜ್ಯಸಂಪಾದಿಸಿದ, ಮಗ ಕಳಕೊಂಡ ಇವರ್ಯಾರು?

ತಂದೆ ಹೈದರನು, ಮಗ ಟೀಪೂ ಸುಲ್ತಾನನು.

191. ಮೈಸೂರಿನ ಹುಲಿ, ಬೆಟ್ಟದ ಇಲಿ, ಬಾಕ್ಸರಶೂರ, ವೇಲೂರಿನಶೂರ ಇವರ್ಯಾರು ?

ಮೈಸೂರಿನಹುಲಿ=ಟೀಪೂ, ಬೆಟ್ಟದ ಇಲಿ, ಔರಂಗಜೇಬ್, ಬಾಕ್ಸರ್ ಶೂರ=ಮನ್ರೊ, ವೇಲೂರಿನಶೂರ=ಜನರಲ್ ಜಿಲ್ಲೆಸ್ಪಿ.

192. ಅಯೋಧ್ಯೆಯಲ್ಲಿ ಹೇಸ್ಟಿಂಗ್ಸ್ ನಡಿಸಿದ ಏರ್ಪಾಡುಗಳೇನು?

ಅಸಫದ್ದೌಲನು ಕಂಪೆನಿಗೆ ಕೊಡಬೇಕಾಗಿ ಇದ್ದ ಹಣವನ್ನು ಬೇಗಂಗಳಿಂದ ವಸೂಲ್ಮಾಡಬೇಕಾಗಿ ತೀರ್ಮಾನಿಸಿ 76 ಲಕ್ಷ ರೂಪಾಯಿಗಳನ್ನು ಬೇಗಂಗಳಿಂದ ವಸೂಲ್ಮಾಡಿದನು.

193. ಬನಾರೀಸ್‌ನಲ್ಲಿ ಹೇಸ್ಟಿಂಗ್ಸ್‌ನಡಿಸಿದ ಏರ್ಪಾಡುಗಳೇನು?

ತನ್ನ ಅಪೇಕ್ಷೆಯಂತೆ ಬನಾರಸಿನ ಅರಸನಾದ ಛೇತ್‌ಸಿಂಗ್ 5ಲಕ್ಷ ರೂಪಾಯಿ ಕೊಡದ್ದರಿಂದಾ ಅವನನ್ನು ಕೈದಿನಲ್ಲಿಟ್ಟು ಅವನ ಸಹೋದರನ ಮಗನಿಗೆ ದೇಶವನ್ನು ಕೊಟ್ಟು ಪೊಗದಿಯನ್ನು ಹೆಚ್ಚಿಸಿದನು.

194. ಸೀಮೆಯಲ್ಲಿ ಹೇಸ್ಟಿಂಗ್ಸಿನಮೇಲೆ ತರಲ್ಪಟ್ಟ ಆಕ್ಷೇಪಣೆ ವಿಷಯವೇನು ?

1. ರೋಹಿಲ್ ಕಲಹದಲ್ಲಿ ನಿಷ್ಕಾರಣವಾಗಿ ಪ್ರವರ್ತಿಸಿದನು.
2. ಚೇತ್‌ಸಿಂಗನಿಗೂ ಬೇಗಂಗಳಿಗೂ ಅನ್ಯಾಯವಾದ ತೊಂದರೆ ಕೊಟ್ಟನು. ಆದರೆ ಇವನು ತಪ್ಪಿತಸ್ಥನಲ್ಲವೆಂತ ತೀರ್ಮಾನವಾಯಿತು.

195. ಕಂದಾಯದ ವಸೂಲಾತಿಯ ವಿಷಯದಲ್ಲಿ ಕಾರ್ನವಾಲೀಸ್ ಮಾಡಿದ 3 ಏರ್ಪಾಡುಗಳೇನು ?

1ನೇದು ಶಾಶ್ವತಕಂದಾಯ ನಿರ್ಣಯ ನಿಬಂಧನೆ—ರೈತರಿಗೆ ಜಮೀನನ್ನು ಶಾಶ್ವತವಾಗಿ ಕಂದಾಯಕ್ಕೆ ಕೊಟ್ಟು ಕ್ಲುಪ್ತವಾದ ಕಂದಾಯವನ್ನು ವಸೂಲ್ಮಾಡಬೇಕು.

2ನೇದು ರೈತವಾರಿಪದ್ಧತಿ—ಪ್ರತಿ ಪ್ರತಿ ರೈತನಿಗೂ ಬೇರೆ ಬೇರೆ ಪ

ವಿರ್ಸಾ ಕೊಟ್ಟು ಪ್ರತ್ಯೇಕ ಪ್ರತ್ಯೇಕ ಕಂದಾಯ ವಸೂಲ್ಮಾಡತಕ್ಕದ್ದು.

3ನೇದು ಗ್ರಾಮದ ಪದ್ಧತಿ—ಗ್ರಾಮದ ಜಮಿರ್ಸಾ ಎಲ್ಲಾ ಒಬ್ಬನಿಗೆ ಕೊಟ್ಟು ಅವನಿಂದ ಕಂದಾಯ ವಸೂಲ್ಮಾಡತಕ್ಕದ್ದು.

196. ಕಾರ್ನವಾಲೀಸನು ನ್ಯಾಯಸ್ಥಾನದಲ್ಲಿ ಮಾಡಿದ ಏರ್ಪಾಡುಗಳೇನು?

ಶಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳಲ್ಲಿ ಅಧಿಕಾರಿಗಳಾದ ಕಲೆಕ್ಟರುಗಳನ್ನು ತಪ್ಪಿಸಿ ಬೇರೆ ಬೇರೆ ನ್ಯಾಯಾಧಿಕಾರಿಗಳನ್ನು ಗೊತ್ತುಮಾಡಿದರು.

197. ಸರ್ ಜಾರ್ಜ್ ಷೋರಿನ ಕಾಲದಲ್ಲಿ ಅಯೋಧ್ಯೆಯಲ್ಲಿ ನಡೆದ ಬದಲಾವಣೆ ಏನು ?

ಆಸಫದೌಲನು ಸತ್ತನು. ವಿಜಿಯುರಾಲಿಯು ಪಟ್ಟಕ್ಕೆ ಬರಲು ಇವನು ಆಸಫದೌಲನ ಖಾಸಾ ಮಗನಲ್ಲವೆಂದು ಸಾದತ್ ಅಲ್ಲಿಯು ಅರಸಾದನು.

198. ಉಪಬಲ ಪದ್ಧತಿ ಅಂದರೇನು? ಮೊದಲು ಯಾರಿಂದ ಎಲ್ಲಿ ಆಚರಣೆಗೆ ತರಲ್ಪಟ್ಟಿತು ? ಯಾರಿಂದ ವಿಶೇಷವಾಗಿ ಜಾರಿಗೆ ತರಲ್ಪಟ್ಟಿತು ?

ಉಪಬಲ ಪದ್ಧತಿ ಅಂದರೆ ಸಹಾಯಸೈನ್ಯಪದ್ಧತಿ. ಇದು ವಾರನ್ ಹೇಸ್ಟಿಂಗ್ಸಿನಿಂದ ಅಯೋಧ್ಯೆಯಲ್ಲಿ ಮೊದಲಾಯಿತು. ಮಾರ್ಕ್ವಿಸ್ ಆಫ್ ವೆಲ್ಲೆಸ್ಲಿಯಿಂದ ವಿಶೇಷವಾಗಿ ಜಾರೀಗೆ ಬಂತು.

199. ಇದರ ಫಲಿತಾಂಶವೇನು ?

ಹೈದರಾಬಾದ್ ರಾಜನು ಬಳ್ಳಾರಿ, ಕರ್ನೂಲ್, ಕಡಪಾ, ದೇಶವನ್ನು ಕಂಪೆನಿಗೆ ಕೊಟ್ಟನು.

200. ಮಾರ್ಕ್ವಿಸ್ ಆಫ್ ವೆಲ್ಲೆಸ್ಲಿಯು ಕಾಲದಲ್ಲಿ ಕಂಪೆನಿಗೆ ಸೇರಿದ ಸೀಮೆಗಳ್ಯಾವವು?

ತಂಜಾವೂರ್, ಕರ್ನಾಟಕ, ಬಳ್ಳಾರಿ, ಕಡಪಾ, ಕರ್ನೂಲ್ ಇವು.

201. ಮಾರ್ಕ್ವಿಸ್ ಆಫ್ ವೆಲ್ಲೆಸ್ಲಿ ಕಾಲದಲ್ಲಿ ಪ್ರಸಕ್ತವಾದ ಕಲಹಗಳ್ಯಾವವು?

ಮೈಸೂರಿನ 4 ನೇ ಕಲಹ ಮತ್ತು 2 ನೇ 3 ನೇ ಮರಾಟಿ ಕಲಹಗಳು.

202. 1813ರಲ್ಲಿ ಈಸ್ಟ್ ಇಂಡಿಯಾ ಕಂಪೆನಿಯಲ್ಲಿ ಏನು ಬದಲಾವಣೆ ನಡೆಯಿತು ?

ಇಂಡಿಯಾದಲ್ಲಿ ಎಲ್ಲರೂ ವ್ಯಾಪಾರ ಮಾಡಬಹುದು. ಚೈನಾದೇಶದಲ್ಲಿ ಮಾತ್ರ ಕಂಪೆನಿಯವರೇ ಮಾಡಬೇಕು. ಪಾದ್ರಿಗಳು ಮತಬೋಧನೆ ಮಾಡಕೂಡದು. ಹೀಗೆ ಬದಲಾವಣೆ ಆಯಿತು.

203. ಘೂರ್ಕರು ಯಾರು ? ಅವರೊಡನೆ ಇಂಗ್ಲೀಷರಿಗೆ ಯಾಕೆ ಕಲಹಹುಟ್ಟಿತು? ಆಗ ಯಾರು ಗೌರ್ನರ ಜನರಲ್ ಆಗಿದ್ದರು? ಈ ಕಲಹವನ್ನು ಸಂಕ್ಷೇಪಿಸಿ ಹೇಳು?

ಘೂರ್ಕರು ನೇಪಾಳದ ನಿವಾಸಿಗಳು. ಅವರು ಇಂಗ್ಲೀಷರಿಗೆ ಸೇರಿದ ಎರಡು ದೊಡ್ಡ ಸೀಮೆಗಳನ್ನು ಹಿಡಿದುಕೊಂಡು ತಮ್ಮದೆಂದು ಹೇಳಿದಕಾರಣ ಕಲಹ ಹುಟ್ಟಿತು. ಆಗ ಮಾರ್ಕ್ವಿಸ್ ಆಫ್ ಹೇಸ್ಟಿಂಗ್ಸ್ ಗೌವರ್ನರ ಜನರಲಾಗಿದ್ದನು. ಇವರ ಪುಂಡನ್ನು ಅಣಗಿಸಲು ನೇಪಾಳದೇಶವನ್ನು ಪಶ್ಚಿಮ ದಿಕ್ಕಿನ ಅಕ್ಟರ್ಲೋನಿಯೂ ಚೈಟಾಕ ಕೋಟೆಯನ್ನು ಜನರಲ್ ಜಲ್ಲೆಸ್ಪಿಯೂ ಪೂರ್ವಕ್ಕೆ ಜನರಲ್ ವುಡ್, ಖ್ಯಾಟಮಾಂಡಿಗೆ ಜನರಲ್ ಮಾರ್ಲೆಯೂ ಮುತ್ತಿ ಇಂಗ್ಲೀಷರಿಗೆ ಜಯವಾಗಿ ಶೀಗೌಳಿ ಕರಾರು ನಿಂದ ಸಮಾಧಾನವಾಯಿತು.

204. ಲಾರ್ಡ್ ಬೆಂಟಾಕ್ ಮಾಡಿದ ಕೆಲಸದಲ್ಲಿ ಶ್ಲಾಘ್ಯವಾದ್ದು ಯಾವದು ?

ಸಹಗಮನವನ್ನು ಮನ್ನಾ ಮಾಡಿದ್ದೇ ಶ್ಲಾಘ್ಯವಾದ್ದು.

205. ಬೆಂಟಾಕನ ಆಳಿಕೆಯಲ್ಲಿ ಕಂಪೆನಿಯ ಶಾಸನದಲ್ಲಿ ಏನು ಬದಲಾವಣೆ ನಡೆಯಿತು ?

ಕಂಪೆನಿಯವರು ರಾಜ್ಯವನ್ನಾಳಬೇಕು. ಚೈನಾದೇಶದ ವರ್ತಕವನ್ನು ಕಂಪೆನಿಯವರು ಮಾತ್ರನೇ ಮಾಡಬೇಕೆಂಬ ನಿರ್ಬಂಧವಿಲ್ಲ.

206. ಆಫ್ಘಾನ್ ದೇಶದ ಮೊದಲನೆ ಕಲಹದಲ್ಲಿ ಯಾವ ಯಾವ ಗೌರ್ನರು ಸೇರಿದ್ದರು ?

ಲಾರ್ಡ್ ಆಕ್ಲಾಂಡ್, ಲಾರ್ಡ್ ಎಲೆಂಬರೊ ಈ ಇಬ್ಬರು.

207. ಸಿಂಧು ದೇಶವನ್ನು ಇಂಗ್ಲೀಷರು ಯಾವಾಗ ಮತ್ತು ಯಾಕೆ ಕಂಪೆನಿಗೆ ಸೇರಿಸಿದರು?

ಇಂಗ್ಲೀಷರ ಹಡಗುಗಳಿಗೆ ಕಟ್ಟಿಗೆ ಒದಗಿಸತಕ್ಕ ಅಮೀರರು ಆ ಸೀಮೆಯ ಕಮಿಷನರಾದ ಔಟ್ರಾಮನ ಮನೆಯನ್ನು ಮುತ್ತಿದ್ದರಿಂದಾ ಅವರನ್ನು ಸೋಲಿಸಿ ಸೇರಿಸಿಕೊಂಡರು.

208. 1843,1844 ಲ್ಲಿ ಗ್ವಾಲಿಯರ್‌ನಲ್ಲಿ ಉಂಟಾದ ಬದಲಾವಣೆ ಏನು ?

1843 ಲ್ಲಿ ಜನಕೋಜಿಯು ಸತ್ತನು. ಅವನ ವಿತಂತುವು ಒಬ್ಬ ದತ್ತು ಮಗನನ್ನು ಗೊತ್ತು ಮಾಡಿದ್ದರಿಂದ ಕೆಲಸ ನಡಿಸಲಿಕ್ಕೆ ಆಗಿನ ಗೌರ್ನರ್ ಮಾಮಾಸಾಹೇಬನನ್ನು ಗೊತ್ತು ಮಾಡಿದನು. ಜನಕೋಜಿಯ ವಿತಂತುವು ಇವನನ್ನು ತಪ್ಪಿಸಿ ದಾದಾಖಾಸ್ಜಿಯನ್ನು ಗೊತ್ತು ಮಾಡಿದಳು. ಆದ್ದರಿಂದ ಕಲಹ ನಡೆದು ಜನಕೋಜಿಯ ವಿತಂತುವು ಸೋತು ಇಂಗ್ಲೀಷರಿಗೆ ವಿಧೇಯಳಾದಳು.

209. ಸಿಕ್ಕರೊಡನೆ ಇಂಗ್ಲೀಷರಿಗೆ ಯಾಕೆ ಕಲಹ ಹುಟ್ಟಿತು ? ಈ ಕಲಹದಲ್ಲಿ ಪ್ರಸಿದ್ಧವಾದ ಯುದ್ಧಗಳಲ್ಲಿ 4 ನ್ನು ಹೇಳಿರಿ?

ದುಲೀಪ್ ಸಿಂಗನ ದಂಡು ಡಿಲ್ಲಿ ಮತ್ತು ಬನಾರಿಸ್ ಸೀಮೆಗಳನ್ನು ಕೊಳ್ಳೇ ಹೊಡೆದ್ದರಿಂದಾ ಕಲಹ ಹುಟ್ಟಿತು. ಇದರಲ್ಲಿ ಪ್ರಸಿದ್ಧವಾದವು ಮೂಡ್ಕಿ, ಫಿರೋಜಷರ್, ಆಲಿವಾಲ್, ಸೊಬ್ರೈಯನ್.

210. ಈ ಕಲಹವನ್ನು ನಿಲ್ಲಿಸಿದ ಕರಾರ್ಯಾವದು ? 2ನೇ ಕಲಹಕ್ಕೆ ಕಾರಣವೇನು ?

ಮೊದಲನೇ ಕಲಹವನ್ನು ಲಾಹೋರು ಕರಾರು ನಿಲ್ಲಿಸಿತು. ಆಮೇಲೆ ಮುಲ್ತಾನನ ಮೂಲ್ ರಾಜನು ಮಿಸ್ಟರ್ ವಾನ್ಸ ಆಗ್ನ್ಯೂಯೆಂಬ ಸಿವಿಲ್

ಅಧಿಕಾರಿಯನ್ನು ಕೊಂದು ಇಂಗ್ಲೀಷರಮೇಲೆ ಮತ ಸಂಬಂಧವಾದ ಕಲಹವನ್ನು ಪ್ರಕಟಿಸಿದ್ದರಿಂದಾ ಕಲಹ ಹುಟ್ಟಿತು.

211. ಸಿಕ್ಕರೊಡನೆ ಸಂಭವಿಸಿದ ಕೊನೆ ಯುದ್ಧ ಯಾವದು ? ಅವರ ದಂಡಿನ ಯಜಮಾನರಲ್ಲಿ ಕೆಲವರ ಹೆಸರನ್ನುಹೇಳಿ?

ಸಿಕ್ಕರೊಡನೆ ಸಂಭವಿಸಿದ ಕೊನೆ ಯುದ್ಧವು. ಗುಜರಾತ್ ಯುದ್ಧ. ಇವರ ದಂಡಿನ ಯಜಮಾನರಲ್ಲಿ ಷರಸಿಂಗ್ ಮತ್ತು ದುಲೀಪಸಿಂಗ್ ಇವರು ಮುಖ್ಯರು.

212. ಲಾರ್ಡ್ ಹಾರ್ಡಿಂಜ್ ಪ್ರಜಾ ಕ್ಷೇಮಕ್ಕಾಗಿ ಮಾಡಿದ ಕೆಲಸಗಳೇನು ?

ಸ್ತ್ರೀಹತ್ಯ, ಶಿಶುಹತ್ಯ, ನರಬಲಿಗಳನ್ನು ನಿಲ್ಲಿಸಿದನು. ಸುಂಕವನ್ನು ಮನ್ನಾ ಮಾಡಿದನು. ಭಾನುವಾರದಿನ ರಜಾ ಸ್ಯಾಂಕ್ಷನ್ ಮಾಡಿದನು.

213. ಬರ್ಮಾದೇಶದ 2ನೆ ಕಲಹಕ್ಕೆ ಕಾರಣವೇನು? ಇದು ಹ್ಯಾಗೆ ಪರಿಣಮಿಸಿತು ?

ರಂಗೂನ್‌ನಲ್ಲಿದ್ದ ಇಂಗ್ಲೀಷ್ ವರ್ತಕರಿಗೆ ಆ ಸರ್ಕಾರದವರು ತೊಂದರೆ ಮಾಡಿದ್ದರಿಂದ ಕಲಹ ಹುಟ್ಟಿ ಪೆಗ್ಯು ಇಂಗ್ಲೀಷರಿಗೆ ಸೇರಿ ಸಮಾಧಾನವಾಯಿತು.

214 ಡಾಲ್ ಹೌಸಿ ಕಾಲದಲ್ಲಿ ಕಂಪನಿಗೆ ಸೇರಿದ ಶೀಮೆಗಳ್ಯಾವವು ?

ನಾಗಪುರ, ಪಂಜಾಬ್, ಪೆಗ್ಯು, ಬಿರಾರ್, ಅಯೋಧ್ಯ ಇವು.

215. ಲಾರ್ಡ್ ಕ್ಯಾನಿಂಗ್‌ನ ಕಾಲದಲ್ಲಿ ಇಂಡಿಯಾಕ್ಕೆ ಒದಗಿದ ಮಹದ್ವಿಪತ್ತು ಯಾವದು ? ಮೊದಲು ಎಲ್ಲಿ ಹುಟ್ಟಿತು? ಎಲ್ಲಿ ಹರಡಿತು ?

ನಾನಾರಾಯನ ದಂಗೆಯಂಬದು. ಬರ್ಹಾನಪುರದಲ್ಲಿ ಹುಟ್ಟಿ ಮೀರತ್ ಮತ್ತು ಡಿಲ್ಲಿಗಳಲ್ಲಿ ಹರಡಿತು.

216 ಇದರಿಂದ ರಾಜ್ಯದಲ್ಲಿ ಉಂಟಾದ ಬದಲಾವಣೆ ಏನು ?

ದೇಶವು ವಿಕ್ಟೋರಿಯ ರಾಣಿಯವರ ಕೈಕೆಳಗೆ ಇರಬೇಕು. ಇಂಡಿಯಾ

ದ ವಿಚಾರಣೆಯು ಸೆಕ್ರೆಟರಿ ಆಫ್ ಸ್ಟೇಟಗೆ ಕೊಡಬೇಕು. ಬೋರ್ಡ ಆಫ್ ಕಂಟ್ರೋಲ್ ಮನ್ನಾ ಮಾಡಲ್ಪಡಬೇಕು.

217. ಇಂಡ್ಯಾದ ಮೊದಲನೆ ವೈಸರಾಯಿ ಯಾರು?

ಲಾರ್ಡ್ ಕ್ಯಾಂನಿಂಗ್ ಯಂಬುವನು.

218. ಮ್ಯಾಗ್ನಾ ಚಾರ್ಟಯಂಬದ್ಯಾವದು? ಅದರಿಂದೇನು ತಿಳಿಯುತ್ತೆ ?

ಮ್ಯಾಗ್ನಾ ಚಾರ್ಟಯಂಬದು ರಾಣಿಯವರ ಪ್ರಸಿದ್ಧ ಪತ್ರಿಕೆಯು ಇದರಿಂದಾ ರಾಣಿಯವರಿಗೆ ಹೆಚ್ಚು ಸೀಮೆಯನ್ನು ತೆಗದು ಕೊಳ್ಳತಕ್ಕ ಅಪೇಕ್ಷೆ ಇಲ್ಲವೆಂತಲೂ ಇಲ್ಲಿನವರ ಮತ ಸಂಬಂಧದಲ್ಲಿ ತಾವು ಪ್ರವರ್ತಿಸುವದಿಲ್ಲವೆಂತಲೂ ತಿಳಿಯುತ್ತೆ.

219. ಅರಲ್ ಡಫರಿನ್ ಯವರ ಆಳ್ವಿಕೆಯಲ್ಲಿ ಬರ್ಮಾದಲ್ಲಿ ಯಾವ ಬದಲಾವಣಿ ನಡೆಯಿತು ?

ಅಲ್ಲಿನ ಧೊರೆಯಾದ ಥೀಬಾ ಶೆರೆ ಹಿಡಿಯಲ್ಪಟ್ಟನು. ಬರ್ಮಾ ರಾಜ್ಯವು ಇಂಗ್ಲೀಷರಿಗೆ ಸೇರಿತು.

220. ಇವರ ಆಳ್ವಿಕೆಯಲ್ಲಿ ಲೋಕೋಪಕಾರವಾದ ಏರ್ಪಾಟ್ಯಾವದು ?

ಹೆಂಗಸರ ದೇಹ ಸ್ಥಿತಿಯನ್ನು ಸರಿಯಾಗಿ ನೋಡಿ ಔಷಧವನ್ನು ಕೊಡಲು ಹೆಂಗಸರಿಗೇನೆ ವೈದ್ಯವನ್ನು ಕಲಿಸಲು ಅನುಕೂಲವಾದ ಏರ್ಪಾಟಾಯಿತು.

221. ಇಂಗ್ಲೀಷರ ಆಳ್ವಿಕೆಯಿಂದ ಇಂಡ್ಯಾಕ್ಕೆ ಬಂದ ಉಪಯೋಗವೇನು ?

ಹೊಗೆಗಾಡಿ, ತಂತೀ ಟಪಾಲ್, ಪುಸ್ತಕಗಳನ್ನು ಅಚ್ಚು ಹಾಕುವರೀತಿ ಮುಂತಾದದ್ದು ತಿಳಿಯಬಂತು. ವ್ಯಾಪಾರವು ನಾಗರೀಕತೆ ಹೆಚ್ಚಿತು. ವಿದ್ಯೆಯು ಪ್ರಬಲ್ಯಕ್ಕೆ ಬಂತು. ಸಹಗಮನ ನರಬಲಿ ಮುಂತಾದ್ದು ನಿಂತಿತು.

222. ದುರ್ಮರಣದಿಂದ ಸತ್ತ ವೈಸರಾಯಿ ಯಾರು ? ಕಾರಣವೇನು ?

ಲಾರ್ಡ್ ಮೇಯೋ ಯೆಂಬುವನೆ ದುರ್ಮರಣದಿಂದ ಸತ್ತನು, ಇವನು ಅಂಡಮಾನ್ ದ್ವೀಪವನ್ನು ನೋಡಲಿಕ್ಕೆ ಹೋಗಲು ಅಲ್ಲಿದ್ದ ಖೈದುಗಳಲ್ಲಿ ಒಬ್ಬ ಶತ್ರುವು ಇವನನ್ನು ಕೊಂದನು.

223. ಯೂನಿವರ್ಸಿಟಿ ಅಂದರೇನು? ಈ ಸಮಾಜದಿಂದೇನುಪಯೋಗ?

ಯೂನಿವರ್ಸಿಟಿಯೆಂಬದು 4 ವಿದ್ವತ್ಸಮಾಜಗಳು. ಇದರಿಂದ ಜನರ ಪಾಂಡಿತ್ಯವು ವ್ಯಕ್ತವಾಗುವದು.

224. ದೇಶಭಾಷೆಯಲ್ಲಿ ನ್ಯೂಸ್ ಪೇಪರನ್ನು ರಚಿಸಲು ಯಾರು ಅಪ್ಪಣೆ ಮಾಡಿದರು? ಇದರ ಉಪಯೋಗವೇನು?

ಇದಕ್ಕೆ ಬೆಂಟಿಂಕ್ ಅಪ್ಪಣೆ ಮಾಡಿದನು. ಇದರಿಂದ ದೋಷವು ಕಮ್ಮಿಯಾಗಿ ಗುಣಾಂಶವು ಹೆಚ್ಚಾಗಿ ರಾಜ್ಯಾಧಿಕಾರವು ಜನಗಳ ನೀತಿ ಚಾತುರ್ಯವು ವಿವೇಕವಾಗಿ ನಡಿಯುವದು.

225. ಈಗ ಇರುವ ಶೀಮೆಯ ಗೌರ್ನರ ಜನರಲ್ ಸಾಹೇಬರವರ ಮತ್ತು ಮೈಸೂರು ರಾಜರವರ ಹೆಸರೇನು?

ಗೌರ್ನರ್ ಜನರಲ್ ಸಾಹೇಬರವರ ಹೆಸರು ಅರಲ್ ಡಫರಿನ್ಯವರು. ಮೈಸೂರು ಮಹಾರಾಜರವರ ಹೆಸರು ಚಾಮರಾಜೇಂದ್ರ ಒಡೆಯರವರು.

## ಮುಖ್ಯವಾದ ಕರಾರುಗಳನ್ನು ವಿವರಿಸು ?

| ಕರಾರು ಹುಟ್ಟಿದ ತಾರೀಖು (ಸಂವತ್ಸರ.) | ಕರಾರಿನ ಹೆಸರು. | ಕರಾರನ್ನು ಕೇಳಿಕೊಂಡವನು. | ಕರಾರಿಗೆ ಒಪ್ಪಿದವನು. | ಅದರ ಷರತ್ತು. | ಅದರ ಪರಿಣಾಮ, |
|---|---|---|---|---|---|
| 1738 | ಸಿರೋಂಜಿ ಕರಾರ್ | ನೈಜಾಮುಲ್ ಮುಲ್ಕ್ | ಎರಡನೇ ಬಾಜಿರಾವ್ | ಮಾಳವವನ್ನೂ ಚಂಬಾಲ್ ಮತ್ತು ನರ್ಮದಾನದಿಯ ಮಧ್ಯದೇಶವನ್ನು ನೈಜಾಮನು ಬಾಜೀರಾಯನಿಗೆ ಕೊಡಿಸಬೇಕು. ಮತ್ತು ಯುದ್ಧದ ಖರ್ಚಿಗೆ 50 ಲಕ್ಷರೂಪಾಯಿ ಕೊಡಬೇಕು. | ನೈಜಾಂ ಹೀಗೆನಡಿಯಲಿಲ್ಲಾ |
| 1775 | ಸೂರತ್ ಕರಾರ್ | ರಘೋಬಾ | ಬೊಂಬಾಯಿ ಗೌರ್ನಮೆಂಟಿನವರು | ಇಂಗ್ಲೀಷರು ರಘೋಬನನ್ನು ಪೇಷ್ವೆನನ್ನಾಗಿ ಮಾಡಬೇಕು. ರಘೋಬನು ಸಾಲ್ಸೆಟ್ ದ್ವೀಪವನ್ನೂ ಬೇಸೀನನ್ನು ಇಂಗ್ಲೀಷರಿಗೆ ಕೊಡಬೇಕು. | ಇಂಗ್ಲೀಷರಿಗೆ ರಘೋಬನನ್ನು ಪೇಷ್ವೆನಾಗಿ ಮಾಡಬಹುದಾದಷ್ಟು ಅನುಕೂಲ ಸಿಕ್ಕಿತಾದಾಗ್ಯೂ ಹೈದರನು ಮದ್ರಾಸಿನಮೇಲೆ ದಂಡೆತ್ತಿದ್ದರಿಂದ ಇವನಪ್ರತಿ ಕಕ್ಷಿಯವರೊಡನೆ ಸಮಾಧಾನಮಾಡಿಕೊಂಡರು. |
| 1776 | ಪುರಂದರ 2ನೆಕರಾರ್ | ನಾನಾಫರ್ನವೀಸ್ | ಬಂಗಾಳ ಗೌರ್ನ್‌ಮೆಂಟಿನವರು | ಇಂಗ್ಲೀಷರು ರಘೋಬನಪಕ್ಷವನ್ನು ಬಿಡಬೇಕೂ ಮಹಾರಾಷ್ಟ್ರರು ಇಂಗ್ಲೀಷರಿಗೆ ಸಾಲ್ಸೆಟ್ ದ್ವೀಪವನ್ನು ಕೊಡಬೇಕು. | ಇಂಗ್ಲಂಡಿನ ಡೈರೆಕ್ಟರ್ ಗಳಿಂದ ರದ್ದು ಮಾಡಲ್ಪಟ್ಟಿತು, |

| | | | | | |
|---|---|---|---|---|---|
| 1779 | ವಾಗಾಂ ಕರಾರ್ | ಕರ್ನಲ್ ಕೊಬರ್ | ಸಿಂಧ್ಯ | ಇಂಗ್ಲೀಷರು ಬ್ರೋಚನ್ನು ಮರಾಟಿಗರಿಗೆ ವಾಪಸ್ಸು ಕೊಟ್ಟು ಬಂಗಾಳಾದಂಡನ್ನು ಹಿಂದಕ್ಕೆ ಕರೆಸಿಕೊಳ್ಳಬೇಕು. | ಇಂಗ್ಲೆಂಡಿನ ಡೈರೆಕ್ಟರ್ ಗಳಿಂದ ರದ್ದು ಮಾಡಲ್ಪಟ್ಟಿತು |
| 1782 | ಸಾಲ್‌ಬಿ ಕರಾರು | ವಾರ್ರನ್‌ಹೇಸ್ಟಿಂಗ್ಸ್ | ನಾನಾಫಡ್ನವೀಸ್ | ರಘೋಬನಿಗೆ ತಿಂಗಳಿಗೆ25 ಸಾವಿರ ರೂ. ಪೇನ್ಷನ್ ಕೊಡಬೇಕು. ಬ್ರೋಚ್ ಶಿಂದ್ಯಗೆಕೊಡಬೇಕು. ಮಹಾರಾಷ್ಟ್ರರು ಪೋರ್ಚುಗೀಸರವಿನಹ ಯಾವ ಇತರದೇಶದವರಿಗೂ ಆಸರೆ ಕೊಡಕೂಡದು. | |
| 1802 | ಬೇಸೀನ್‌ಕರಾರು | ಎರಡನೇ ಬಾಜೀರಾವ್ | ಇಂಗ್ಲೀಷರು | ಪುನಹೆಯಲ್ಲಿ ಇಂಗ್ಲೀಷರು ಸಹಾಯ ಸೈನ್ಯವಿಡಬೇಕು. ಈಖರ್ಚಿಗೆ ಪೇಷ್ವನು 26ಲಕ್ಷರೂ. ಕೊಡಬೇಕು, ಇಂಗ್ಲೀಷರು ಪೇಷ್ವನನ್ನೂ ಅವನರಾಜ್ಯವನ್ನು ಕಾಪಾಡಬೇಕು. | ಪೇಷ್ವನು ಸ್ವತಂತ್ರ್ಯವನ್ನು ಕಳಕೊಂಡನು |
| 1803 | ದೇವಗಾಂವ್‌ಕರಾರು | ರಘೋಜಿಬೋಂಸ್ಲೆ | ಜನರಲ್ ವೆಲ್ಲೆಸ್ಲಿ | ಕಟಕ್ ಮತ್ತು ಬಾಲ್‌ಸೂರ ಸೀಮೆಯನ್ನು ಇಂಗ್ಲೀಷರಿಗೂ ವರದಾನದಿಯ ಪಶ್ಚಿಮದ ಮತ್ತು ಗಾವಿಲ್‌ಘಡಕ್ಕೆ ದಕ್ಷಿಣದ ಸೀಮೆಯನ್ನು ನೈಜಾಮರಿಗೂ ನಾಗಪುರದಲ್ಲಿ ಇಂಗ್ಲೀಷು ರೆಸಿಡೆಂಟನನ್ನು ಇಟ್ಟುಕೊಳ್ಳಬೇಕು. | |
| 1818 | ಮಂದೇಶ್ವರದ ಕರಾರು | ಮಲ್ಹಾರಿರಾವ್ ಹೋಲ್ಕರ್ | ಇಂಗ್ಲೀಷರು | ಇಂಗ್ಲೀಷರಿಗೆ ಕೊಂಚಸೀಮೆಯನ್ನು ಹೋಲ್ಕರ ಕೊಡಬೇಕು. ಅಮೀರ್‌ಖಾನ ಜಹಗೀರ್ ಸ್ಥಿರವಾಗಿರಬೇಕು. | ಹೋಲ್ಕರನ ರಾಜ್ಯ ಇಂಗ್ಲೀಷರ ಪೋಷಣೆಗೆ ಒಳಪಟ್ಟಿತು |

| | | | | | |
|---|---|---|---|---|---|
| 1774 | ಕಾಶಿಕರಾರು | ಸೂಜಾವುದ್ದೌಲ್ | ವಾರ್ರೆಹೇಸ್ಟಿಂಗ್ಸ | ಕೋಂ ಮತ್ತು ಅಲಹಾಬಾದ್ ಶೀಮೆಯು ಇಂಗ್ಲೀಷರಿಗೆ ಸೇರಬೇಕು. ರೋಹಿಲ್‌ಖಂಡದಮೇಲೆ ದಂಡೆತ್ತಲು ಸೂಜನಿಗೆ ಇಂಗ್ಲೀಷರು ಸಹಾಯಮಾಡಬೇಕು. ಸೂಜನು 50 ಲಕ್ಷ ರೂಪಾಯಿಗಳನ್ನು ಚುನಾರ್‌ಕೋಟೆಯನ್ನು ಕೊಡಬೇಕು. | ಆಲೋಚನಾ ಸಭೆಯವರು ರದ್ದು ಮಾಡಿದರು. |
| 1769 | ಮದ್ರಾಸ್‌ಕರಾರ್ | ಮದ್ರಾಸ್ ಗವರ್ನ ಮೆಂಟಿನವರು | ಹೈದರ್ | ಎರಡು ಪಂಗಡದವರು ಕಲಹ ಪೂರ್ವ ಇದ್ದಂತೆ ತಮ್ಮ ತಮ್ಮ ದೇಶಗಳನ್ನು ತಂಮ ಸುಫರ್ದಿಗೆ ತೆಗದುಕೊಳ್ಳಬೇಕು. ಸಮಯಬಿದ್ದಾಗ ಒಬ್ಬರಿಗೊಬ್ಬರು ಸಹಾಯಮಾಡಬೇಕು. | |
| 1784 | ಮಂಗಳೂರುಕರಾರ್ | ಮದರಾಸ್ ಗವರ್ನರ್ | ಟಿಪ್ಪು | ಎರಡುಪಂಗಡದವರೂ ಮುಂಚೆಇದ್ದಂತೆ ತಮಗಿದ್ದಸ್ಥಳಗಳನ್ನುಮಾತ್ರ ಇಟ್ಟುಕೊಳ್ಳಬೇಕು. | |
| 1790 | ತ್ರಿಕಕ್ಷಿಕರಾರು | ಇಂಗ್ಲೀಷರು | ಮಹಾರಾಷ್ಟ್ರರು ಮತ್ತು ನೈಜಾಂ | ಟೀಪೂವಿನ ಪುಂಡಿಗಾಗಿಸಲು ಈ 3 ಜನರಸೈನ್ಯವನ್ನು ಕೂಡಿಸಬೇಕು. | |
| 1792 | ಶ್ರೀರಂಗಪಟ್ಟಣದಕರಾರು | ಟೀಪೂ | ಲಾರ್ಡುಕಾರ್ನ ವಾಲೀಸು | ಟೀಪೂ ತನ್ನ ಅರ್ಧರಾಜ್ಯವನ್ನು ಇಂಗ್ಲೀಷರಿಗೂ ಅವರಸ್ನೇಹಿತರಿಗೂ ಕೊಡಬೇಕು. ಸೆರೆಹಿಡಿದಿದ್ದ ಇಂಗ್ಲೀಷರನ್ನೆಲ್ಲಾ ಬಿಡಬೇಕು. ಮತ್ತು 3ಕೋಟಿ 30ಲಕ್ಷ ರೂ. ಕೊಡಬೇಕು. | |

| | | | | | |
|---|---|---|---|---|---|
| 1775 | ಅಯೋಧ್ಯೆಕರಾರು | ಆಲೋಚನಾಸಭೆಯವರು (ಫ್ರಾನ್ಸಿಸ್‌ನ ಕಕ್ಷಿ) | ಅಸಫದ್ದೌಲ್ | ಅಸಫದ್ದೌಲನು ಬನಾರಿಸಿನ ಉತ್ಪತ್ತಿಯನ್ನು ಕಂಪೆನಿಗೆ ಕೊಡಬೇಕು. ಸೂಜನ ಆಸ್ತಿಯು ಶಿವನಕೊಂಡತಿಗೆ ಸೇರತಕ್ಕದ್ದು. | |
| 1816 | ಶೀಗೌಳಿಕರಾರು | ಘೂರ್ಕರು | ಇಂಗ್ಲೀಷರು | ಕಾಳಿನದಿಗೆ ಪಶ್ಚಿಮದ ದೇಶವನ್ನು ತಾರೀಯಿಯನ್ನು ಇಂಗ್ಲೀಷರಿಗೆಕೊಟ್ಟು ಖ್ಯಾಂಡ ಮಾಂಟಿನಲ್ಲಿ ರೆಸಿಡೆಂಟನನ್ನು ಇಟ್ಟುಕೋಬೇಕೂ, | ನೇಪಾಳವು ಇಂಗ್ಲೀಷರ ವಶವಾಯಿತು. |
| 1826 | ಯಡೆಂಬುಕರಾರ್ | ಅವಾರಾಜನು | ಸರ್‌ಆರ್ಜಿಬಾಲ್ಡ್ ಕೆಂಬಲ್ | ಅಸಾಂ, ಅರಕಾನ್ ತೆನಾಸರಾದೇಶವು ಇಂಗ್ಲೀಷರಿಗೆ ಸೇರಬೇಕೂ<br>ಅವಾರಾಜನು ಇಂಗ್ಲೀಷರ ಯುದ್ಧದಖರ್ಚಿಗೆ 1 ಕೋಟಿ ರೂ. ಕೊಟ್ಟು ತನ್ನ ಆಸ್ಥಾನದಲ್ಲಿ ಇಂಗ್ಲೀಷುಮಂತ್ರಿಯನ್ನು ಇಟ್ಟುಕೋಬೇಕು. | ಬರ್ಮಾರಾಜ್ಯವು ಇಂಗ್ಲೀಷರ ಪ್ರೋಷಣೆಗೆ ಒಳಪಟ್ಟಿತು. |
| 1846 | ಲಾಹೂರ್‌ಕರಾರ್ | ದುಲೀಪ್‌ಸಿಂಗ್ | ಹಾರ್ಡಿಂಜ್ | ಸಿಕ್ಕರು ಜಲಾಂಧರದೂಯಾಬನ್ನು ಯುದ್ಧದ ಖರ್ಚನ್ನು ಇಂಗ್ಲೀಷರಿಗೆ ಕೊಟ್ಟು ಇಂಗ್ಲೀಷು ರೆಸಿಡೆಂಟನ ಅನುಮತಿಯಂತೆ ನಡಿಯತಕ್ಕದ್ದು.<br>ದುಲೀಪ್‌ಸಿಂಗ್ ಲಾಹೋರಿನ ಅರಸಾಗಿರತಕ್ಕದ್ದು. | ಪಂಜಾಬು ಇಂಗ್ಲೀಷರ ಪ್ರೋಷಣೆಗೆ ಒಳಪಟ್ಟಿತು. |
| 1803 | ಸರ್ಜಿ ಅಂಜೆಂಗಾರ್ವ ಕರಾರ್ | ದೌಲತರಾವು ಶಿಂಧ್ಯೆ | ಜನರಲ್‌ಲೇಕ್ | ಗಂಗಾ ಯಮುನಾ ನದಿಗಳಮಧ್ಯೆಇರುವ ಮತ್ತು ಜಯಪುರಕ್ಕೆ ಉತ್ತರದಲ್ಲಿರುವ ದೇಶವನ್ನೂ ಇಂಗ್ಲೀಷರಿಗೆ ಕೊಟ್ಟು ಶಿಂಧ್ಯನ ಕೋರ್ಟಿನಲ್ಲಿ ರೆಸಿಡೆಂಟನನ್ನು ಇಟ್ಟುಕೊಳ್ಳಬೇಕು. | |

## ಮುಖ್ಯವಾದ ಮುತ್ತಿಗೆಗಳನ್ನು ವಿವರಿಸು?

| ಸಂವತ್ಸರ. | ಮುತ್ತಲ್ಪಟ್ಟ ಸ್ಥಳ ಮತ್ತು ಮುತ್ತಲ್ಪಟ್ಟವರು. | ಮುತ್ತುವಿಕೆ, | | ಫಲ. |
|---|---|---|---|---|
| | | ಮುತ್ತಿದವರು. | ಮುತ್ತುವದಕ್ಕೆ ಉಂಟಾದ ಕಾರಣ. | |
| 1024 | ಸೋಮನಾಥ ದೇವಸ್ಥಾನದ ಹಿಂದುಗಳು. | ಘಸ್ನಿ ಮಹಮೂದ್ | ಈ ದೇವಸ್ಥಾನದ ಐಶ್ವರ್ಯವನ್ನು ತೆಗದುಕೊಂಡು ಹೋಗಬೇಕೆಂದು ಮುತ್ತಿದನು. | ಘಸ್ನಿ ಮಹಮೂದನಿಗೆ ಜಯವಾಯಿತು. |
| 1528 | ಚಂದ್ರಿಕೋಟೆಯ ಮೇದಿನಿರಾಯ | ಬೇಬರ್ | ಮೇದಿನಿರಾಯನು ಸಿಕ್ರಿಯುದ್ಧದಲ್ಲಿ ಬೇಬರನ ಶತೃವಾದ ಸಂಗನಿಗೆ ಸಹಾಯಮಾಡಿದ್ದನು. | ಚಂದ್ರಿಕೋಟೆ ಬೇಬರಿಗೆ ಸಿಕ್ಕಿತು. ಮೊಗಲರ ಅಧಿಕಾರ ಇಂಡಿಯಾದಲ್ಲಿ ಸ್ಥಾಪಿಸಲ್ಪಟ್ಟಿತು |
| 1746 | ಮದರಾಸ್ ಇಂಗ್ಲೀಷರು (1) | ಲಾಬೊರ್ಡೋನೆ | ಯುರೋಪಿನಲ್ಲಿ ಈ ಕಂಗಡದವರಿಗೆ ಕಲಹಹುಟ್ಟಿದ್ದರಿಂದ ಆದ್ವೇಷದಮೇಲೆ ಮುತ್ತಿದನು. | ಮದ್ರಾಸ್ ಲೂಟಿ ಮಾಡಲ್ಪಟ್ಟಿತು. ಇಂಗ್ಲೀಷರು ಸೋತರು |
| 1758 | (2) | ಕೌಂಟ್ ಡಿಲಾಲಿ | ,, | ಫೋರ್ಟ್ ಸೇಂಟ್ ಡೇವಿಡ್ ಹಾಳಾಯಿತು. ಫ್ರೆಂಚರಿಗೆ ಜಯವಾಯಿತು |
| 1748 | ಪಾಂಡಿಚೆರಿ ಡೂಪ್ಲೆ (1) | ಲಾರೆನ್ಸ್ | ತಮ್ಮ ಮದ್ರಾಸನ್ನು ಫ್ರೆಂಚರು ಮುತ್ತಿದರು. | ಲಾಲಿಯು ಸೆರೆ ಹಿಡಿಯಲ್ಪಟ್ಟನು ದೇವಿಕೋಟೆ ಇಂಗ್ಲೀಷರ ವಶವಾಯಿತು |
| 1761 | (2) | ಕರ್ನಲ್ ಕೂಟ್ | ,, | ಫ್ರೆಂಚರು ಇಂಡಿಯಾದಲ್ಲಿ ರಾಜ್ಯ ಸ್ಥಾಪಿಸುವ ಅನುಕೂಲ ಹೋಯಿತು. |

| | | | | | |
|---|---|---|---|---|---|
| 2751 | ತಿರ್ಚನಾಪಲ್ಲಿ ಮಹಮ್ಮದಲ್ಲಿ | (1) | ಚಂದಾಸಾಹೇಬ್ | ತಂಜಾವೂರನ್ನು ಸ್ವಾಧೀನ ಪಡಿಸಿಕೊಳ್ಳಬೇಕೆಂತಲೂ ಮಹಮದಲ್ಲಿಯನ್ನು ಕೊಲ್ಲಬೇಕೆಂತಲು ಮುತ್ತಿದನು. | ಕ್ಲೈವನ ಉಪಾಯದಿಂದ ಮಹಮದಲ್ಲಿಗೆ ಮುತ್ತಿಗೆ ಬಿಡುಗಡೆಯಾಯಿತು? |
| 1752 | ,, ಚಂದಾ ಸಾಹೇಬ | (2) | ಇಂಗ್ಲೀಷರು | ಮಹಮ್ಮದಲ್ಲಿಯನ್ನು ಮುತ್ತಿದ್ದ ಚಂದಾಸಾಹೇಬನನ್ನು ಸೋಲಿಸಬೇಕಾಗಿ, | ಚಂದಾಸಾಹೇಬನುಕೊಲ್ಲಲ್ಪಟ್ಟನು. ಮಹಮದಲ್ಲಿಯುಕರ್ನಾಟಕದನವಾಬನೆನ್ನಲ್ಪಟ್ಟನು |
| 1754 | ,, ಇಂಗ್ಲೀಷರು | (3) | ಫ್ರೆಂಚರು | ಇಂಗ್ಲೀಷರನ್ನು ಗೆದ್ದು ತಮಗೆ ಬಂದ ಕೆಟ್ಟ ಹೆಸರನ್ನು ತಪ್ಪಿಸಿಕೊಳ್ಳಬೇಕೆಂದು | ಈ ಮುತ್ತಿಗೆ 18 ತಿಂಗಳವರೆಗೆ ಇತ್ತು. ಸೋಲುಗೆಲುವುಗಳು ಗೊತ್ತಿಲ್ಲದೆಪಾಂಡಿಚೆರಿಯಲ್ಲಿ ಕರಾರಾಯಿತು |
| 1751 | ಆರ್ಕಾಟ್ ಕ್ಲೈವ್ | | ರಾಜಾ ಸಾಹೇಬ | ಆರ್ಕಾಟಿನ ರಾಜಾಸಾಹೇಬನಾದ್ದರಿಂದಾ ತನ್ನ ದೇಶವನ್ನು ಕಾಪಾಡಿ ಕೊಳ್ಳಬೇಕಾಗಿ | ರಾಜಾಸಾಹೇಬನು ಸೋತುಓಡಿಹೋದನು. |
| 1756 | ಕಲ್ಕತ್ತಾ ಇಂಗ್ಲೀಷರು | | ಸುರಾಜದ್ದೌಲ | ತನ್ನ ಅಪ್ಪಣೆಯನ್ನು ಮೀರಿ ಏವಿಯಂನ ಕೋಟೆಗಳನ್ನು ಬಲಪಡಿಸಿ ತನ್ನ ಶತ್ರುವಿಗೆ ಡ್ರೇಕೆಂಬವನು ಆಶ್ರಯ ಕೊಟ್ಟದ್ದರಿಂದಾ | ಡ್ರೇಕ ಹಡಗಿನಲ್ಲಿ ಓಡಿದನು, ಇವನನ್ನು ಹೆದರಿಸಿದ ಹಾಲ್ವೆಲ್ ಮುಂತಾದವರು ಕತ್ತಲೆ ಮನೆಯ ಕೊಲೆಗೆ ಈಡಾದರು. |
| 1759 | ಪಾಟ್ನಾ ರಾಮನಾರಾಯಣ | (1) | 2ನೇ ಷಾಅಲಂ | ಪಾಟ್ನಾವನ್ನು ತೆಗದುಕೊಳ್ಳಬೇಕಾಗಿ ಮುತ್ತಿದ | ರಾಮನಾರಾಯಣನ ಸಹಾಯಕ್ಕೆ ಕ್ಲೈವಬಂದದ್ದರಿಂದ 2 ನೇ ಷಾಅಲಂ ಓಡಿಹೋದನು. |
| 1760 | ,, | (2) | ,, | ,, | ಕೆಪ್ಟನ್ ನಾಕ್ಸ ಕರನಾರನಿಂದ 2ನೇ ಷಾಅಲಂ ಸೋತುಹೋದನು. |
| ,, | ,, | (3) | ,, | ,, | ಕರ್ನಲ್ ಕಾಲಿಯಡ್‌ನಿಂದ ,, |
| 1761 | ,, ಇಂಗ್ಲೀಷರು | (4) | ಮೀರ್ ಕಾಸಿಂ | ರಾಮನಾರಾಯಣನಿಂದ ಕಂದಾಯವನ್ನು ವಸೂಲ್ಮಾಡಿಕೊಳ್ಳುವದಕ್ಕೋಸ್ಕರ | ಇಂಗ್ಲೀಷರು ರಾಮನಾರಾಯಣಗೆ ಸಹಾಯಮಾಡಲಿಲ್ಲಾ. |

| | | | | |
|---|---|---|---|---|
| 1767 | ಅಂಬೂರು ಕೋಟೆ ಕರ್ನಲ್ ವರ್ಟ್ | ಹೈದರು | ಇಂಗ್ಲೀಷರ ಫ್ರೆಂಡೆಣಿಗೆಯಲು | ಹೈದರ್ ಸ್ಮಿತ್‌ನಿಂದ ಸೋಲಿಸಲ್ಪಟ್ಟನು. |
| 1782 | ಕಡಲೂರು ಫ್ರೆಂಚರು | ಜನರಲ್ ಸ್ಟುವರ್ಟ್ | ಪರಸ್ಪರ ದ್ವೇಷದಿಂದಾ | ಸಮಾಧಾನವಾಯಿತು |
| 1783 | ಬೆಡ್ನೂರು ಜನರಲ್ ಮಾಥ್ಯೂಸ್ | ಟೀಪು | ” | ಮಂಗಳೂರು ಸಮಾಧಾನವಾಯಿತು. |
| 1784 | ಮಂಗಳೂರು ಕರ್ನಲ್ ಕ್ಯಾಂಪಬೆಲ್ | ” | ” | ” |
| 1792 | ಶ್ರೀರಂಗಪಟ್ಣ ಟೀಪೂ (1) | ಕಾರ್ನ್‌ವಾಲೀಸ್ | ” | ಶ್ರೀರಂಗಪಟ್ಣ ಕರಾರಿನಿಂದ ನಿಂತಿತು |
| 1799 | ” (2) | ಹಾರಿಸ್ | ರಾಜ್ಯ ಸಂಪಾದಿಸಬೇಕೆಂತಾ | ಟೀಪೂ ಕೊಲ್ಲಲ್ಪಟ್ಟನು<br>ರಾಜ್ಯವು ಇಂಗ್ಲೀಷರದಾಯಿತು |
| 1804 | ಡಿಲ್ಲಿ ಕರ್ನಲ್ ಅಕ್ಟರ್ ಲೋನಿ | ಯಶವಂತರಾವ್ | ಇಂಗ್ಲೀಷರು ಮೊದಲು ಇವನಿಂದ ಸೋತಿದ್ದರಿಂದ ಈಗ ಚೆನ್ನಾಗಿ ಸೋಲಿಸಬೇಕಾಗಿ | ಯಶವಂತರಾವ್ ಅಕ್ಟರ್‌ಲೋನಿಯಿಂದ ಓಡಿಸಲ್ಪಟ್ಟನು |
| 1804 | ಡಿಗ್ ಭರತಪುರದ ರಾಜ | ಲಾರ್ಡ್‌ಲೇಕ್, | ಬಲವಂತನ ಕೋರಿಕೆಯಂತೆ | ಲೇಕ್ ಗೆದ್ದನು |
| 1805 | ಭರತ್ಪುರದ ರಾಜ (1) | ” | ” | ಲೇಕ್ ಸೋತನು |
| 1826 | ” ದುರ್ಜನ ಸಾಲ್ (2) | ಲಾರ್ಡ್ ಕೆಂಬರ್ಮಿಯರ್ | ದುರ್ಜನಸಾಲನು ಇಂಗ್ಲೀಷರ ಮೇಲೆ ಬಿದ್ದದ್ದರಿಂದ | ಬಲವಂತನಿಗೆ ಸಿಂಹಾಸನ ಬಂತು |
| 1814 | ಜೈಟಾಕ ಘೂರ್ಕರು | ಇಂಗ್ಲೀಷರು | ಇಂಗ್ಲೀಷರ ಸೀಮೆಗಳನ್ನು ಘೂರ್ಕರು ಆಕ್ರಮಿಸಿದ್ದರಿಂದಾ | ಜಿಲ್ಲೆಸ್ಪಿಯು ಕೊಲ್ಲಲ್ಪಟ್ಟನು |
| 1817 | ನಾಗಪುರ ಅಪ್ಪಾಸಾಹೇಬ | ಜನರಲ್ ಡೊವಾರ್ಟನ್ | ಅಪ್ಪಾಸಾಹೇಬನು ನಾಗಪುರದ ರೆಸಿಡೆಂಟನನ್ನು ಕೊಂದದ್ದರಿಂದಾ | ಅಪ್ಪಾಸಾಹೇಬ ಓಡಿಹೋದನು |
| 1842 | ಜಲಾಲ್‌ಬಾದ್ ಸರ್‌ರಾಬರ್ಟ್ ಸೇಲ್ | ಅಕ್ಬರ್‌ಖಾನ್ | ಇಂಗ್ಲೀಷರ ನಡತೆ ಸರಿಬೀಳದ್ದರಿಂದಾ | ಅಕ್ಬರ್‌ಖಾನ್ ಸೋತನು |
| 1849 | ಮುಲ್ತಾನ್ ಮೂಲರಾಜ | ಜನರಲ್ ವಿಷ್ಟ | ಮೂಲರಾಜನು ಮಿಸ್ಟರ್ ವಾನ್ಸ್ ಆಗ್ನ್ಯೂಯನ್ನು ಕೊಂದದ್ದರಿಂದಾ | ಪಂಜಾಬ್ ಕಂಪಿನಿಗೆ ಸೇರಿತು |

## ಮುಖ್ಯವಾದ ಧಂಗೆಗಳು.

| ಇಸವಿ | ಧಂಗೆ. | | ಅಣಗಿಸಿದವನು. | ಫಲ. |
|---|---|---|---|---|
| | ಯಾವದು. | ಯಾಕೆ ಹುಟ್ಟಿತು. | | |
| 1764 | ಶಿಪಾಯಿಗಳ ಮೊದಲನೆ ಧಂಗೆ | ಪಾಟ್ನಾಕ್ಕೆ ಹೋದ ಇಂಗ್ಲೀಷು ದಂಡಿನವರಿಗೆ ಕಂಪೆನಿಯವರು ಸಂಬಳ ಮಾತ್ರ ಕೊಟ್ಟದ್ದರಿಂದ ಬಹುಮಾನ ಬರಬೇಕಾಗಿ ಹುಟ್ಟಿತು | ಸರ್ ಹೆಕ್ಟರ್ ಮನ್ರೊ | ಎಂಟು ಮಂದಿ ಧಂಗೆಕಾರರು ಫಿರಂಗಿ ಬಾಯಿಗೆ ಕೊಡಲ್ಪಟ್ಟರು. |
| 1766 | ಯುರೋಪಿಯರ್ಣ ಆಫೀಸರುಗಳ ಧಂಗೆ | ಯುದ್ಧಕಾಲದಲ್ಲಿ ದಂಡಿನವರಿಗೆ ಸಲ್ಲುತ್ತಿದ್ದ ದುಪ್ಪಟ್ಟುಭತ್ಯದ ಮಾಮೂಲನ್ನು ತಪ್ಪಿಸಿದ್ದರಿಂದಾ | ಲಾರ್ಡ್ ಕ್ಲೈವ್ | ರಾಜೀನಾಮೆ ಕೊಟ್ಟವರನ್ನು ಕೈದಿನಲ್ಲಿಟ್ಟು ಹೊಸಬರನ್ನು ನೇಮಿಸಿದನು |
| 1799 | ಬನಾರಿಸಿನ ಧಂಗೆ | ವಿಜಯರಾಲಿಗೆ ಕೊಟ್ಟಿದ್ದ ಸಿಂಹಾಸನವನ್ನು ತಪ್ಪಿಸಿದ್ದರಿಂದ(ಚರಿಯೆಂಬ ರೆಸಿಡೆಂಟನನ್ನು ಕೊಂದನು) | ಸರ್ ಜಾರ್ಜ ಷೋರ್ | |
| 1806 | ವೇಲೂರು ಧಂಗೆ | ಹಿಂದುಗಳು ಜಾತಿ ಪದ್ಧತಿಯ ವಿಭೂತಿ ಮುಂತಾದವನ್ನು ಬಿಟ್ಟು ಟೋಪಿಗಳನ್ನು ಇಟ್ಟುಕೊಳ್ಳಬೇಕೆಂದು ಹೊಸ ಏರ್ಪಾಟು ಮಾಡಿದ್ದರಿಂದಾ | ಕರ್ನೆಲ್ ಜಿಲ್ಲೆಸ್ಪಿ | ಟೀಪೂ ಸುಲ್ತಾನನ ಮಕ್ಕಳು ಕಲ್ಕತ್ತೆಗೆ ಕಳಿಸಲ್ಪಟ್ಟರು.2 ದಂಡಿನಲ್ಲಿ ಹೊಸ ಏರ್ಪಾಡು ರದ್ದು ಮಾಡಲ್ಪಟ್ಟಿತು.3 ಪಾದ್ರಿಗಳು ಮತ ಬೋಧನೆ ಮಾಡಕೊಡದಂತಾಯಿತು. |
| 1809 | ಮದ್ರಾಸ್ ಧಂಗೆ | ಡೇರೆ ನಿಬಂಧನೆಯನ್ನು ತಳ್ಳಿಹಾಕಿದ್ದರಿಂದಾ | ಲಾರ್ಡ್ ಮಿಂಟೊ | |

| | | | | |
|---|---|---|---|---|
| 1857 | ಸಿಪಾಯಿಗಳ ದೊಡ್ಡ ದಂಗೆ | ಮಾಮೂಲಿಗೆ ವಿರೋಧವಾಗಿ ಹಂದಿ ಮತ್ತು ಹಸುವಿನ ಕೊಬ್ಬಿನ ಹೊಸ ತೋಟದ ಏನ್ ಫೀಲ್ಡ್ ಯಂಬ ಹಲಿಗೆ ತುಪಾಕಿಗಳನ್ನು ದಂಡಿನಲ್ಲಿ ಆಚರಣೆಗೆ ತಂದದ್ದರಿಂದಾ | ಸರ್ ಹೆನ್ರಿ ಲಾರೆನ್ಸ್ ಮೊದಲಾದವರು | ದೇಶವು ವಿಕ್ಟೋರಿಯ ರಾಣಿಯವರ ಕೈಕೆಳಗೆ ಇರಬೇಕು. ಬೋರ್ಡ್ ಆಫ್ ಕಂಟ್ರೋಲ್ ಮನ್ನಾ ಮಾಡಬೇಕು. |

## ಮುಖ್ಯವಾದ ಯುದ್ಧಗಳನ್ನು ವಿವರಿಸು?

| ಇಸವಿ | ಯುದ್ಧದ ಹೆಸರು | ಯುದ್ಧಕ್ಕೆ ಕಾರಣ. | | | ಏನಾಯಿತು. |
|---|---|---|---|---|---|
| | | ಯಾರು ದಂಡೆತ್ತಿದರು | ಯಾಕೆ. | ಯಾರ ಮೇಲೆ. | |
| 1791 | ಅರಿಕೆರೆ | ಕಾರ್ನವಾಲೀಸ್ | ಟೀಪೂಸುಲ್ತಾನನ ಪುಂಡತನವನ್ನಡಗಿಸುವದಕ್ಕೆ. | ಟೀಪೂ | ಟೀಪೂ ಶ್ರೀರಂಗಪಟ್ಟಣಕ್ಕೆ ಓಡಿದನು |
| 1846 | ಅಲಿವಾಲ್ | ಸರ್ ಹಾರಿಸ್ಮಿತ್ | ಸಿಕ್ಕರು ಕಂಪನಿಯ ಸೀಮೆಗಳಮೇಲೆ ದಂಡೆತ್ತಿದ್ದರಿಂದ | ದುಲಿಪ್ ಸಿಂಗ್ | ಲಾಹೋರ್ ಕರಾರಾಯಿತು. |
| 1749 | ಅಂಬೂರ್ | ಅನ್ವರುದ್ದೀನ ಮತ್ತು ಇಂಗ್ಲೀಷರು | ತಪ್ಪಿಹೋಗಿರುವ ಹೈದರಾಬಾದ್ ಸಿಂಹಾಸನವನ್ನು ಸಂಪಾದಿಸಲು | ಮುಜಾಪರ್ ಮತ್ತು ಚಂದಾಸಾಹೇಬ | ಅನ್ವರುದ್ದೀನ ಕೊಲ್ಲಲ್ಪಟ್ಟನು ಚಂದಾಸಾಹೇಬ ಕರ್ನಾಟಕದ ನವಾಬನಾದನು. |
| 1751 | ಆರಣಿ (1) | ಕ್ಲೈವ್ | ಮಹಮ್ಮದಲ್ಲಿಯ ಕೋರಿಕೆಯಂತೆ | ರಜಾಸಾಹೇಬ್ | ಫ್ರೆಂಚರ 600 ಸಿಪಾಯಿಗಳು ಕ್ಲೈವನಕಡೆಗೆ ಸೇರಿದರು. |
| 1782 | (2) | ಹೈದರ ಮತ್ತು ಫ್ರೆಂಚರು | ಇಂಗ್ಲೀಷರನ್ನು ಇಂಡಿಯಾದಿಂದ ಓಡಿಸಬೇಕಾಗಿ | ಇಂಗ್ಲೀಷರಮೇಲೆ | ಹೈದರನು ಸೋತನು. |

| | | | | | |
|---|---|---|---|---|---|
| 1775 | ಅರಾಸ್ | ಕೀಟಿಂಗ್ | ಸೂರತ್ತು ಕರಾರು ಪ್ರಕಾರ | ಮಹಾರಾಷ್ಟ್ರರು | ಇಂಗ್ಲೀಷರಿಗೆ ಸಂಪೂರ್ಣ ಜಯವಾಯಿತು, |
| 1803 | ಅಸಾಯಿ | ರಘೋಜಿ ಭೋಸ್ಲೆ ಮತ್ತು ಶಿಂಧ್ಯ | ಬೇಸೀನ್ ಕರಾರನ್ನು ಒಪ್ಪಿದರೆ ತಮ್ಮ ಸ್ವತಂತ್ರವು ನಷ್ಟವೆಂದು | ಇಂಗ್ಲೀಷರು | ಇಂಗ್ಲೀಷರಿಗೆ ಜಯವಾಯಿತು (ಜನರಲ್ ವೆಲ್ಲೆಸ್ಲಿ) |
| 1803 | ಅರ್ಗಾಂ | ,, | ,, | ,, | ,, |
| 1760 | ಉದಯಗಿರಿ | ಸಾಲಬತ್‌ಜಂಗ್ ಮತ್ತು ನೈಜಾಂ | ತಪ್ಪಿಹೋಗಿರುವ ಅಹಮದ್ ನಗರವನ್ನು ಬಿಡಿಸಿಕೊಳ್ಳಲು | ಮರಾಟಿಗರು | ನೈಜಾಂ ಸೋತು, ದೌಲತಾಬಾದ್, ಅಸೀರಘರ, ಬೀಜಾಪುರ, ಔರಂಗಾಬಾದನ್ನು ಪೇಶ್ವೆಗೆ ಕೊಟ್ಟನು. |
| 1763 | ಉದ್ವಾನಲ | ಇಂಗ್ಲೀಷರು | ಎಲಿಸ್ ಮುಂತಾದವರನ್ನು ಕೊಂದದ್ದರಿಂದಾ | ಮೀರ್‌ಕಾಶೀಂ | ಮೀರಕಾಶೀಂ ಪಾಟ್ನಾಕ್ಕೆ ಓಡಿದನು. |
| 78 | ಕರೂರು | ವಿಕ್ರಮಾದಿತ್ಯನು ಗುಪ್ತರು | ತಮಗೆ ಶತ್ರುಗಳಾದ್ದರಿಂದ | ಇಂಡೋಸಿಥಿಯರು | ಇಂಡೊಸಿಥಿಯರು ಸೋತರು ವಿಕ್ರಮಾದಿತ್ಯನ (ಕ್ರಿ) ಅಧಿಕಾರವು ಹೆಚ್ಚಿತು |
| 1774 | ಕಟ್ರಾ | ಕರ್ನಲ್ ಛಾಂಪಿಯನ್ | ಮರಾಟಿಯವರ ಕೋರಿಕೆಯಂತೆ | ರೋಹಿಲರು | ರೋಹಿಲರು ಸೋತರು |
| 1795 | ಕರಡ್ಲ | ನಾನಾಫರ್ನವೀಸ್ | ಉದಯಗಿರಿಯುದ್ಧವಾದ ಮೇಲೆ ಒಪ್ಪಿದಂತೆ ನಡಿಯಲಿಲ್ಲವಾದ್ದರಿಂದ | ನೈಜಾಂ | ನೈಜಾಂ ಸೋತು ವರ್ಷ 1ಕ್ಕೆ 31 ಲಕ್ಷ ರೂ. ಉತ್ಪತ್ತಿಯುಳ್ಳ ಸೀಮೆಯನ್ನು ಬಾಕಿಇದ್ದ ಹಗದಿಯನ್ನು ಕೊಡುವದಕ್ಕೆ ಒಪ್ಪಿದನು. |
| 1400 | ಕುರುಕ್ಷೇತ್ರ | ಪಾಂಡವರು | ದಾಯಾದಿ ಭಾಗಕ್ಕೋಸ್ಕರ | ಕೌರವರು | ಹಸ್ತಿನಾಪುರದ ರಾಜ್ಯವು ಪಾಂಡವರದಾಯಿತು. |
| 1540 | ಕನೌಜ್ | ಹುಮಾಯೂನ್ | ಬಾಕ್ಸರ ಯುದ್ಧದ ಅವಮಾನವನ್ನು ಕಳಕೊಳ್ಳಲಿಕ್ಕೆ | ಶೇರ್‌ಖಾನ್ | ಹುಮಾಯೂನ್ ಓಡಿದನು ಡಿಲ್ಲಿಯು ಶೇರ್ಖಾನ್ ದಾಯಿತು. |
| 1818 | ಕೋರೇಗಾಂ | 2 ನೇ ಬಾಜೀರಾವು | ತ್ರಿಂಬಜಿಯ ಪ್ರೇರಣೆಯಿಂದಾ | ಎಲ್ಫಿನ್‌ಸ್ಟನ್ | ಬಾಜೀರಾವ್ ಸೋತು ಪೇಶ್ವೆ ಉದ್ಯೋಗ ಕಳಕೊಂಡನು. ಪುನಹ ಇಂಗ್ಲೀಷರದಾಯಿತು. |

| | | | | | |
|---|---|---|---|---|---|
| 1765 | ಕೋರಾ | ಸೂಜಾವುದ್ದೌಲ್ | ಇಂಗ್ಲೀಷರನ್ನು ಸೋಲಿಸಬೇಕೆಂದು | ಇಂಗ್ಲೀಷರು | ಸೂಜನು ಸೋತು ಜನರಲ್ ಕರ್ನಾಕ್ ಸರದಾರಗೆ ವಿಧೇಯನಾದನು. |
| 1749 | ಗುಜರಾತ್ | ಗಾಪ್ | ಮೊದಲು ಸೋತಿದ್ದರಿಂದಾ | ಸಿಕ್ಕರು | ಸಿಕ್ಕರು. ಸೋತರು ಪಂಜಾಬು ಕಂಪೆನಿಗೆ ಸೇರಿತು. |
| 1759 | ಕಂಡೂರು | ಇಂಗ್ಲೀಷರು ಕರ್ನಲ್ ಪ್ಹೋರ್ಡ | ಫ್ರೆಂಚರನ್ನು ಓಡಿಸಬೇಕೆಂತ | ಪ್ರೆಂಚರು (ಕಂಫ್ಲಾನಸ) | ಪ್ರೆಂಚರು ಸೋತು ಉತ್ತರ ಸರ್ಕಾರಗಳಿಂದ ಓಡಿದರು. |
| 1763 | ಘೇರಿಯು | ಇಂಗ್ಲೀಷರು | ಮೀರ್ ಕಾಶಿಂನನ್ನು ಪೂರ ಸೋಲಿಸಬೇಕಾಗಿ | ಮೀರ್ ಕಾಶಿಂ | ಮೀರ್ ಕಾಶಿಂ ಪಾಟ್ನಾಕ್ಕೆ ಓಡಿದನು |
| 1759 | ಬೇಸುರ | ಡಚ್ಚರು | ಇಂಗ್ಲೀಷರುನ್ನು ಬಂಗಾಳಾದಿಂದ ಓಡಿಸುವದಕ್ಕೆ | ಇಂಗ್ಲೀಷರಮೇಲೆ | ಡಚ್ಚರಿಗೆ ಸೋಲಾಗಿ ಇನ್ನುಮೇಲೆ ದಂಡನ್ನು ಜಮಾಯಿಸಕೂಡದೆಂತ ಗೊತ್ತಾಯಿತು. |
| 1849 | ಚಿಲಿಯನ್‌ವಾಲಾ | ಇಂಗ್ಲೀಷರು ಅರ್ಡ್‌ಗಾಫು | ಮಿಸ್ಟರ್ ವಾನ್ಸು ಅಗ್ನ್ಯೂಯನ್ನು ಕೊಂದದ್ದರಿಂದ | ಸಿಕ್ಕರು | ಸಿಕ್ಕರಿಗೆ ಸಂದೇಹವಾದ ಜಯವಾಯಿತು. |
| 1781 | ಚೋಳಂಗಿಪುರ | ಇಂಗ್ಲೀಷರು | ತಾನು ಮೊದಲು ಕೇಳಿಕೊಂಡಂತೆ ಇಂಗ್ಲೀಷರು ಸಹಾಯ ಮಾಡದೆ ಹೋದ್ದರಿಂದಾ | ಹೈದರನು | ಹೈದರನು ಸೋತನು. |
| 1194 | ಚಂದಾವಾರ | ಘೋರಿಯು | ತನ್ನ ಶತೃವಾದ್ದರಿಂದಾ | ಜಯಚಂದಾ | ಜಯಚಂದ್ರ ಸತ್ತನು ಇದರಿಂದ ಬಂಗಾಳಾ ದೇಶವನ್ನು ಜೈಸಲು ಅನುಕೂಲವಾಯಿತು. |
| 1767 | ಚಂಗಮ | ಕರ್ನಲ್‌ಸ್ಮಿತ್ | ಹೈದರನ ಪುಂಡುತನವನ್ನು ನಿಗ್ರಹಿಸಲು | ಹೈದರನು | ಹೈದರನು ಸೋತನು. |
| 1817 | ಜಬ್ಬಲ್‌ಪೂರ್ | ಜನರಲ್‌ಹಾರ್ಡಿಮ್ಯಾನ್ | ಇಂಗ್ಲೀಷು ರೆಸಿಡೆಂಟನನ್ನು ಕೊಂದದ್ದರಿಂದ | ಅಪ್ಪಾಸಾಹೇಬ್ | ಅಪ್ಪಾಸಾಹೇಬ್ ಓಡಿಹೋದನು. |

| | | | | | |
|---|---|---|---|---|---|
| 327 | ಜೀಲಂ | ಅಲಕ್ಸಾಂಡರ್ | ದೇಶವನ್ನು ಜೈಸಬೇಕೆಂದು | ಪುರುಷೋತ್ತಮ | ಅಲಕ್ಸಾಂದರನಿಗೆ ಜಯವಾದರೂ ಪುರುಷೋತ್ತಮನ ಯುಕ್ತಿಗೆ ಮೆಚ್ಚಿ ದೇಶವನ್ನು ಅವನಿಗೆ ಬಿಟ್ಟನು. |
| 1565 | ತಲಿಕೋಟೆ | ಅಹಮ್ಮದನಗರ ಮುಂತಾದ ಷಾಹಿ ಅರಸರು | ಪೂರ್ವದ ದ್ವೇಷದಿಂದ | ರಾಮರಾಜನು | ರಾಮರಾಜ ಸತ್ತನು. ವಿಜಯನಗರ ರಾಜ್ಯ ನಷ್ಟವಾಯಿತು. |
| 1767 | ತಿರುನಾಮಲೆ | ಇಂಗ್ಲೀಷರು | ಹೈದರನ ಪುಂಡಡಗಿಸಲು | ಹೈದರ್ | ಹೈದರ್ ಸೋತನು. |
| 1844 | ಪನ್ನಿಯಾರು | ಜನರಲ್ ಗ್ರೇ | ತಾವು ಸೋತು ಮಾಮಾಸಾಹೇಬನನ್ನು ತೆಗದದ್ದರಿಂದ | ಗ್ವಾಲಿಯರ್ ರಾಣಿ | ಗ್ವಾಲಿಯರ್ ರಾಣಿಯು ವಿಧೇಯಳಾದಳು. |
| 1526 | ಪಾಣಿಪಟ್ಟ (1) | ಬೇಬರ್ | ದೌಲತ್‌ಖಾನ್ ಲೋಡಿಯ ಕೋರಿಕೆಯಂತೆ | ಇಬ್ರಾಹಿಂ ಲೋಡಿ | ಇಬ್ರಾಹಿಂ ಸತ್ತನು. ಡಿಲ್ಲಿಯು ಮೊಗಲರದಾಯಿತು. |
| 1536 | ,, (2) | ಹೇಮು | ಹಿಂದುಗಳ ಅಧಿಕಾರವನ್ನು ಇಂಡಿಯಾದಲ್ಲಿ ಸ್ಥಾಪಿಸಬೇಕೆಂದು | ಅಕ್ಬರ್ | ಹೇಮು ಕೊಲ್ಲಲ್ಪಟ್ಟನು ಮೊಗಲರ ಅಧಿಕಾರವು ಸ್ಥಿರಪಟ್ಟಿತು. |
| 1767 | ,, (3) | ರಘೋಬನು | ಅಬ್ದಾಲಿಯ ದೇಶವನ್ನು ತೆಕೊಳ್ಳಬೇಕೆಂದು | ಅಬ್ದಾಲಿ | ರಘೋಬನು ಸೋತನು ಮರಾಠಿಯವರು ಹಿಂದೂಸ್ಥಾನವನ್ನು ಆಳಬಹುದೆಂಬ ಆಶೆಯನ್ನು ಕಳಕೊಂಡರು. |
| 1780 | ಪಾಲಿಲೂರು (1) | ಹೈದರು | ಇಂಗ್ಲೀಷರ ಪುಂಡಡಗಿಸಬೇಕಾಗಿ | ಕರ್ನಲ್ ಬೇಲಿ | ಬೇಲಿ ಸೆರೆಹಿಡಿಯಲ್ಪಟ್ಟನು. |
| 1781 | ,, (2) | ಕೂಟ್ | ಹೈದರನ ಪುಂಡಡಗಿಸಲು | ಹೈದರ್ | ಹೈದರ್ ಸೋತನು. |
| 1001 | ಪೆಷಾವರು (1) | ಘಸ್ನಿ ಮಹಮೂದ್ | ಐಶ್ವರ್ಯವನ್ನು ಸಂಪಾದಿಸಬೇಕಾಗಿ | ಜಯಪಾಲ | ಜಯಪಾಲ ಸೋತನು. |
| 1008 | ,, (2) | ,, | ,, | ಆನಂದಪಾಲ | ಆನಂದಪಾಲ್ ಸೋತನು. ನಾಗರಕೋಟೆ ದೇವಾಲಯ ಕೊಳ್ಳೆಯಾಯಿತು. |

| | | | | | |
|---|---|---|---|---|---|
| 1801 | ಪುನಕೆ | ಯಶವಂತರಾವ್ ಹೋಲ್ಕರ್ | ತನ್ನ ವಿರೋಧಿಯಾದ್ದರಿಂದ | 2ನೇ ಬಾಜೀರಾವ್ | ಬಾಜಿರಾಯನು ಸೋತು ಇಂಗ್ಲೀಷರೊಡನೆ ಬೇಶೀ ಕರಾರುಮಾಡಿಕೊಂಡನು, |
| 1826 | ಪೇಫಾರ್ಕ | ಸರ್ ಆರ್ಚಿಬಾಲ್ಡ್ ಕೇಂಬಲ್ | ಷಹಪುರಿ ದ್ವೀಪವು ತಮ್ಮದೆಂದು ಹೇಳಿ ಅಲ್ಲಿನ ಕಾವಲಗಾರರನ್ನು ಕೊಂದದ್ದರಿಂದಾ | ಬರ್ಮಾ ಸರ್ಕಾರ | ಯಂಡಬೂ ಕರಾರಾಯಿತು. |
| 1781 | ಪೋರ್ಟೋನೋವೋ | ಸರ್ ಐರ್ ಕೂಟ್ | ಹೈದರನ ಪುಂಡೆಣಗಿಸಲು | ಹೈದರ್ | ಹೈದರ್ ಸೋತನು |
| 1757 | ಪ್ಲಾಸಿ | ಕ್ಲೈವ್ | ಮೀರ್‌ಜಾಫರನ ಕೋರಿಕೆಯಂತೆ ಕತ್ತಲೆಕೋಣೆಕೊಲೆದ್ವೇಷದಿಂದಾ | ಸುರಾಜದ್ದೌಲ | ಸುರಾಜದೌಲ ಸತ್ತನು. ಇಂಡ್ಯಾ ಧೊರೆತನವು ಇಂಗ್ಲೀಷರದಾಯಿತು. |
| 1804 | ಫರ್ಕಾಬಾದ್ | ಜನರಲ್ ಲೇಕ್ | ಯಶವಂತರಾವನು ಇಂಗ್ಲೀಷರ ಸ್ನೇಹಿತರ ರಾಜ್ಯದಲ್ಲಿ ಚೌತಾಯವನ್ನು ವಸೂಲ್ಮಾಡಿದ್ದರಿಂದಾ | ಯಶವಂತರಾವ್ ಹೋಲ್ಕರ್ | ಯಶವಂತರಾವ್ ಸೋತನು. |
| 1845 | ಫಿರೋಜಷಹರ್ | ಹಾರ್ಡಿಂಜ್ | ಕಲಹದದೇಡು ದಿಲ್ಲಿಕೊಳ್ಳೇಹೊಡೆಯಬಂದದ್ದರಿಂದ | ಸಿಕ್ಕರು | ಸಿಕ್ಕರು ವಿಧೇಯರಾಗಿ ಲಾಹೋರುಕರಾರಾಯಿತು. |
| 1539 | ಬಾಕ್ಸರ್ (1) | ಹುಮಾಯೂನ್ | ಬಂಗಾಳವನ್ನು ಸ್ವಾಧೀನಪಡಿಸಿಕೊಂಡಿದ್ದರಿಂದಾ | ಷೇರ್‌ಖಾನ್ | ಹುಮಾಯೂನ್ ಸೋತು ಓಡಿದನು. |
| 1764 | ,, (2) | ಸೂಜಾವುದ್ದೌಲ್ | ಬೇಹಾರದೇಶವನ್ನು ವಶಪಡಿಸಿಕೊಳ್ಳಬೇಕಾಗಿ | ಮನ್ರೊ | ಅಯೋಧ್ಯೆ ಇಂಗ್ಲೀಷರದಾಯಿತು |
| 1799 | ಮಳವಳ್ಳಿ | ಟೀಪೂ | ಇಂಗ್ಲೀಷರನ್ನು ಇಂಡಿಯಾದಿಂದ ಓಡಿಸಬೇಕೆಂದು | ಇಂಗ್ಲೀಷರು | ಜನರಲ್ ಹ್ಯಾರಿಸ್ ಇವನನ್ನು ಸೋಲಿಸಿದನು. |

| | | | | | |
|---|---|---|---|---|---|
| 1816 | ಮಕ್ವಾನ್‌ಪೂರ್ | ಆಕ್ಟರ್ ಲೋನಿ | ತಮ್ಮ ಯರಡುಶೀಮೆಗಳನ್ನು ತೆಗದುಕೊಂಡದ್ದರಿಂದ | ಘೂರ್ಕರು | ಶೀಗೌಳಿ ಕರಾರಾಯಿತು |
| 1844 | ಮಹಾರಾಜಪುರ | ಸರ್ ಹ್ಯೂಗಾಫ್ | ತಾವು ನೇಮಿಶಿದ್ದ ಮಾಮಾಸಾಹೇಬನನ್ನು ತೆಗದ್ದರಿಂದ | ಗ್ವಾಲಿಯರ್ ರಾಣಿ | ರಾಣಿಯು ವಿಧೇಯಳಾದಳು |
| 1843 | ಮಿಯಾನಿ | ಇಂಗ್ಲೀಷರು | ಆ ಶೀಮೆಯ ಕಮಿಷನರನ್ನು ಕೊಂದದ್ದರಿಂದಾ | ಅಮೀರರು | ಸಿಂಧು ದೇಶ ಕಂಪೆನಿಗೆ ಸೇರಿತು |
| 1845 | ಮುಡ್ಕಿ | ಸರ್ ಹ್ಯೂಗಾಫ್ | ಕಲಶದ ದಂಡು ಡಿಲ್ಲಿಯನ್ನು ಕೊಳ್ಳೆ ಹೊಡೆಯಬಂದದ್ದರಿಂದಾ | ಸಿಕ್ಕರು | ಲಾಹೋರು ಕರಾರಾಯಿತು |
| 1803 | ಲಾಸ್ವಾರಿ | ಜನರಲ್ ಲೇಕ್ | ತಾವು ಹುಟ್ಟಿಸಿದ ಬೇಶಿ ಕರಾರನ್ನು ವಪ್ಪದ್ದರಿಂದಾ | ದೌಲತರಾವ್ ಸಿಂಧ್ಯ | ಸಿಂಧ್ಯನು ಸೋತನು ಸರ್ಜಿ ಅಂಜಂಗಾಂವ್ ಕರಾರಾಯಿತು |
| 1759 | ವಂದಿವಾಸ | ಲಾಲಿ ಮತ್ತು ಬುಸ್ಸಿ | ಇಂಗ್ಲೀಷರ ಸೊಕ್ಕು ಮುರಿಯಬೇಕೆಂತ | ಸರ್ ಐರ್ ಕೂಟ್ | ಬುಸ್ಸಿಯು ಸೆರೆ ಹಿಡಿಯಲ್ಪಟ್ಟನು |
| 1720 | ಷಾಪೂರ್ | ನೈಜಾಮುಲ್‌ಮುಲ್ಕ | ಪೂರ್ವದ್ವೇಷದಿಂದಾ | ಸೈದಬ್ದುಲ್ಲ | ರಾಜಪ್ರತಿಷ್ಠಾಪಕರ ಪ್ರಾಬಲ್ಯವುಗಿಯಿತು. |
| 1555 | ಸರ್‌ಹಿಂದ್ (1) | ಹುಮಾಯೂನ್ | ತಪ್ಪಿ ಹೋಗಿದ್ದ ಸಿಂಹಾಸನವನ್ನು ಪಡಿಯಬೇಕಾಗಿ | ಸಿಕಂದರಷಹ | ಹುಮಾಯೂನ್ ಸಿಂಹಾಸನ ದೊರೆಯಿತು. |
| 1747 | ,, (2) | ಅಹಮ್ಮದಷಾಅಬ್ದಾಲಿ | ದೇಶವನ್ನು ಜೈಸಬೇಕಾಗಿ | ಮಹಮ್ಮದಷಹ | ಅಬ್ದಾಲಿ ಸೋತನು ಇದೇ ಮೊಗಲರಿಗೆ ಜಯವುಂಟಾದ ಅಖೈರ್ ಯುದ್ಧ. |
| 1799 | ಸಿದಾಸಿದುರು | ಟೀಪೂ | ಇಂಗ್ಲೀಷರ ಫಂಡೇಣಗಿಸಲು | ಜನರಲ್ ಸ್ಟೂವರ್ಟ್ | ಟೀಪೂ ಸೋತನು. |
| 1817 | ಸಿತಾಬಾಲ್ಡಿ | ಅಪ್ಪಾಸಾಹೇಬ | ದ್ವೇಷವಿತ್ತು | ಕೇಪ್ಟನ್ ಪಿಡ್ಜರಾಲ್ಡ್ | ಅಪ್ಪಾಸಾಹೇಬ ಓಡಿಸಲ್ಪಟ್ಟನು. |

| | | | | | |
|---|---|---|---|---|---|
| 1846 | ಸೋಬ್ರೆಯಾನ್ | ಸರ್ ಹ್ಯೂಗಾಫ್ | ಕಲಶದ ದಂಡು ದಿಲ್ಲಿಯನ್ನು ಕೊಳ್ಳೆ ಹೊಡೆಯಬಂದದ್ದರಿಂದಾ | ಸಿಕ್ಕರು | ಲಾಹೋರು ಕೈವಶವಾಯಿತು |
| 1191 | ಸ್ಥಾನೇಶ್ವರ (1) | ಘೋರಿ | ದೇಶವನ್ನು ಸ್ವಾಧೀನಪಡಿಸಿಕೊಳ್ಳಲು. | ಪೃಥ್ವೀರಾಜನು | ಘೋರಿ ಸೋತನು |
| 1193 | ,, (2) | ,, | ,, | ,, | ದಿಲ್ಲಿಯು ಘೋರಿದಾಯಿತು. ಪೃಥ್ವಿರಾಜ ಕೊಲ್ಲಲ್ಪಟ್ಟನು. |
| 1843 | ಹೈದರಾಬಾದ್ | ಸರ್‌ಚಾರ್ಲೆಸ್ ನೇಪಿಯರ್ | ಆ ಶೀಮೆಯ ಅಮೀರರಾದ ಮೊ. ಔಟ್ರಾಂನನ್ನು ಮುತ್ತಿದ್ದರಿಂದ | ಸಿಂಧೂದೇಶದ ಅಮೀರರು. | ಸಿಂಧು ದೇಶವು ಕಂಪೆನಿಗೆ ಸೇರಿತು. |

# ಮುಖ್ಯವಾದ ಸಂವತ್ಸರಗಳು.

| | |
|---|---|
| ಕ್ರಿ.ಪೂ.1400 | ಕುರುಕ್ಷೇತ್ರದಯುದ್ಧ |
| 600 | ತಕ್ಷಕರು ದಂಡೆತ್ತಿದ್ದು |
| 518 | ದರ್ವೇಶ್ ಗುಷ್ಟಾಸ್ಪದಂಡೆತ್ತಿದ್ದು |
| 500 | ಮನು ಸ್ಮೃತಿ ಬರೆಯಲ್ಪಟ್ಟಿತು |
| 477 | ಬುದ್ಧನು ಸತ್ತದ್ದು |
| 327 | ಅಲಕ್ಸಂದರ್ ದಂಡೆತ್ತಿದ್ದು |
| 315-195 | ಮೌರ್ಯರ ಆಳಿಕೆ |
| 315-291 | ಚಂದ್ರಗುಪ್ತ |
| 263-223 | ಅಶೋಕ |
| 56 | ವಿಕ್ರಮಾದಿತ್ಯನಶಕೆ |
| ಕ್ರಿ.ಅ. 78 | ಶಾಲಿವಾಹನಶಕೆ |
| 400 | ಫಾಹಿಯನ್ ಬಂದದ್ದು |
| 629 | ಹ್ಯೂಯನಿಸಾಂಗ್ ಬಂದದ್ದು |
| 570 | ಮಹಮದ್ ಹುಟ್ಟಿದ್ದು |
| 622 | ಹಿಜರಿಮೊದಲಾದ್ದು |
| 632 | ಮಹಮ್ಮದ್ ಸತ್ತದ್ದು |
| 711 | ಇಂಡಿಯಾಕ್ಕೆ ತುರುಕರಪ್ರಥಮ ಪ್ರವೇಶ |
| 750 | ಸಿಂಧುದೇಶ ರಾಜಪುತ್ರರಿಗೆ ಮತ್ತೆ ಸೇರಿದ್ದು |
| 975 | ಸಬಕ್ತಿಗಿನ್ ಘಸ್ನಿ ಅರಸಾದ್ದು |
| 996-1030 | ಘಸ್ನಿ ಮಹಮೂದ್ |
| 1001 | ಪಿಷಾವರಿನ ಮೊದಲನೇಯುದ್ಧ |
| 1008 | ಪಿಷಾವರಿನ 2ನೆ ಯುದ್ಧ |
| 1019 | ಘಸ್ನಿ ಮಹಮದನು 9ನೆ ಸಲದಂಡೆತ್ತಿ ಮಧುರೆಯನ್ನು ಲೂಟ್ ಮಾಡಿದ್ದು. |
| 1022 | ಘಸ್ನಿ ಮಹಮೂದನ 10ನೆ ದಂಡ ಯಾತ್ರೆ. ಲಾಹೋರ್ ಘಸ್ನಿಗೆ ಸೇರಿದ್ದು. |
| 1024 | ಘಸ್ನಿ ಮಹಮೂದನ 12ನೆ ದಂಡಯಾತ್ರೆ |
| 1191 | ಸ್ಥಾಣೇಶ್ವರದ 1ನೆಯುದ್ಧ |
| 1193 | ಸ್ಥಾಣೇಶ್ವರದ 2ನೇಯುದ್ಧ |
| 1194 | ಚಂದಾವಾರದ ಯುದ್ಧ |
| 1203 | ಮಹಮದ ಘೋರಿ ಬಂಗಾಳೆ ಜೈಸಿದ್ದು |
| 1206 | ಕುತ್ಬುದೀನ್ ಡಿಲ್ಲಿಯ ಅರಸಾದ್ದು. |
| 1206-1210 | ಕುತ್ಬುದೀನ್ |
| 1210-1211 | ಅರಾಂನ ಆಳ್ವಿಕೆ |
| 1211-2236 | ರುಕ್ನುದೀನನಆಳ್ವಿಕೆ |
| 1236-1239 | ರಜಿಯಾ |
| 1244-1266 | ನಾಸಿರುದೀನ್ (ಗುಲಾಂ) |
| 1266-1286 | ಗ್ಯಾಸುದೀನ್ (ಗುಲಾಂ) |
| 1288-1295 | ಜಲಾಲುದೀನ್ |
| 1295-1317 | ಅಲ್ಲಾವುದೀನ್ |
| 1294 | ಅಲ್ಲಾವುದ್ದೀನನ ದಕ್ಷಿಣದ ದಂಡಯಾತ್ರೆ |
| 1297 | ಅಲ್ಲಾವುದೀನ್ ಗುಜರಾತ್ ಗೆದ್ದದ್ದು. |
| 1303 | ಅಲ್ಲಾವುದೀನ್ ರಾಜಪುತಾಣ ಜೈಸಿದ್ದು |
| 1309-1311 | ಕಾಫರನದಕ್ಷಿಣದ ದಂಡಯಾತ್ರೆ. |
| 1336-1565 | ವಿಜಯನಗರ |
| 1347-1526 | ಭಾಮಿನಿರಾಜ್ಯ |
| 1399 | ತೈಮೂರ್ ದಂಡೆತ್ತಿದ್ದು |

1412 ತುಗ್ಲಾಕವಂಶದಕೊನೇಅರಸಾದಮಹಮೂದನಮರಣ
1487 ಬಾರ್ತಲೊಮ್ಯುಡೈಯಾಸ್ ಗುಡ್‌ಹೋಪ್ ಭೂಶಿರವನ್ನು ಕಂಡದ್ದು.
1494 ಅಮೆರಿಕಖಂಡ ಕಂಡದ್ದು
1498 ವಾಸ್ಕೊಡಿಗಾಮ ಕಲ್ಲಿಕೋಟೆಗೆ ಬಂದದ್ದು
1500 ಕೆಬ್ರಾಲ್ ಕಲ್ಲಿಕೋಟೆಗೆ ಬಂದದ್ದು
1508-1515 ಅಲ್ಬುಕರ್ಕ್
1510 ಅಲ್ಬುಕರ್ಕ್ ಗೋವಾ ಹಿಡಿದದ್ದು
1526 ಪಾಣಿಪಟ್ಟದ 1ನೆ ಯುದ್ಧ
1527 ಸಿಕ್ರಿ ಯುದ್ಧ
1528 ಚಂದ್ರಿಕೋಟೆಯಮುತ್ತಿಗೆ
1526-1530 ಬಾಬರ್
1530-1556 ಹುಮಾಯೂನ್ (1540-1555) ವಿನಹ
1538 ಮಹಮ್ಮದಿಯರುದಿಯೂನ್ನು ಮುತ್ತಿದ್ದು
1539 ಚಾಸ್ಸರಿನ 1ನೆ ಯುದ್ಧ
1540 ಕನೋಜಿನ ಯುದ್ಧ
1540-1555 ಸರ್ ಮನೆತನದವರು
1540-1545 ಶೇರ್‌ಖಾನನು
1542 ಅಕ್ಬರ್ ಹುಟ್ಟಿದ್ದು
1555 ಸರ್‌ಹಿಂದಿನ 1ನೆ ಯುದ್ಧ
1556-1605 ಅಕ್ಬರ್
1556 ಪಾಣಿಪಟ್ಟದ 2ನೆ ಯುದ್ಧ
1565 ತಾಳಿಕೋಟೆ ಯುದ್ಧ
1567 ಅಕ್ಬರ್‌ರಾಜಪುತ್ರರಾಣ ಜೈಸಿದ್ದು
1597 ಈಸ್ಟ್‌ಇಂಡಿಯಾ ಕಂಪೆನಿಗೆ ಸನದು ಬಂತು
1605-1627 ಜಹಾಂಗೀರ್
1611 ನೂರ್‌ಜಹಾನ್ ಮದುವೆ
1615-1618 ಸರ್‌ಟಿರೊ ರಾಯಭಾರ
1621 ಷಹಾಜಹಾನ್ ಮಲ್ಲಿಕ್‌ಅಂಬರ್‌ನನ್ನು ಗೆದ್ದದ್ದು
1623 ಅಂಬಾಯಿನಾ ದ್ವೀಪದ ಕೊಲೆ
1626 ಜಹಾಂಗೀರ್ ಸೆರೆ ಹಿಡಿಯಲ್ಪಟ್ಟದ್ದು
1627 ಜಹಾಂಗೀರ್ ಸತ್ತದ್ದು ಶಿವಾಜಿ ಹುಟ್ಟಿದ್ದು
1605-1628 ಜಹಾಂಗೀರ್
1628-1658 ಷಹಾಜಹಾನ್
1637 ಅಹಮ್ಮದನಗರ ಡಿಲ್ಲಿಗೆ ಸೇರಿದ್ದು, ಪೋರ್ಚುಗೀಸರ ಕೊಲೆ
1639 ಕಂಪನಿಗೆ ಮದ್ರಾಸ್ ಸೇರಿದ್ದು.
1640 ಫೋರ್ಟ್‌ಸೆಂಟ್ ಜಾರ್ಜ್ ಕಟ್ಟಲ್ಪಟ್ಟಿತು.
1646 ಶಿವಾಜಿ ತೋರಣಕೋಟೆ ಹಿಡಿದದ್ದು.
1656 ಹುಗ್ಲಿ ಬಳಿ ವರ್ತಕಶಾಲೆ ಕಟ್ಟಿದ್ದು.
1658 ಔರಂಗಜೇಬನು ಷಹಾಜಹಾನನು ಸಿಂಹಾಸನದಿಂದ ತಳ್ಳಿದ್ದು.
1658-1707 ಔರಂಗಜೇಬ್
1664 ಫ್ರೆಂಚರ ಈಸ್ಟ್ ಇಂಡಿಯಾ ಕಂಪೆನಿ ಹುಟ್ಟಿದ್ದು.
1666 ಷಹಾಜಹಾನ್ ಸತ್ತದ್ದು.
1668 ಬಾಂಬೆ ಕಂಪೆನಿಗೆ ಸೇರಿದ್ದು

1670 ಫ್ರೋರ್ಟಸೆಂಟ್‌ಜೇವಿಡ್ ಕಟ್ಟಿದ್ದು

1674 ಶಿವಾಜಿಪಟ್ಟಕ್ಕೆ ಬಂದದ್ದು

1676 ಸತ್ಯನಾರಾಯಣರ ಪೆಳಗೆ

1680 ಶಿವಾಜಿ ಸತ್ತದ್ದು.

1686 ಬೀಜಾಪುರ ಡಿಲ್ಲಿಗೆ ಸೇರಿದ್ದು

1687 ಗೋಲಕೊಂಡೆಡಿಲ್ಲಿಗೆ ಸೇರಿದ್ದು.

1698 ಕಲ್ಕತ್ತೆ ಕಂಪೆನಿಗೆ ಸೇರಿ ವಿಲಿಯಂ ಕಟ್ಟಿದ್ದು

1708 ಏಕೀ ಭವಿಸಿದ ಕಂಪೆನಿ ಏರ್ಪಟ್ಟದ್ದು.

107-1709 1ನೇ ಷಾ ಆಲಂ

1713-1719 ಫರುಕ್ಸಿಯರ್

1759 ವಂದಿವಾಸದ ಯುದ್ಧ

1760 ಉದಯಗಿರಿ ಯುದ್ಧ

1761 ಪಾಣಿಪಟ್ಟ 3ನೆ ಯುದ್ಧ

1748-1754 ಅಹಮ್ಮದಷಹ

1754-1759 ಆಲಂಗೀರ್

1759-1806 2ನೆಷಾ ಆಲಂ

1763 ಘೆರಿಯ್ಯಾಯುದ್ಧ ಪಾಟ್ನಾದ ಕೊಲೆ.

1764 ಬಾಕ್ಸರ್ 2ನೆ ಯುದ್ಧ. ಶಿಪಾಯಿಗಳ ಮೊದಲನೆ ಧಂಗೆ.

1765 ಕೋರಾಯುದ್ಧ

1766 ಲಾಬಿ ಸತ್ತನು. ಯೂರೋಪಿಟ್ ಆಫೀಸರ ಧಂಗೆ.

1767 ಕ್ಲೈವ್ ಆಟ್ಜೈರ್ ಸಲ ಇಂಗ್ಲಂಡಿಗೆ ಹೋದದ್ದು. ಮೈಸೂರಿನ 1ನೆ ಕಲಹ ಚಂಗಮ, ತಿರುನಾಮಲೆ, ಯುದ್ಧ, ಅಂಬೂರಿನ ಮುತ್ತಿಗೆ

1769 ಮೆದ್ರಾಸು ಕರಾರು

1772 ಜಂಟಿ ಅಧಿಪತ್ಯ ನಿಂತದ್ದು

1806-1837 ಮಹಮ್ಮದ ಬಹದುಷ್ಟಿರ್ ಷಹ

1773 ರೆಗ್ಯುಲೇಟಿಂಗ್ ಆಕ್ಟು

1775 ಸೂರತ್ತ ಕರಾರು, ಬನಾರಿಸ್ ಕಂಪೆನಿಗೆ ಸೇರಿದ್ದು.

1776 ಪುರಂದರಿನ 2ನೆ ಕರಾರು.

1779 ವಾಗಾರ್ಂ ಕರಾರು

1780 ಪಾಲಿಲೂರಿನ 1ನೆ ಯುದ್ಧ

1781 ಪಾಲಿಲೂರಿನ 2ನೆಯುದ್ಧ, ಪೋರ್ಟನೋವೊ ಶೋಳಂಗೀಪುರದ ಯುದ್ಧ

1782 ಅರಣಿಯುದ್ಧ, ಸಾಲ್‌ಬಿಕರಾರು, ಹೈದರ್ ಸತ್ತದ್ದು

1784 ಮಂಗಳೂರುಕರಾರು, ಪಿಟ್ ಕಾನೂನು.

1791 ಅರಿಕೆರೆ ಯುದ್ಧ

1792 ಶ್ರೀರಂಗಪಟ್ಟಣ ಸಮಾಧಾನ

1795 ಕರಡ್ಲದ ಯುದ್ಧ

1799 ಟೀಪೂ ಸತ್ತದ್ದು

1800 ನಾನಾಫಡ್ನವೀಸ್ ಸತ್ತದ್ದು

1801 ಫ್ರನಚೆ ಯುದ್ಧ

1802 ಬೇಸೀನ್ ಕರಾರು

1803 ಅಸ್ಸೈ, ಅಗಾರ್ಂ, ಲಾಸ್ವಾರಿ ಯುದ್ಧ ದೇವಗಾಂವ್, ಸರ್ಜಿ ಅಂಜಿಂಗಾಂವ್ ಕರಾರು,

1804 ಫರಕ್ಕಬಾದು ಡಿಗ್ ಯುದ್ಧ

1806 ವೇಲೂರು ಧಂಗೆ

1809 ಮದ್ರಾಸ್ ಧಂಗೆ

1816 ಮಕ್ವಾನ್‌ಪುರದ ಯುದ್ಧ, ಸೀಗೌಳಿ ಕರಾರು

1817 ಕಿರ್ಕಿ, ಮಹಿದಪುರ್, ಜಬ್ಬಲ್ ಪುರ ಯುದ್ಧ
1818 ಕೋರೆಗಾಂ ಯುದ್ಧ
1819 ಪಿಂಡಾರಿಗಳು ಸೋತದ್ದು
1826 ಬ್ರಹ್ಮದೇಶ ಯುದ್ಧ, ಯಾಂಡಬೂ ಕರಾರು
1833 ಮೈಸೂರು ಕಂಪೆನಿಗೆ ಸೇರಿದ್ದು.
1834 ಕೊಡಗು ಕಂಪೆನಿಗೆ ಸೇರಿದ್ದು
1743 ಸಿಂಧು ದೇಶ ಕಂಪೆನಿಗೆ ಸೇರಿದ್ದು,
1844 ಮಹಾರಾಜಪುರ ಪನ್ನಿಯರ್ ಯುದ್ಧ
1845 ಮುಡ್ಕಿ, ಫಿರೋಜ್‌ಷಹರ್ ಯುದ್ಧ.
1846 ಅಲಿವಾಲ್, ಸೋಬ್ರಾಯೋನ್ ಯುದ್ಧ.
1848 ಸುಪೆತ್ತ್ವಾಂ ಯುದ್ಧ
1849 ಪಂಜಾಬು ಕಂಪೆನಿಗೆ ಸೇರಿದ್ದು
1852 ಪೆಗ್ಗು ಕಂಪೆನಿಗೆ ಸೇರಿದ್ದು
1853 ನಾಗಪುರ ಕಂಪೆನಿಗೆ ಸೇರಿದ್ದು
1856 ಅಯೋಧ್ಯೆ ಕಂಪೆನಿಗೆ ಸೇರಿದ್ದು.
1857 ಇಂಡಿಯಾದ ಸಿಪಾಯಿಗಳ ದೊಡ್ಡ ದಂಗೆ.
1858 ಇಂಡಿಯಾ ರಾಜ್ಯವು ರಾಣಿಯವರಿಗೆ ಸೇರಿದ್ದು
1862 ಆಖೈರ್ ಮೊಗಲ್ ಚಕ್ರವರ್ತಿ ಸತ್ತದ್ದು
1868 ಕೃಷ್ಣರಾಜ ಒಡೆಯರು ಸತ್ತದ್ದು.
1876 ಪ್ರಿನ್ಸ್ ಆಫ್ ವೇಲ್ಸ್ ಇಂಡಿಯಾಕ್ಕೆ ಬಂದದ್ದು
1877 ರಾಣಿಯವರಿಗೆ ಇಂಡಿಯಾ ಚಕ್ರವರ್ತಿನಿಯೆಂಬ ಬಿರುದು ಬಂದದ್ದು.
1881 ಚಾಮರಾಜೇಂದ್ರ ಒಡೆಯರವರ ಪಟ್ಟಾಭಿಷೇಕ.
1885 ಬರ್ಮಾ ಯಿಂಗ್ಲೀಷರಿಗೆ ಸೇರಿದ್ದು
1886 ಲಾರ್ಡ್ ಡಫರಿನ್‌ಯವರು ಮೈಸೂರಿಗೆ ಬಂದಿದ್ದದ್ದು
1889 ಮೈಸೂರು ಅಂಚೆಯು ಇಂಪೀರಿಯಲ್ ಆದ್ದು.

—o—

## ಗೌರ್ನರ್ ಜನರಲ್‌ಗಳು.

| | | |
|---|---|---|
| 1 | ವಾರನ್ ಹೇಸ್ಟಿಂಗ್ಸ್ | 1774-1785 |
| 2 | ಲಾರ್ಡ್ ಕಾರ್ನವಾಲಿಸ್ | 1786-1793 |
| 3 | ಸರ್ ಜಾನ್ ಷೋರ್ | 1793-1798 |
| 4 | ಮಾರ್ಕ್ವಿಸ್ ಆಫ್ ವೆಲ್ಲೆಸ್ಲಿ | 1798-1805 |
| 5 | ಲಾರ್ಡ್ ಕಾರ್ನವಾಲಿಸ್ | 1805 |
| 6 | ಸರ್ ಜಾರ್ಜ್ ಬಾರ್ಲೋ | 1805-1807 |
| 7 | ಲಾರ್ಡ್ ಮಿಂಟೊ | 1807-1813 |
| 8 | ಲಾರ್ಡ್ ಮಾಯಿರಾ | 1813-1823 |
| 9 | ಲಾರ್ಡ್ ಅಂಹರಸ್ಟ್ | 1823-1828 |
| 10 | ಬೆಂಟಿಂಕ್ | 1828-1835 |
| 11 | ಆಕ್ಲಾಂಡ್ | 1836-1842 |
| 12 | ಎಲೆನ್ಬರೊ | 1842-1844 |
| 13 | ಹಾರ್ಡಿಂಜ್ | 1844-1847 |
| 14 | ಡಾಲ್‌ಹೌಸಿ | 1848-1856 |
| 15 | ಕ್ಯಾನಿಂಗ್ | 1856-1858 |
| 1 | ವೈಸ್‌ರಾಯ್ ಕ್ಯಾನಿಂಗ್ | 1858-1862 |
| 16 | ಎಲ್ಗಿನ್ | 1862-1863 |
| 17 | ಸರ್ ಜಾನ್ ಲಾರೆನ್ಸ್ | 1863-1869 |
| 18 | ಲಾರ್ಡ್ ಮೇಯೊ | 1869-1872 |
| 19 | ಲಾರ್ಡ್ ನಾರ್ತ್‌ಬ್ರೂಕ್ | 1872-1876 |
| 20 | ಲಾರ್ಡ್ ಲಿಟ್ಟನ್ | 1876-1880 |
| 21 | ಲಾರ್ಡ್ ರಿಪನ್ | 1880-1884 |
| 22 | ಅರ್ಲ್ ಡಫರಿನ್ | 1884,- |

THE END.